ಎಲಕ್ಟ್ರಾನಿಕ್ ಮಿಷನ್‌ಗಳನ್ನು ತರಿಸಿ ಅಳವಡಿಸಬೇಕೆಂದು ನಿಯಮ ಏನಾದರೂ ಹಾಕಿದ್ದೀರಾ ? ಮೊನ್ನೆ ತಾನೆ ತಾವು ಶೇಡಂನಲ್ಲಿ ಒಂದು ಹೊಸ ಕಾರ್ಖಾನೆಗೆ ಅಸ್ತಿಭಾರ ಶಿಲೆ ಹಾಕಿ ಬಂದಿದ್ದೀರಿ. ನಮ್ಮ ಕಾಲದಲ್ಲಿ ಕೂಡ ಮಲ್ಖೇಡೆಯಲ್ಲಿ ಅಸ್ತಿಭಾರ ಶಿಲೆ ಹಾಕಲಾಗಿತ್ತು ಇವುಗಳಿಗೆಲ್ಲಾ ಈ ಒಂದು ನಿಯಮವನ್ನು ಹಾಕಿದ್ದೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಖರ್ಗೆಯವರು ಮಂತ್ರಿಗಳಾಗಿದ್ದಾಗ ಈ ಕಾರ್ಖಾನೆಗಳಿಗೆಲ್ಲಾ ಲೈಸನ್ಸ್ ಕೊಡುವಾಗ ಏನೇನು ಕರಾರು ಹಾಕಿದ್ದಾರೆಂಬುದನ್ನು ನೋಡಬೇಕಾಗುತ್ತದೆ ಹೊಸ ಕಾರ್ಖಾನೆಗಳು ಬರುವಾಗ ಈ ನಿಯಮಗಳು ಜಾರಿಯಲ್ಲಿ ಬರಲೇ ಬೇಕೆಂಬುದು ನಮ್ಮ ಸರ್ಕಾರದ ಅಭಿಪ್ರಾಯವಾಗಿದೆಯೆಂದು ಸ್ಪಷ್ಟಪಡಿಸುತ್ತೇನೆ. ಈ ಮೊದಲು ಕೊಟ್ಟ ಲೈಸನ್ಸ್‌ಗಳನ್ನು ಸಹ ತರಿಸಿ ನೋಡಿ ನಾನು ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

FINANCIAL BUSINESS

Discussion on noting on Demands for grants for the year 1983–84

Mr. Deputy Speaker.-- Hon'ble Minister for Revenue to move Demand Nos. 48, 49,50,51 and 52.

DEMAND NO. 48 - LAND REVENUE, ETC.

Sri V.L. Patil (Minister for Revenue).--Sir, on the recommendation of the Governor, I beg to move:

"That a sum not exceeding Rs. 18,73,29,000 on Revenue Account and Rs. 21,05,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1984 in respect of "Land Revenue etc."

DEMAND No. 49 - STAMPS AND REGISTRATION

"That a sum not exceeding Rs. 2,83,00,000 on Revenue Account inclusive of the sum granted 'on account' be granted to the Government to defray the Charges which will come in course of payment during the financial year ending 31st day of March 1984 in respect of "Stamps and Registration".

DEMAND No. 50 - RELIEF ON ACCOUNT OF NATURAL CALAMITIES.

"That a sum not exceeding Rs. 5,46,00,000 on Revenue Account and Rs. 2,00,000 on Capital Account inclusive of the sum granted 'on account' be granted to the Government to deray the charges which will come in course of payment during the financial year ending 31st day of March 1984 in respect of 'Relief on Account of Natural Calamities".

DEMAND No. 51 - REHABILITATION SCHEMES

"That a sum not exceeding Rs. 45,08,000 on Revenue Account and Rs. 13,00,000 on Capital Accounts inclusive of the sum granted 'on account' be granted to the Government to defray the charges which will come in course of payment during the financial year ending 31st day of March 1984 in respect of "Rehabilitation Scheme".

DEMAND No. 52 - RELIGIOUS AND CHARITABLE INSTITUTIONS, ETC.

"That a sum not exceeding Rs. 3,40,09,000 on Revenue Account inclusive of the sum granted 'on account' be granted to the Government to defray the charges will come in course of payment during the financial year ending 31st day of March 1984 in respect of "Religious and Charitable Institutions etc."

Mr. Deputy Speaker.-- (The question was proposed) All the Demands are before the House. I call upon Sri M. Veerappa Moily, Hon'ble Leader of the Opposition to initiate the discussion.

ಶ್ರೀ ಎಂ. ವೀರಪ್ಪ ಮೊಯ್ಲಿ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮಂಡಿಸಿರುವಂತಹ ಬೇಡಿಕೆಗಳು ನಮ್ಮ ಮುಂದಿರುವಾಗ, ಇವುಗಳ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಕಂದಾಯ ಇಲಾಖೆ ನಮ್ಮ ಸರ್ಕಾರದ ಆಡಳಿತದಲ್ಲಿ ಒಂದು ಪ್ರಮುಖವಾದಂಥ ಇಲಾಖೆ ಆಗಿದೆ. ಜನಜೀವನದ ಪ್ರತಿಯೊಂದು ಹಂತದಲ್ಲಿಯೂ ಕೂಡ ಚುರುಕಾಗಿ ಕೆಲಸ ಮಾಡಿದಾಗ ಮಾತ್ರ ಸರ್ಕಾರ ಕೆಲಸ ಮಾಡುತ್ತದೆ ಮತ್ತು ಸರ್ಕಾರ ಜನರ ಒಂದು ಅವಶ್ಯಕತೆಗಳನ್ನು ಸರಿಯಾಗಿ ಪರಿಶೀಲಿಸುತ್ತದೆಂದು ನಾವು ಮನವರಿಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಯಾವಾಗ ಕಂದಾಯ ಇಲಾಖೆ ಕೆಲಸ ಮಾಡುವುದಿಲ್ಲ ಆಗ ಸರ್ಕಾರ ಕೂಡ ಕೆಲಸ ಮಾಡುತ್ತಿಲ್ಲವೆನ್ನುವುದು ಜನರ ಅಭಿಪ್ರಾಯವಾಗಿದೆ ತಾ॥ 1-1-1983ರಿಂದ ಇಲ್ಲಿಯವರೆಗೆ ಈ ಇಲಾಖೆಯ ಪ್ರಮುಖವಾದಂಥ ಸಮಸ್ಯೆಗಳ ಬಗ್ಗೆ ಇತರೇ ಇಲಾಖೆಗಳ ಸಹಾಯದಿಂದ ಏನೇನು ಕೆಲಸ ನಡೆದಿದೆ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ಈ ಕಂದಾಯ ಇಲಾಖೆಯಲ್ಲಿ ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತರುವುದರ ಮೂಲಕ ವಕ್ಕಲಿಗರು, ಗೇಣಿದಾರರು ಮತ್ತು ಕೃಷಿ-ಕಾರ್ಮಿಕರ ವಿಚಾರದಲ್ಲಿ ನಮ್ಮ ಕರ್ನಾಟಕ ರಾಜ್ಯ ಬಹಳ ಸಾಧನೆ ಮಾಡಿದೆ. ಬಹುಶಃ ನಾವು ಅನುಷ್ಠಾನ ಮಾಡಿದಂಥ ಈ ಭೂಸುಧಾರಣಾ ಕಾನೂನು ಏನಿದೆ, ಇದು ಇಡೀ ರಾಷ್ಟ್ರದಲ್ಲಿಯೇ ಅತ್ಯಂತ ಒಂದು ಪ್ರಗತಿಪರವಾದಂಥ ಕಾನೂನೆಂದು ಎಲ್ಲ ತಜ್ಞರೂ ಹೇಳಿಕೊಂಡಿದ್ದಾರೆ. ಇಂತಹ ಒಂದು ಕಾನೂನನ್ನು ಅನುಷ್ಠಾನದಲ್ಲಿ ತರತಕ್ಕಂಥ ದಿಶೆಯಲ್ಲಿ ಸುಮಾರು 21,486 ಅರ್ಜಿಗಳು ಸೆಕ್ಷನ್ 38ರ ಪ್ರಕಾರ ಬಂದಿದೆ. ಇದರಲ್ಲಿ ಸುಮಾರು 4764.22 ಎಕರೆ ಜಮೀನು ಜೂನ್ 83ರ ಒಳಗಹೆ ಬಂದಿದೆ. 5967 ಅರ್ಜಿಗಳಿಗೆ ಸಂಭಂಧಪಟ್ಟಂತೆ 2224.22 ಎಕರೆಯಷ್ಟು ಜಮೀನು ವಿತರಣೆ ಕೂಡ ಆಗಿದೆ. ಇಡೀ ಕರ್ನಾಟಕ ರಾಜ್ಯದಿಂದ 8,13,568 ಅರ್ಜಿಗಳು ಸುಮಾರು 45,26,941 ಎಕರೆ ಜಮೀನುಗಳಿಗೆ ಸಂಬಂಧಪಟ್ಟಂತೆ ಸೆಕ್ಷನ್ 48 (ಎ) ಪ್ರಕಾರ ಬಂದಿದ್ದು, ಇದರಲ್ಲಿ 8,11,700 ಅರ್ಜಿಗಳು ಸುಮಾರು 44,86,393 ಎಕರೆಗಳಿಗೆ ಸಂಬಂಧಪಟ್ಟಂತೆ ಇತ್ಯರ್ಥ ಕೂಡ ಆಗಿದೆ. ಈಗ ಉಳಿದಿರತಕ್ಕಂಥ ಅರ್ಜಿಗಳು 1568 ಮಾತ್ರ. 4,84,664 ಅರ್ಜಿಗಳಿಗೆ ಸಂಬಂಧಪಟ್ಟಂತೆ ಸುಮಾರು 20 ಲಕ್ಷದ 97 ಸಾವಿರದ 63 ಎಕರೆಗಳಷ್ಟು ಜಾಗ ಗೇಣಿದಾರರ ಪಾಲಾಗಿದೆ. ಈ ವಿಚಾರದಲ್ಲಿ ಅತಿ ಹೆಚ್ಚಿನ ಪ್ರಗತಿಯನ್ನು ಹಿಂದಿನ ಸರ್ಕಾರ ಮಾಡಿದೆ. ನಾವು ಅನೇಕ ಅರ್ಜಿಗಳನ್ನು ಇತ್ಯರ್ಥ ಮಾಡಿದ ನಂತರ ಹೈಕೋರ್ಟಿನ ಮುಂದೆ ಸಾಕಷ್ಟು ಅರ್ಜಿಗಳು ಹೋಗಿ ಅಲ್ಲಿ ಇತ್ಯರ್ಥವಾಗದೆ ನಿಂತಿವೆ. ಈ ಬಗ್ಗೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಸುಮಾರು 38,233 ರಿಟ್ ಅರ್ಜಿಗಳು ಇವೆ. ಇವುಗಳನ್ನು ತೀರ್ಮಾನ ಮಾಡಿಸಲು ಆದಷ್ಟೂ ಜಾಗ್ರತೆ ಕ್ರಮ ಕೈಗೊಳ್ಳುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದರು. ಆದರೆ ಈ ಬಗ್ಗೆ ಯಾವುದೇ ಕಾರ್ಯಕ್ರಮ ಇಷ್ಟರವರೆಗೆ ನಡೆದಿಲ್ಲ. ಮುಖ್ಯಮಂತ್ರಿಗಳು ಮುಖ್ಯನ್ಯಾಯಾಧೀಶರ ಜೊತೆ ಯಾವ ವಿಚಾರ ಮಾತನಾಡಿದರು ಅಥವಾ ಏಕೆ ಇದು ತಡವಾಗಿದೆ ಎಂಬ ವಿಚಾರ ಈಗ ನಮ್ಮ ಮುಂದಿಲ್ಲ. ಅನೇಕ ಗೇಣಿದಾರರು ಅನೇಕ ವರ್ಷಗಳಿಂದ ಕೋರ್ಟಿನ ಮುಂದೆ ತಿರುಗಾಡುತ್ತಿದ್ದಾರೆ. ಲೀಗಲ್ ಸೆಲ್ ಎಂದು ಮಾಡಿದ್ದರೂ ಸಹ ಈ ಜನರು ಬೆಂಗಳೂರುವರೆಗೆ ಬರಬೇಕಾಗುತ್ತದೆ. ತಮ್ಮ ವಕೀಲರಿಗೆ ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅನೇಕ ಭೂಮಾಲೀಕರು ಹೈಕೋರ್ಟಿನಲ್ಲಿ ರಿಟ್-ಅರ್ಜಿ ಹಾಕಿದ ಕೂಡಲೇ ಈ ಗೇಣಿದಾರರನ್ನು ವಕ್ಕಲೆಬ್ಬಿಸುವಂತಹ ಪ್ರಕಾರಣ ನಡೆದಾಗ ನಾವು ಅಧಿಕಾರದಲ್ಲಿದ್ದಾಗ ಇಂತಹ ಬಡ ಗೇಣಿದಾರರಿಗೆ ಸಾಕಷ್ಟು ರಕ್ಷಣೆ ಕೊಡುವುದರ ಮೂಲಕ ಜಮೀನು ಅವರ ಸ್ವಾಧೀನದಿಂದ ತಪ್ಪದಂತೆ ನೋಡಿಕೊಂಡಿದ್ದೇವೆ. ಆದರೆ ಈಗ ಪರಿಸ್ಥಿತಿ ಸ್ವಲ್ಪ ಬದಲಾವಣೆಯಾಗುತ್ತಿದೆ. ಅನೇಕ ಕಡೆಗಳಲ್ಲಿ ಯಾವ ಮಾಜಿ ಭೂಮಾಲೀಕರು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾರೆ, ಅಂತಹವರು ತಮ್ಮ ಗೇಣಿದಾರರಿಂದ ಬಲಾತ್ಕಾರದಿಂದ ಜಮೀನನ್ನು ತಮ್ಮ ಸ್ವಾಧೀನಕ್ಕೆ ಪಡೆಯುತ್ತಿರುವುದಷ್ಟೇ ಅಲ್ಲ, ಅತಿಕ್ರಮಣ ಪ್ರವೇಶ ಕೂಡ ಮಾಡುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಗೇಣಿದಾರರ ಮನೆಗಳಿಗೆ ಪ್ರವೇಶ ಮಾಡುವುದು ಹಾಗೂ ಅವರ ಮನೆಗಳಿಗೆ ಬೆಂಕಿ ಇಟ್ಟು ಅವರ ಸಂಸಾರವನ್ನೇ ಭಸ್ಮ ಮಾಡತಕ್ಕಂಥ ಕೆಲಸದಲ್ಲಿ ಸಫಲರಾಗಿರುವುದನ್ನು ನಾವು ಕಂಡಿದ್ದೇವೆ. ಇಂತಹ ಗೇಣಿದಾರರಿಗೆ ರಕ್ಷಣೆ ಕೊಡಲು ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಗೇಣಿದಾರರಾಗಿ ಕೆಲಸ ಮಾಡುತ್ತಿದ್ದವರಿಗೆ ಸರ್ಕಾರದಿಂದ ಪಟ್ಟಾ ಕೂಡ ಸಿಕ್ಕಿದೆ. ಇಂತಹವರ ಜಮೀನುಗಳಿಗೆ ಮಾಜಿ ಭೂಮಾಲೀಕರು ಬೇಲಿ ಹಾಕುತ್ತಿದ್ದಾರೆ. ಬಲಾತ್ಕಾರದಿಂದ ಜಮೀನಿನೊಳಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಇಂತಹವರ ಸ್ವಾಧೀನದಿಂದ ಜಮೀನನ್ನು ತಪ್ಪಿಸಲು ಅನೇಕ ಕಡೆಗಳಲ್ಲಿ ಪ್ರಯತ್ನ ನಡೆದಿದೆ. ಇಂತಹ ಪ್ರಕರಣಗಳಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಬೇಕಾಗುತ್ತದೆ. ಸರ್ಕಾರ ಗೇಣಿದಾರರ ಪರವಾಗಿದೆ ಮತ್ತು ಗೇಣಿದಾರರ ರಕ್ಷಣೆ ಮಾಡಲು ಸರ್ಕಾರ ಸಿದ್ಧವಿದೆ ಎಂದು ಮಾನ್ಯ ಕಂದಾಯ ಮಂತ್ರಿಗಳಾಗಲೀ ಅಥವಾ

ಮಾನ್ಯ ಮುಖ್ಯಮಂತ್ರಿಗಳಾಗಲೀ ಒಂದು ಹೇಳಿಕೆ ಕೊಟ್ಟಿಲ್ಲ. ಯಾವುದೇ ಸದಸ್ಯರಾಗಲೀ ಪ್ರಭಲವಾಗಿ ರತಕ್ಕ ಜಿಲ್ಲೆಗಳಿಗೆ ಹೋಗಿ ಗೇಣಿದಾರರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುತ್ತೇವೆ, ಮತ್ತು ಅವರಿಗೆ ರಕ್ಷಣೆ ಕೊಡುತ್ತೇವೆ ಎನ್ನುವ ಹೇಳಿಕೆಯನ್ನು ನಿಮ್ಮ ಏಳು ತಿಂಗಳ ಅಧಿಕಾರಾವಧಿಯಲ್ಲಿ ಯಾರೂ ಕೊಟ್ಟಿಲ್ಲ. ಎಲ್ಲವನ್ನು ಅಧಿಕಾರಿಗಳ ಮೇಲೆ ಬಿಟ್ಟು ತಟಸ್ಥರಾಗಿರುತ್ತೀರಿ. ಎಲ್ಲವನ್ನು ಅಧಿಕಾರಿಗಳ ಮೇಲೆ ಬಿಟ್ಟರೆ ಅವರು ಹಸ್ತಕ್ಷೇಪ ಮಾಡಬಹುದು. ಅವರು ಕೂಡ ಏನು ಕೆಲಸ ಮಾಡದೇ ತಟಸ್ಥರಾಗಿದ್ದಾರೆನ್ನುವ ದೂರುಗಳು ಕೆಲವೆಡೆಗಳಿಂದ ಬಂದಿದೆ. ಯಾವುದೇ ಕಾನೂನನ್ನು ಅಧಿಕಾರಿಗಳಿಂದ ಪಾಲನೆ ಮಾಡುವುದಕ್ಕೆ ಬಿಟ್ಟರೆ ಫಲ ಪಡೆಯತಕ್ಕ ಕೆಲಸವಾಗುವುದಿಲ್ಲ. ಇಂತಹ ಕಾನೂನುಗಳು ಪ್ರಜಾಪ್ರಭುತ್ವದಲ್ಲಿ ಆಯಾ ರಾಜಕೀಯ ಪಕ್ಷಗಳ ಸರ್ಕಾರ ಇರತಕ್ಕ ಪಕ್ಷದ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿಕೊಂಡಿರುತ್ತದೆ; ಇಚ್ಛಾಶಕ್ತಿಯನ್ನು ಪ್ರಕಟಪಡಿಸುವುದಿಲ್ಲ. ರಕ್ಷಣೆ ಕೊಡತಕ್ಕ ಒಂದು ಮನೋವೃತ್ತಿ ತೋರಿಸುವ ಅಂತಹ ಪ್ರಗತಿಪತವಾದ ಕಾನೂನುಗಳು ಕಡತದಲ್ಲಿ ಇರಲಿ, ಚರ್ಚೆಯಲ್ಲಿರಲಿ, ಕಾನೂನನ್ನು ಸರಿಯಾದ ರೀತಿಯಲ್ಲಿ, ಸಮಾಜದ ಆರ್ಥಿಕಪರಿಸ್ಥಿತಿಯನ್ನು ಅರಿತು ಅದಕ್ಕನುಗುಣವಾಗಿ ಅನುಷ್ಠಾನದಲ್ಲಿ ತರುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ತಮ್ಮ ಮುಖೇನ ಈ ಸಾರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ದಿನಾಂಕ 1-1-1983ರಿಂದ ಭೂಸಮಿತಿಗಳಿಂದ ಈ ಸರ್ಕಾರ ಯಾವುದೇ ಸಾಧನೆಯನ್ನು ಮಾಡಿಲ್ಲ. ನೀವು ಅಧಿಕಾರಕ್ಕೆ ಬಂದು 7 ತಿಂಗಳುಗಳಾದರೂ ಭೂನ್ಯಾಯಮಂಡಳಿಗಳನ್ನು ಇತ್ತೀಚೆಗೆ ಮಾಡಿದ್ದೀರಿ. ಇನ್ನು ಅನೇಕ ಕಡೆಗಳಲ್ಲಿ ಭೂನ್ಯಾಯಮಂಡಳಿಗಳನ್ನು ಮಾಡಬೇಕು, ಭೂಸಮಿತಿಗಳಲ್ಲಿ ಎಷ್ಟು ಪ್ರಮುಖವಾದ ಕೆಲಸಕಾರ್ಯಗಳನ್ನು ಮಾಡಬಹುದು. ಆದರೆ, ನೀವು ಅದರ ಬಗ್ಗೆ ಒಂದು ಇಂಚು ಕೂಡ ಮುಂದುವರಿದಿಲ್ಲ. ಸಾಧನೆಯಂತೂ ಇಲ್ಲವೇ ಇಲ್ಲ. ಭೂನ್ಯಾಯ ಮಂಡಳಿಗಳನ್ನು ಮಾಡಿ ಗೇಣಿದಾರರನ್ನು ರಕ್ಷಣೆ ಮಾಡುತ್ತೇವೆ ಎಂದು ನೀವು ಹೇಳುವುದಾದರೆ, ಈ ಬಗ್ಗೆ ನೀವು ಯಾವುದೇ ರೀತಿಯಲ್ಲಿ ಗೇಣಿದಾರರ ಪರವಾಗಿ ಬೇರೆ ಬೇರೆ ಹಂತಗಳನ್ನು ತೆಗೆದುಕೊಂಡು ನಿಮ್ಮ ಕೆಲಸ ಒಡಮೂಡಿ ಬಂದಿಲ್ಲವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಭೂನ್ಯಾಯಮಂಡಳಿಗಳನ್ನು ಮಾಡಿದ್ದೀರಿ, ನಾನು ಎಲ್ಲರ ಮೇಲೆ ಆಪಾದನೆಗಳನ್ನು ಮಾಡಲಿಕ್ಕೆ ಹೋಗುವುದಿಲ್ಲ. ಭೂನ್ಯಾಯ ಮಂಡಳಿಗಳಲ್ಲಿ ಅನೇಕ ಸದಸ್ಯರ ಮೇಲೆ ಆಪಾದನೆಗಳಿವೆ, ಅದನ್ನು ತಾವು ತನಿಖೆ ಮಾಡಿದ್ದೀರಾ? ಅನೇಕ ಭೂನ್ಯಾಯ ಮಂಡಳಿಗಳನ್ನು ರದ್ದುಗೊಳಿಸುವ ಕಾರ್ಯಕ್ರಮವಿದೆ, ಅನೇಕ ಸದಸ್ಯರನ್ನು ವಜಾ ಮಾಡುವ ತೀರ್ಮಾನವಿದೆ, ಅದನ್ನು ತಾವು ಮಾಡಿದ್ದೀರಾ? ಈಗ ಭೂನ್ಯಾಯಮಂಡಳಿಗಳಿಗೆ ಸದಸ್ಯರನ್ನು ಹಾಕಿದ್ದೀರಿ ಅವರು ಭೂಮಾಲೀಕರ ಪರವಾಗಿ ಇದ್ದಾರೆ. ಭೂಸುಧಾರಣಾ ಮಸೂದೆ ಇದೆ, ಅದು ನಮ್ಮ ಪಕ್ಷದ ಮಸೂದೆ ಅಲ್ಲ, ಈ ಸದನದ ಎಲ್ಲಾ ಸದಸ್ಯರ ಒಪ್ಪಿಗೆಯನ್ನು ಪಡೆದಂಥ ಮಸೂದೆ, ಅದನ್ನು ಅನುಷ್ಠಾನಕ್ಕೆ ತರುವ ದಿಶೆಯಲ್ಲಿ ಪ್ರಾಮಾಣಿಕವಾದ ಜನರನ್ನು ತಾವು ಭೂಸುಧಾರಣೆಯಲ್ಲಿ ಆಸಕ್ತಿಯಿರತಕ್ಕವರನ್ನು ಹಾಕಬೇಕು. ಇವತ್ತು ನೀವು ಅಲ್ಲಿ ಹಾಕಿರತಕ್ಕಂತಹ ಜನಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ, ಮುಂದೆ ಬರತಕ್ಕ ಅನಾಹುತಗಳನ್ನು ಈಗಲೇ ಪರಿಗಣಿಸಿ ಯಾವ್ಯಾವ ವ್ಯಕ್ತಿಗಳಿಗೆ ಏನೇನು ಆಸಕ್ತಿ ಇಲ್ಲ ಅದನ್ನು ಅರಿತುಕೊಂಡು, ಒಳ್ಳೆಯ ವ್ಯಕ್ತಿಗಳನ್ನು ಸಮಿತಿಗಳಲ್ಲಿ ಹಾಕಿ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವೆಲ್ಲವುಗಳ ಬಗ್ಗೆ ಪುನರ್ ವಿಮರ್ಶೆ ಮಾಡತಕ್ಕ ಅವಶ್ಯಕತೆ ಇದೆ. ಭೂಸುಧಾರಣೆಯ ಬಗ್ಗೆ ತಮಗೆ ಒಂದು ವಿಚಾರವನ್ನು ತಿಳಿಸುತ್ತೇನೆ. ಕೃಷಿ ಕಾರ್ಮಿಕರು ಗುಡಿಸಲುಗಳನ್ನು ಹಾಕಿಕೊಂಡು ಬಂದಿದ್ದಾರೆ, ಆ ಗುಡಿಸಲುಗಳನ್ನು ಹಾಕಿರತಕ್ಕಂತಹ ಜಾಗ ಎಷ್ಟೇ ವಿಸ್ತೀರ್ಣವಿರಲಿ ಆ ಜಾಗವನ್ನು ಕೃಷಿ ಕಾರ್ಮಿಕರಿಗೆ ಕೊಡತಕ್ಕಂತಹ ಕೆಲಸ ನಿಮ್ಮ ಸರ್ಕಾರ ಬಂದಾಗಿನಿಂದ ಆಗಿಲ್ಲ. ಇದರ ಬಗ್ಗೆ ಅನೇಕ ಕಡೆಗಳಿಂದ ಬಂದಂತಹ ಅರ್ಜಿಗಳು ಕೂಡ ಬಹಳ ಕಡಿಮೆ. ಇನ್ನೂ ಅನೇಕ ಜನಗಳು ಅರ್ಜಿ ಕೊಡುವವರು ಇದ್ದಾರೆ. ಅವರು ಅನೇಕ ರೀತಿಯ ಹೆದರಿಕೆಗಳಿಂದ ಅರ್ಜಿ ಕೊಟ್ಟಿಲ್ಲ. ಮಾರ್ಚಿ 31ನೇ ತಾರೀಖು ಕೊನೆಯ ದಿನಾಂಕವೆಂದು ನಿಗದಿಪಡಿಸಿದ್ದರಿಂದ ಅವರು ಹೆದರಿಕೊಂಡು ಅರ್ಜಿ ಕೊಟ್ಟಿಲ್ಲ. ತಾಲ್ಲೂಕು ಕಛೇರಿಗಳಲ್ಲಿ ಕುಳಿತುಕೊಂಡು ಯೋಚನೆ ಮಾಡಿದರೆ ಆಗುವುದಿಲ್ಲ. ಭೂಸುಧಾರಣಾ ಕಾಯಿದೆಯನ್ನು ಅನುಷ್ಠಾನದಲ್ಲಿ ತರುವುದು ಇದ್ದರೆ ತಮ್ಮ ಅಧಿಕಾರಿಗಳು ಆಯಾಯ ಗ್ರಾಮಗಳಿಗೆ ಹೋಗಿ ಅವರ ಅರ್ಜಿಗಳನ್ನು ಸ್ವೀಕರಿಸಿ, ಅದರ ಜೊತೆಗೆ ಪೂರ್ತಿಯಾದ ರಕ್ಷಣೆ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಈ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳದೆ ನೀವು ತಹಶೀಲ್ದಾರ್‌ರವರನ್ನು ನಂಬಿಕೊಂಡು ಇದ್ದರೆ ಇದು ಖಂಡಿತವಾಗಿಯೂ ಆಗುವುದಿಲ್ಲವೆಂದು ಹೇಳುತ್ತೇನೆ. ಕಾಲಾವಧಿಯನ್ನು ಕನಿಷ್ಠ 1 ವರ್ಷವಾದರೂ ಮುಂದುವರಿಸಿ. ಯಾರು ಅರ್ಜಿ ಕೊಟ್ಟಿದ್ದಾರೆ, ಯಾರು ಅರ್ಜಿ ಕೊಡುವವರು ಇದ್ದಾರೆ ಅಂತಹವರಿಗೆ ಸಂಪೂರ್ಣ ರಕ್ಷಣೆ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ. ಭೂಸುಧಾರಣೆಯಲ್ಲಿಯೇ ಇನ್ನೊಂದು ಪ್ರಾಮುಖ್ಯವಾದ ವಿಚಾರವೇನೆಂದರೆ ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡತಕ್ಕದ್ದು. ಇದರಲ್ಲಿ ತಾವು ಒಂದು ಇಂಚು ಭೂಮಿಯನ್ನು ಯಾರಿಂದಲೂ ತೆಗೆದುಕೊಂಡು ಯಾರಿಗೂ ಕೊಟ್ಟಿಲ್ಲ. ನಾನು ಅನೇಕ ಕಡೆಗಳಲ್ಲಿ ಪ್ರವಾಸ ಹೋದಾಗ ಹೆಚ್ಚುವರಿ ಭೂಮಿ ಇದ್ದರೂ ಭೂಮಾಲೀಕರೇ ಡಿಕ್ಲರೇಷನ್ ಕೊಟ್ಟು ಅವರೇ ಭೂಮಿಗೆ ಪ್ರವೇಶ ಮಾಡುತ್ತಿದ್ದಾರೆ. ನಾವು ಕೊಡಿಸಿದಂತಹ ಭೂಮಿಯನ್ನು ಅವರು

ಸಾಗುವಳಿ ಮಾಡುತ್ತಿದ್ದರು ಅಂತಹವರಿಗೆ ಪಟ್ಟಾ ಕೊಡುವ ವ್ಯವಸ್ಥೆ ಆಗಿಲ್ಲ, ದುರ್ಬಲವರ್ಗದವರಿಗೆ ಕೊಡಿಸಿದಂತಹ ಭೂಮಿಯನ್ನು ನಿಮ್ಮ ಸರ್ಕಾರ ಬಂದಮೇಲೆ ಅವರನ್ನು "ಎತ್ತಂಗಡಿ" ಮಾಡುವಂತಹ ಪ್ರಯತ್ನ ನಡೆದಿದೆ, ಅವರಿಗೆ ರಕ್ಷಣೆ ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು. ಸೀಲಿಂಗ್ ನಿಗದಿ ಪಡಿಸಿದ್ದಾರೆ ಅದರ ವಿತರಣೆ ಮಾಡಬೇಕಾಗಿದೆ, ಈ ಕೆಲಸದಲ್ಲಿ ಕೂಡ ಇವತ್ತಿನವರೆಗೆ ಏನೂ ಕೆಲಸ ಆಗಿಲ್ಲ.

ಇನ್ನು ಬಡವರಿಗೆ ಮತ್ತು ದುರ್ಬಲವರ್ಗದವರಿಗೆ ಮನೆ ನಿವೇಶನ ಕೊಡತಕ್ಕ ವಿಚಾರದಲ್ಲಿ ಭೂಸ್ವಾಧೀನ ಮಾಡುತ್ತೀರಿ. ಇವತ್ತು ಅನೇಕ ಕಡೆಗಳಲ್ಲಿ ನೋಡಿದಾಗ ಎಲ್ಲಿಯೂ ಕೂಡ ಬಡವರಿಗೆ ನಿವೇಶನ ಕೊಟ್ಟಿದ್ದನ್ನು ಇದುವರೆಗೆ ನೋಡಲಿಲ್ಲ. ಬಡವರಿಗೆ ನಿವೇಶನ ಕೊಡಬೇಕೆಂದು ಭೂಸ್ವಾಧೀನ ಮಾಡಿರುವ ಕಡೆಗಳಲ್ಲಿ ನನಗೆ ತಿಳಿದಮಟ್ಟಿಗೆ ಎಲ್ಲಾ ಕಡೆ ಕೂಡ ಡಿ ನೋಟೀಫಿಕೇಶನ್ ಆಗಿವೆ. ಫೈನಲ್ ನೋಟೀಫಿಕೇಶನ್ ಆದಮೇಲೂ ಕೂಡ ಡಿ ನೋಟೀಫಿಕೇಶನ್ ಆಗಿವೆ. ಕನಕಪುರ ತಾಲ್ಲೂಕಿನ ಚಿಕ್ಕನಹಳ್ಳಿಯಲ್ಲಿ 12 ಹರಿಜನರಿಗೆ ಮನೆ ನಿವೇಶನ ಕೊಡಬೇಕೆಂದು ಭೂಮಿ ಸ್ವಾಧೀನಮಾಡಿಕೊಂಡಿದ್ದು ಇನ್ನೇನು ಬಡವರಿಗೆ ನಿವೇಶನ ಕೊಡಬೇಕೆನ್ನುವಷ್ಟರಲ್ಲಿ, ಅಂದರೆ ದಿನಾಂಕ 28–2–83ರಲ್ಲಿ, ಆ ಜಾಗವನ್ನು ಪುನಃ ಬೆಂಗಳೂರು ಜಿಲ್ಲಾಧಿಕಾರಿಗಳು ಡಿ ನೋಟೀಫಿಕೇಶನ್ ಮಾಡಿ ಭೂಮಾಲೀಕರಿಗೆ ಆ ಜಾಗವನ್ನು ಕೊಡತಕ್ಕಂತಹ ಪ್ರಯತ್ನ ನಡೆದಿದೆ. ಹರಿಜನರಿಗೆ ಹೈಕೋರ್ಟ್ ಪಂಚಾಗ ತೋರಿಸುತ್ತಾರೆ. ಹಿಂದಿನ ಸರ್ಕಾರ ಕೊಟ್ಟಂತಹ ಭೂಮಿಯನ್ನು ಬಿಟ್ಟರೆ ತಾವು ಹೊಸದಾಗಿ ಅಧಿಕಾರ ವಹಿಸಿಕೊಂಡ ಮೇಲೆ ಬಡವರಿಗೆ ಮನೆ ನಿವೇಶನ ಕೊಡತಕ್ಕಂತಹ ವ್ಯವಸ್ಥೆ ಎಲ್ಲೂ ಆಗಿಲ್ಲ. ಹಿಂದೆ ಕನಕಪುರ ತಾಲ್ಲೂಕಿನಲ್ಲಿ ಬಡವರಿಗೆ ನಿವೇಶನ ಕೊಡಬೇಕೆಂದು ಭೂಸ್ವಾಧೀನ ಮಾಡಿಕೊಂಡು ಆ ಭೂಮಿಯನ್ನು ಭೂಮಾಲೀಕರಿಗೆ ಕೊಟ್ಟಿದ್ದಾರೆ. ಭೂಸ್ವಾಧೀನದ ಬಗ್ಗೆ ಅನೇಕ ಅರ್ಜಿಗಳು ಹೈಕೋರ್ಟಿನಲ್ಲಿವೆ, ಬಡವರಿಗೆ ಮನೆ ನಿವೇಶನ ಕೊಡತಕ್ಕಂತಹ ವ್ಯವಸ್ಥೆ ಆಗಬೇಕು. ಎಲ್ಲಿ ಬಡಜನರಿಗೆ ಪಟ್ಟಾ ಕೊಟ್ಟಿದೀರಿ ಅಂತಹ ಭೂಮಿಗಳನ್ನು ಬಿಡಿಸತಕ್ಕ ದೌರ್ಜನ್ಯ ಅನೇಕ ಕಡೆಗಳಲ್ಲಿ ನಡೆಯುತ್ತಿದೆ.

1–30 p.m.

ಮಾನ್ಯ ಅಧ್ಯಕ್ಷರೇ ಈ ಘಟನೆ ನಡೆದಂಥ ಜಾಗದಲ್ಲಿ ಅಂದರೆ ದಾಸನಪುರ ಹೋಬಳಿ ಬೊಮ್ಮಸಂದ್ರ ಗ್ರಾಮ, ನೆಲಮಂಗಲ ತಾಲ್ಲೂಕು, ಇಲ್ಲಿ ಹಿಂದೆ ನಮ್ಮ ಸರ್ಕಾರವಿದ್ದಾಗ ಸರ್ಕಾರಿ ಜಮೀನು ಅಂದರೆ ಗೋಮಾಳದ ಜಮೀನು ಸರ್ವೆ ನಂಬರು 8ರಲ್ಲಿ ಜೂನ್ 16ನೇ ತಾರೀಖು 1975ನೇ ಇಸವಿಯಲ್ಲಿ ಸುಮಾರು 250 ಹರಿಜನ ಕುಟುಂಬಗಳಿಗೆ ನಾವು ಸೈಟುಗಳನ್ನು ಕಲ್ಪಿಸಿಕೊಟ್ಟಿದ್ದೆವು. ಅದೂ 25ನೇ ಸ್ವಾತಂತ್ರ್ಯೋತ್ಸವದ ವಾರ್ಷಿಕೋತ್ಸವ ಸಮಾರಂಭದಲ್ಲಿ ನಾವು ಸೈಟುಗಳನ್ನು ಹಂಚಿಕೆ ಮಾಡಿದ್ದೆವು. ಮತ್ತು ನಾವು ಅವರಿಗೆ ಹಕ್ಕುಪತ್ರಗಳನ್ನು ಕೂಡಾ ಕೊಟ್ಟಿದ್ದೆವು. ಈ 250 ಸೈಟುಗಳಲ್ಲಿ ಸುಮಾರು 12 ಹರಿಜನರು ಮನೆಗಳನ್ನು ಸಹ ಕಟ್ಟಿಕೊಂಡಿದ್ದಾರೆ. ಈಗ ಅಲ್ಲಿ ಆ 12 ಜನ ವಾಸ ಮಾಡುತ್ತಿದ್ದಾರೆ. ಆದರೆ 1983ನೇ ಇಸವಿ 14ನೇ ಆಗಸ್ಟ್‌ನಲ್ಲಿ ನಿಮ್ಮ ಸರ್ಕಾರ ಆ 12 ಜನ ಕಟ್ಟಿಕೊಂಡಿದ್ದ ಮನೆಗಳನ್ನು ಕೆಡವಿ ಹಾಕಿದ್ದಾರೆ. ಮತ್ತು ಇನ್ನು ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡುತ್ತಿದ್ದ ಹರಿಜನ ಮತ್ತು ಗಿರಿಜನ ಕುಟುಂಬಗಳ ಮನೆಗಳಿಗೆ ಬೆಂಕಿಯನ್ನು ಹಚ್ಚಿದ್ದಾರೆ. ಆ ಎಲ್ಲಾ ಗುಡಿಸಲುಗಳನ್ನು ಅವರು ಸುಟ್ಟುಹಾಕಿ ಭಸ್ಮ ಮಾಡಿದ್ದಾರೆ. ಆದರೆ ಈಗಅವರ ಏನೂ ಇಲ್ಲದೆ ನಿರ್ಗತಿಕರಾಗಿದ್ದಾರೆ. ಅವರಿಗೆ ಯಾರೂ ದಿಕ್ಕು ಇಲ್ಲ. ಮತ್ತೆ ಕೆಲವು ಜನ ಹರಿಜನರನ್ನು ಮೇಲ್ವರ್ಗದವರು ಹೊಡೆದು ಹಿಂಸೆ ಮಾಡಿದ್ದಾರೆ. ಕೆಲವರಿಗೆ ಮಚ್ಚಿನಿಂದ ಏಟು ಸಹ ಬಿದಿದ್ದೆ. ಆದರೆ ಇಷ್ಟೆಲ್ಲಾ ಗಲಭೆ ನಡೆದಾಗ ಅವರು ಪೋಲೀಸಿನವರಿಗೆ ದೂರು ಕೊಡಲು ಹೋದಾಗ ಅವರನ್ನು ಮಧ್ಯದಲ್ಲಿ ಅಡ್ಡಗಟ್ಟಿ ಬಸ್ಸಿನಿಂದ ಕೆಳಗೆ ಇಳಿಸಿಕೊಂಡು ಬಂದಿದ್ದಾರೆ. ಅವರನ್ನು ಬೆದರಿಸಿ ಭಯವನ್ನು ಹುಟ್ಟಿಸಿದ್ದಾರೆ. ಆದ್ದರಿಂದ ಅವರು ದೂರು ಕೊಡಲಿಕ್ಕೂ ಸಹಬಟ್ಟಿಲ್ಲ. ಆ ನಂತರ ಅವರು ತಪ್ಪಿಸಿಕೊಂಡು ಹೋಗಿ ದೂರು ಕೊಟ್ಟಿದ್ದಾರೆ, ಆ ನಂತರ ಅವರು ಬಂದು ಏನೋ ಒಂದು ರೆಕಾರ್ಡ್ ಮಾಡಿಕೊಂಡು ಹೋಗಿದ್ದಾರೆ. ನಿಮಗೆ ಏನಾದರೂ ರಕ್ಷಣೆ ಬೇಕಾದರೆ ಬಂದು ತಿಳಿಸಬೇಕೆಂದು ಹೇಳಿ ಹೊರಟು ಹೋಗಿದ್ದಾರೆ. ಮತ್ತೆ ಅಲ್ಲಿನ ಎಸ್. ಪಿ.ಯವರಿಗೆ ಹೋಗಿ ತಿಳಿಸಿದರೆ ಅವರು ಹೇಳುತ್ತಾರೆ ನಾವು ಎರಡೂ ತಂಡದವರ ಮೇಲೆ ಕೇಸ್ ಹಾಕುತ್ತೇವೆಂದು ಹೇಳಿದ್ದಾರೆ. ಆದರೆ ಮೊದಲು ಕೇಸ್ ಹಾಕಿದ್ದು ಈ ಹರಿಜನರ ಮೇಲೆ. ಆ ನಂತರ ಎಷ್ಟೋ ದಿವಸಗಳಿಗೆ ಆ ಗುಂಪಿನವರ ಮೇಲೆ ಕೇಸ್ ಹಾಕಿದ್ದಾರೆ. ಈ ರೀತಿಯ ಅನ್ಯಾಯವನ್ನು ನಿಮ್ಮ ಸರ್ಕಾರ ಮಾಡುತ್ತಿದೆ. ಆದ್ದರಿಂದ ತಾವು ಸ್ವಲ್ಪ ಬಿಗಿಯಾದ ಕ್ರಮವನ್ನು ತೆಗೆದುಕೊಂಡು ಹರಿಜನ ಮತ್ತು ಗಿರಿಜನರ ರಕ್ಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ; ಅಲ್ಲಿ ಗಲಾಟೆಯಾದ್ದರಿಂದ ಬಹಳ ಜನ ಹರಿಜನರಿಗೆ ಪೆಟ್ಟು ಬಿದ್ದು ಅವರು ಆಸ್ಪತ್ರೆಯಲ್ಲಿ ಕೂಡ ಇದ್ದಾರೆ. ಅದಕ್ಕೆ ಬೇಕಾದಂಥ ದಾಖಲೆಗಳು ಕೂಡ ಇವೆ. ಮತ್ತೆ ಸುಮಾರು 10–12 ಜನ ಹರಿಜನರನ್ನು ಪೋಲೀಸ್‌ನವರು ಅರೆಸ್ಟ್ ಮಾಡಿಕೊಂಡು ಹೋಗಿದ್ದಾರೆ. ಅವರನ್ನು ಅರೆಸ್ಟ್ ಮಾಡಿಕೊಂಡು ಹೋಗಿ ಮಾಜಿಸ್ಟ್ರೇಟ್‌ರವರ ಮುಂದೆ ಹಾಜರ್‌ಪಡಿಸಿ ನಂತರ ಬಿಡುಗಡೆ ಮಾಡಿದ್ದಾರೆ. ಈ ರೀತಿಯ ಹಿಂಸೆಯನ್ನು ನಿಮ್ಮ ಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ಕೊಡುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಹರಿಜನ ಮತ್ತು ಗಿರಿಜನರಿಗೆ

ಈ ಸರ್ಕಾರ ಯಾವುದೇ ರೀತಿಯ ರಕ್ಷಣೆ ಕೊಡುತ್ತಿಲ್ಲ. ಮತ್ತು ಮುಂದೆ ನಮಗೆ ರಕ್ಷಣೆ ಕೊಡುತ್ತಾರೆ ಎನ್ನುವ ನಂಬಿಕೆ ಕೂಡ ಜನ ಕಳೆದುಕೊಂಡಿದ್ದಾರೆ. ಮತ್ತೆ ಆಂಜನಪ್ಪ ಎನ್ನುವ ಒಬ್ಬ ವ್ಯಕ್ತಿ ಹಿಂಸೆಗೆ ಒಳಗಾಗಿ ಆತನು ಕೂಡ ಆಸ್ಪತ್ರೆ ಸೇರಿದ್ದಾನೆ. ಇದೆಲ್ಲಾ ನೋಡಿದಾಗ ನಮಗೆ ಏನು ಅನಿಸುತ್ತದೆ ಎಂದರೆ 1983ನೇ ಇಸವಿ ಆಗಸ್ಟ್ 15ನೇ ತಾರೀಖಿಗೆ ಜನತಾ ಸರ್ಕಾರದವರು ಹರಿಜನ ಮತ್ತು ಗಿರಿ ಜನರಿಗೆ ಕೊಟ್ಟ ಕೊಡುಗೆ ಎಂದು ನಾವು ಹೇಳಬೇಕಾಗುತ್ತದೆ. ಅಲ್ಲಿನ ಕೆಲವು ಜನರಿಗೆ ಹಕ್ಕು ಪತ್ರಗಳನ್ನು ಕೊಟ್ಟಿದ್ದರೂ ಕೂಡ ಅವರಿಗೆ ಈ ರೀತಿಯ ಕಿರುಕುಳವನ್ನು ಕೊಡುತ್ತಿರುವುದರಿಂದ ಮಾನ್ಯ ಮಂತ್ರಿಗಳು ಈ ಕಡೆ ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದುವರೆಗೂ ಕೂಡ ಅವರಿಗೆ ಬೇಕಾದಂಥ ರಕ್ಷಣೆ ಸಿಕ್ಕಿಲ್ಲ. ಅಲ್ಲಿರತಕ್ಕಂತ ಒಬ್ಬ ವಿ. ಪಿ. ಮೆಂಬರ್ ಅವರಿಗೆ ತಿನ್ನುವುದಕ್ಕೆ ಅನ್ನ ಕೂಡ ಇಲ್ಲ, ಅಂಥ ಒಬ್ಬ ಬಡ ವಿ, ಪಿ. ಮೆಂಬರ್‌ಗೆ ಆ ಜಮೀನನ್ನು ಕೊಡಬೇಕೆಂದು ಇವರು ಈ ಪಿತೂರಿಯನ್ನು ನಡೆಸುತ್ತಿದ್ದಾರೆ. ಆ ವಿ. ಪಿ. ಮೆಂಬರ್‌ಗೆ ಸುಮಾರು 1 ಲಕ್ಷ ರೂಪಾಯಿಗಳ ಬೆಲೆ ಬಾಳುವಂಥ ಸರ್ವೆತೋಪು ಇದೆ. ಸುಮಾರು 7 ಎಕರೆ ತರಿ ಜಮೀನು ಇದೆ. ಮತ್ತೆ 10 ಎಕರೆ ಖುಷ್ಕಿ ಜಮೀನು ಇದೆ. ಮತ್ತು ಒಂದು ಅಂಗಡಿ ಇದೆ. ಮತ್ತೆ ಅವರ ಇಬ್ಬರು ತಮ್ಮಂದಿರು ಬಿ. ಇ. ಎಲ್. ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ; ಮತ್ತೆ ಒಬ್ಬರು ಬಿ, ಇ. ಎಲ್, ಸೊಸೈಟಿಯ ಸೆಕ್ರೆಟರಿಯಾಗಿದ್ದಾರೆ. ಮತ್ತೆ ಬಹಳ ಕಡಿಮೆ ಎಂದರೆ 15 ಲಕ್ಷ ಇಟ್ಟಿಗೆ ಸುಡುವಂಥ ಇಟ್ಟಿಗೆ ಗೂಡು ಇದೆ. ಅದರಿಂದ ಲಕ್ಷಾಂತರ ರೂಪಾಯಿಗಳು ಬರುತ್ತದೆ. ಅಂಥ ಒಬ್ಬ ಬಡವರಿಗೆ ಈ 250 ಜನ ಹರಿಜನರು ವಾಸ ಮಾಡುವಂಥ ಜಾಗವನ್ನು ಕೊಡಬೇಕೆಂದು ಮಾಡಿದ್ದಾರೆ. ಇದು ಜನತಾ ಸರ್ಕಾರ ಮಾಡುವಂಥ ಒಳ್ಳೆಯ ಕೆಲಸ. ಇದೇ ರೀತಿಯ ಕೃತ್ಯಗಳು ರಾಜ್ಯದ ನಾನಾ ಕಡೆಗಳಲ್ಲಿ ನಡೆಯುತ್ತಿವೆ. ಇತ್ತೀಚೆಗೆ ನಡೆದಂಥ ಒಂದು ಘಟನೆಯ ಬಗ್ಗೆ ನಾನು ಪತ್ರಿಕೆಯಲ್ಲಿ ಕೂಡ ಹೇಳಿದ್ದೇನೆ. ಆದರೂ ಕೂಡ ಸರ್ಕಾರ ಅದಕ್ಕೆ ಯಾವ ಪ್ರತಿಕ್ರಿಯ ಕೂಡ ಸರ್ಕಾರದಿಂದ ಬರಲಿಲ್ಲ. ಇದಕ್ಕೆ ಕಾರಣವೇನು ಎನ್ನುವ ವಿಷಯವನ್ನು ತಿಳಿದುಕೊಳ್ಳುವ ಗೋಜಿಗೆ ಕೂಡ ಸರ್ಕಾರ ಹೋಗಲಿಲ್ಲ. ಸುಮಾರು 30 ವರ್ಷಗಳಿಂದ ಹರಿಜನರು ಸಾಗುವಳಿ ಮಾಡಿಕೊಂಡು ಬರುತ್ತಿದ್ದ ಜಮೀನನ್ನು ಅತಿಕ್ರಮ ಮಾಡಿ ಸರ್ಕಾರದಿಂದ ಅವರು ಶಿಫಾರಸ್ ಮಾಡಿಸಿಕೊಂಡು ಅವರು ಬೆಳೆದಿದ್ದ ರೇಷ್ಮೆ ಬೆಳೆಯನ್ನು ನಾಶ ಮಾಡಿದ್ದಾರೆ. ಆದರೆ ಇದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಇಂಥ ಮನೋಭಾವನೆ ಹರಿಜನ ಮತ್ತು ಗಿರಿಜನರ ಮೇಲೆ ಸತತವಾಗಿ ಬೆಳೆದುಕೊಂಡು ಬರುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಸುಮಾರು 30 ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡುತ್ತಿದ್ದ ಹರಿಜನ ಕುಟುಂಬದವರಿಗೆ ಬೇಕಾದಷ್ಟು ಕಿರುಕುಳ ಕೊಟ್ಟು ಅವರ ಬಾವಿಯ ಮೇಲೆ ಕೆರೆಯ ನೀರನ್ನು ನುಗ್ಗಿಸಿ ಹಾಳುಮಾಡಿದ್ದಾರೆ. ಅವರು ಹಾಕಿಕೊಂಡಿದ್ದ ಬೇಲಿಗೆ ಬೆಂಕಿ ಹಚ್ಚಿದ್ದಾರೆ. ಅವರನ್ನು ಅಲ್ಲಿಂದ "ಎತ್ತಂಗಡಿ" ಮಾಡಿಸಬೇಕೆಂದು ಇಷ್ಟೆಲ್ಲಾ ಪ್ರಯತ್ನ ಮಾಡಿದ್ದಾರೆ. ಅವರು ಸಂಪೂರ್ಣವಾಗಿ ನಿರ್ನಾಮವಾಗಿ ಹೋಗಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹರಿಜನರು ಮತ್ತು ಹಿಂದುಳಿದ ವರ್ಗದವರು ಅಲ್ಲಿ ನೆಮ್ಮದಿಯಿಂದ ಸಾಗುವಳಿ ಮಾಡಿಕೊಂಡು ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ದಾಸನಪುರ ಹೋಬಳಿಯ ಬೊಮ್ಮಸಂದ್ರ ಗ್ರಾಮ ಹರಿಜನ ಮತ್ತು ಗಿರಿಜನರ 250 ಕುಟುಂಬಗಳಿಗೆ ಸೈಟ್ ಕೊಡುವಂಥ ವ್ಯವಸ್ಥೆ ಮಾಡಿ ಅವರಿಗೆ ಕೂಡಲೆ ಹಕ್ಕು ಪತ್ರವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಆದರೆ ಒಟ್ಟಿನಲ್ಲಿ ನಾನು ಹೇಳುವುದಾದರೆ ಜನತಾ ಸರ್ಕಾರಕ್ಕೆ ಅಧಿಕಾರ ಸಿಕ್ಕಿದ ಮೇಲೆ ಅವರು ಸಾಧಿಸಿರುವ ಸಾಧನೆಯ ಫಲಿತಾಂಶವನ್ನು ನೋಡಿದರೆ ಜಿರೋ ಪರ್ಸೆಂಟ್ ಎಂದು ಧಾರಾಳವಾಗಿ ಹೇಳಬಹುದು.

ಹಿಂದೆ ಇದ್ದಂಥ ಸಾಧನೆಯನ್ನು ಉಳಿಸಿಕೊಂಡು ನೆಮ್ಮದಿಯಿಂದ ಇರತಕ್ಕ ಅವಕಾಶ ಈಗ ಇಲ್ಲ. ರೆವಿನ್ಯೂ ಇಲಾಖೆಯ ಮೇಲೆ ಸರ್ಕಾರಕ್ಕೆ ಸರಿಯಾದ ಹಿಡಿತ ಇಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅಧ್ಯಕ್ಷರೇ, ಇತ್ತೀಚೆಗೆ ಬರಗಾಲದ ವಿಚಾರದಲ್ಲಿ ಪ್ರವಾಹ ಪೀಡಿತರಿಗೆ ಅನುಕೂಲವನ್ನು ಒದಗಿಸುವಲ್ಲಿ ಕೂಡ ಈ ಸರ್ಕಾರ ಪೂರ್ತಿಯಾಗಿ ವಿಫಲವಾಗಿದೆ. ತಮ್ಮ ಹೆಚ್ಚಿನ ಕಾಲವನ್ನು ಕೇಂದ್ರ ಸರ್ಕಾರವನ್ನು ದೂರಲಿಕ್ಕೆ ವಿನಿಯೋಗ ಮಾಡಿದರೇ ಹೊರತು, ಕೇಂದ್ರ ಸರ್ಕಾರವನ್ನು ಆಪಾದನೆ ಮಾಡಲಿಕ್ಕೆ ಪ್ರಯತ್ನ ಮಾಡಿದರೇ ವಿನಹ, ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ಪಡೆದುಕೊಳ್ಳುವ ಬಗ್ಗೆ ಸಂಪೂರ್ಣವಾದ ಪ್ರಯತ್ನ ಸರಿಯಾದ ನಿಲುವಿನಲ್ಲಿ ಆಗಲೇ ಇಲ್ಲ. ಮೆಮೊರಾಂಡಮ್ ಕಳಿಸಿದ ಮಾತ್ರಕ್ಕೇ ಜವಾಬ್ದಾರಿ ಮುಗಿಯಲಿಲ್ಲ. ಮೆಮೊರಾಂಡಮನ್ನು ಇಲ್ಲಿಂದ ಕಳಿಸಿಕೊಟ್ಟ ಮೇಲೆ ಸ್ಟಡಿ ಟೀಮನ್ನು ತಕ್ಷಣ ಅವರು ಕಳಿಸಿಕೊಟ್ಟರು. ಅವರು ಇಲ್ಲಿ ಪರಿಶೀಲನೆ ಮಾಡಿ ತಮ್ಮ ವರದಿಯನ್ನು ಕೊಟ್ಟರು. ಅದರ ಆಧಾರದ ಮೇಲೆ 21-22 ಕೋಟಿ ರೂಪಾಯಿವರೆಗೆ ಖರ್ಚು ಮಾಡಬಹುದು ಎಂದು ಹೇಳಿ ಸೀಲಿಂಗನ್ನು ಕೂಡ ಕೊಟ್ಟಿದ್ದಾರೆ. ಅದರಂತೆ 22 ಕೋಟಿ ರೂಪಾಯಿವರಿಗೆ ಖರ್ಚು ಮಾಡಬಹುದು. ಇದರಲ್ಲಿ 15 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಈಗ ನಾನು ಫೈನಾನ್ಷಿಯಲ್ ಕೋಡನ್ನು ಪ್ರತ್ಯೇಕವಾಗಿ ವಿವರಿಸಲಿಕ್ಕೆ ಹೋಗುವುದಿಲ್ಲ. ಅವರು

ಮಾಡಿದಂಥ ಖರ್ಚು, ಇದರ ಬಗ್ಗೆ ಸಾಕಷ್ಟು ವಾದವಿವಾದ ಬಂದಿದೆ. ತಾವು ಹೇಳಿದ್ದೀರಿ, ಈ ಸದನದಲ್ಲಿ ಮುಖ್ಯಮಂತ್ರಿಯವರು ಹೇಳಿದ್ದಾರೆ. ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಈಗ ರಾಜ್ಯದಲ್ಲಿ ಬರಗಾಲ ತೀವ್ರ ಸ್ವರೂಪವನ್ನು ತಾಳಿದೆ, ಕೇಂದ್ರ ಸರ್ಕಾರದವರು ಈಗ ಸ್ಟಡಿ ಟೀಮನ್ನು ಕಳಿಸಿಕೊಡಬೇಕೆಂದು ಹೇಳಿದ್ದೀರಿ. ಸ್ಟಡಿ ಟೀಮ್ ಫೆಬ್ರವರಿ 17ರಿಂದ 22ರಲ್ಲಿ ಬಂದಿದೆ. ಮೆಮೊರಾಂಡಮ್ ರಿವೈಸ್ ಮಾಡಿದ ಮೇಲೆ, ಅದರ ಪರಿಣಾಮವಾಗಿ ತಾವು ಏನು ಕೆಲಸ ಕಾರ್ಯಗಳನ್ನು ಯಾವ ದಿಸೆಯಲ್ಲಿ ಕೈಗೊಂಡಿದ್ದೀರಿ ? ಈ ಪ್ರಶ್ನೆ ಬಹಳ ಮುಖ್ಯವಾದದ್ದು. ಸ್ಕೇರ್‌ಸಿಟಿ ಹೆಡ್ಸ್ ಅಂತ ಇದೆ, ಲೆಕ್ಕಾಚಾರದಲ್ಲಿ ಅವರು ಇಂತಿಂಥ ಇಲಾಖೆಯಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಪರಿಶೀಲನೆ ಮಾಡುತ್ತಾರೆಯೋ ಹೊರತು ಕೇಂದ್ರ ಸರ್ಕಾರ ಸಾಮಾನ್ಯವಾಗಿ ಇರತಕ್ಕಂಥ ಬಡ್ಜೆಟ್ ಹೆಡ್ಸ್‌ನಲ್ಲಿ ಅಥವಾ ಎನ್‌ಆರ್‌ಇಪಿಯಲ್ಲಿ ಖರ್ಚು ಮಾಡಿದ ಹಣವನ್ನು ಸ್ಕೇರ್‌ಸಿಟಿಯಲ್ಲಿ ಸೇರಿಸುವುದಿಲ್ಲ. ಸ್ಕೇರ್‌ಸಿಟಿಗೆ ಖರ್ಚು ಮಾಡಿದ ವಿವರ ತಮ್ಮಲ್ಲಿದೆ. ಅದನ್ನು ಸ್ವಲ್ಪ ವಿವರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಮಗೆ ಗೊತ್ತಿದೆ ಸ್ಕೇರ್‌ಸಿಟಿಗೆ ಸಂಬಂಧಪಟ್ಟ ಹಣವನ್ನು ಡೆಪ್ಯುಟಿ ಕಮೀಷನರ್ ಮುಖಾಂತರ ಖರ್ಚು ಮಾಡುತ್ತಾರೆ. ಬರಗಾಲ ಯಾವ ಪ್ರಮಾಣದಲ್ಲಿದೆ, ಎಷ್ಟು ಹಣ ಖರ್ಚು ಮಾಡಬೇಕಾಗಿದೆಯೆಂದು ಹಣವನ್ನು ಖರ್ಚು ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮೀಷನರ್ ಅವರಿಗೆ ಕೊಟ್ಟಾಗ ಮಾತ್ರ ಈ ಬರಗಾಲದ ಸವಾಲನ್ನು ಸಮರ್ಪಕವಾಗಿ ಎದುರಿಸಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ತಾವು ಖರ್ಚು ಮಾಡಿದ್ದು 1-1-83ರಿಂದ 31-3-83ರ ವರೆಗೆ 2.34 ಕೋಟಿ ರೂಪಾಯಿಗಳು. ಅಂದರೆ ಏಪ್ರಿಲ್ 83ರಿಂದ ಜುಲೈ 83ರವರೆಗೆ ಡಿ.ಸಿ. ಮುಖಾಂತರ ಖರ್ಚು ಮಾಡಿದ್ದು 6.90 ಕೋಟಿ ರೂಪಾಯಿಗಳು. ಇದರ ಅರ್ಥ ಏನಾಗುತ್ತದೆ ಎಂದರೆ ತಾವು ಜಿಲ್ಲಾಧಿಕಾರಿಗಳ ಮುಖಾಂತರ ಜನವರಿ ತಿಂಗಳಿನಿಂದ ಜುಲೈ ತಿಂಗಳವರೆಗೆ ಸುಮಾರು ಒಂಬತ್ತು ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಆದರೆ ಎಷ್ಟು ತ್ವರಿತವಾಗಿ ಈ ಬರಗಾಲದ ಕೆಲಸ ಆಗಬೇಕೋ, ಅದು ಆಗಿಲ್ಲ. ಎಲ್ಲಾ ಸದಸ್ಯರ ಅನುಭವ ಕೂಡ ಇದೇ ಆಗಿದೆ. ನಾನು ರಾಜ್ಯದ ಅನೇಕ ಕಡೆ ಪ್ರವಾಸ ಹೋಗಿ ನೋಡಿಕೊಂಡು ಬಂದಿದ್ದೇನೆ. ಎಲ್ಲರೂ ಹೇಳುವುದು ಏನೂ ಕೆಲಸ ಆಗಿಲ್ಲವೆಂದು ಹೇಳುವುದೇ ಆಗಿದೆ. ಜನರು ಕೆಲಸಕ್ಕಾಗಿ ಮಹಾರಾಷ್ಟ್ರದ ಕಡೆಗೆ ವಲಸೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಎಲ್ಲಾ ಕಡೆಯಲ್ಲೂ ಹಾಹಾಕಾರ ಎದ್ದಿರುವಾಗ ಪತ್ರಿಕೆಗಳಲ್ಲಿ ಮಾತ್ರ 68 ಕೋಟಿ, 78 ಕೋಟಿಯ ವಿವರಗಳು ಬರುತ್ತಿವೆ. ನಿಮ್ಮ ಲೆಕ್ಕದ ಪ್ರಕಾರ ಜನವರಿ 1ರಿಂದ ಮಾರ್ಚ್ 31ರವರೆಗೆ 6 ಕೋಟಿ 80 ಲಕ್ಷ ಮತ್ತು ಏಪ್ರಿಲ್ 15ನೇ ತಾರೀಖಿನಿಂದ ಜುಲೈವರೆಗೆ ಖರ್ಚು ಮಾಡಿದ ಹಣ 16 ಕೋಟಿ 13 ಲಕ್ಷ ರೂಪಾಯಿಗಳು. ಅಂದರೆ ಒಟ್ಟು 23.43 ಕೋಟಿ ರೂಪಾಯಿಗಳನ್ನು ಸ್ಕೇರ್‌ಸಿಟಿ ಹೆಡ್‌ನಲ್ಲಿ ಖರ್ಚು ಮಾಡಿದ್ದೀರಿ. ಇನ್ನು ಬಾಕಿ ಲೆಕ್ಕ ಹಾಕಿದ್ದೀರಿ. ಎನ್.ಎಚ್.ನಲ್ಲಿ 29.06 ಕೋಟಿ ಮತ್ತು ಎನ್‌ಆರ್‌ಇಪಿ ಯಲ್ಲಿ 19.89 ಕೋಟಿ ರೂಪಾಯಿಗಳು, ಆದರೆ ಬರಗಾಲ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಖರ್ಚು ಮಾಡಿದ ಬಾಬುಗಳಲ್ಲಿ ಆಗಿರುವ ಖರ್ಚು 23 ಕೋಟಿ ಮಾತ್ರ. ಇಷ್ಟು ಮಾತ್ರವನ್ನು ಖರ್ಚು ಮಾಡಿ ಇವತ್ತು 78 ಕೋಟಿ ರೂಪಾಯಿ ಬರಗಾಲ ಬಾಬತ್ತಿನಲ್ಲಿ ಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದೀರಿ. ಇದು ಸಹಜವಾಗಿದೆಯೇ ? ಇದು ಪೂರ್ತಿಯಾಗಿ ಕೇಂದ್ರ ಮತ್ತು ರಾಜ್ಯದ ಸಂಬಂಧದ ವಿಚಾರದಲ್ಲಿ ತಾವು ಇದನ್ನು ಒಂದು ರಾಜಕೀಯ ವೇದಿಕೆಯನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೀರಿ. ಆದರೆ ಕರ್ನಾಟಕ ರಾಜ್ಯದ ಜನರ ಹಿತಾಸಕ್ತಿಗಾಗಿ ಯಾವ ಪ್ರಾಮಾಣಿಕ ಪ್ರಯತ್ನವನ್ನೂ ಕೂಡ ಮಾಡಿಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಸ್ಕೇರ್‌ಸಿಟಿ ಹೆಡ್ಸ್‌ನಲ್ಲಿ ತಾವು ಮೊನ್ನೆ ಪ್ರಶ್ನೆ ಕೇಳತಕ್ಕಂಥ ಸಂದರ್ಭದಲ್ಲಿ ಕೂಡ ಉತ್ತರ ಕೊಟ್ಟಿದ್ದೀರಿ. ನಾವು ಪುನಃ ಅಕೌಂಟ್ಸ್ ಕಳಿಸುತ್ತೇವೆ ಎಂದು ಹೇಳಿದ್ದೀರಿ. ಯಾವ ಆಕೌಂಟ್ಸ್ ಕಳಿಸಿದ್ದೀರಿ ? ಬರಗಾಲ ಪರಿಸ್ಥಿತಿ ತೀವ್ರವಾಗಿರುವಾಗ ಇನ್ನೊಂದು ಸ್ಟಡಿ ಟೀಮನ್ನು ತರಿಸಿ ಹೆಚ್ಚಿನ ಹಣ ಕೇಳುವುದರಲ್ಲಿ ಈ ಸರ್ಕಾರ ವಿಫಲವಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಯಾವ ತೀವ್ರ ಮಟ್ಟದ ಬರಗಾಲವನ್ನು ಕರ್ನಾಟಕ ರಾಜ್ಯ ಸರ್ಕಾರ ಎದುರಿಸುತ್ತಿದೆ, ಇದನ್ನು ತಾವು ಸರಿಯಾಗಿ ಕೇಂದ್ರ ಸರ್ಕಾರದ ಗಮನಕ್ಕೆ ತಂದು, ಸ್ಟಡಿ ಟೀಮನ್ನು ಕಳಿಸಬೇಕು, 15 ಕೋಟಿ ನೀಡಿದ್ದು ಸಾಕಾಗುವುದಿಲ್ಲ ಎಂದು ಇನ್ನು 78 ಕೋಟಿ ರೂಪಾಯಿ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೀರಿ. ಇದರ ಬಗ್ಗೆ ಕೇಂದ್ರ ಅಧ್ಯಯನ ತಂಡವನ್ನು ತರಿಸಿ ಪರಿಶೀಲನೆ ಮಾಡಿಸಿದ್ದರೆ ನಿಮ್ಮ ಪ್ರಾಮಾಣಿಕತನವನ್ನು ಮೆಚ್ಚಬಹುದಾಗಿತ್ತು. ಈ ಸರ್ಕಾರ ಜನತೆಯನ್ನು ರಾಜಕೀಯ ಸಂತ್ರಸ್ತರನ್ನಾಗಿ ಮಾಡತಕ್ಕಂಥ ಈ ದೊಡ್ಡ ಕುಹಕವನ್ನು ತೀವ್ರವಾಗಿ ಖಂಡಿಸಬೇಕಾಗಿದೆ. ಇದು ನಾನು ಬೇರೆ ಒಂದು ಪಕ್ಷಕ್ಕೆ ಸೇರಿದ ವ್ಯಕ್ತಿಯಾಗಿ ಹೇಳುತ್ತಿಲ್ಲ.

ಸ್ಕೇರ್‌ಸಿಟಿ ಕಂಡೀಷನ್‌ಗೆ ನಾವು ಏನು ಹಣವನ್ನು ಖರ್ಚು ಮಾಡುತ್ತೇವೆ, ಇದಕ್ಕಾಗಿ ಹೆಚ್ಚಿನ ಸಹಾಯ ಕೇಂದ್ರ ಸರ್ಕಾರದಿಂದ ಬರುತ್ತಿತ್ತು. ಅದು ಬಂದಾಗ ಹೆಚ್ಚಿನ ಕೆಲಸವನ್ನು ತೆಗೆದುಕೊಂಡು, ಅದರ ಒಂದು ಸಹಾಯದಿಂದ ಕರ್ನಾಟಕ ರಾಜ್ಯದ ಬರಗಾಲ ಪೀಡಿತ ಜನರ ಹಿತರಕ್ಷಣೆಯನ್ನು ಕಾಯ್ದುಕೊಳ್ಳುವುದರಲ್ಲಿ ಸಂಪೂರ್ಣವಾಗಿ ಈ ಸರ್ಕಾರ ವಿಫಲವಾಗಿದೆ. ನಿಮ್ಮ ಈ ರಾಜಕೀಯ ದೊಂಬರಾಟ

ದಲ್ಲಿ ಕರ್ನಾಟಕ ಜನರನ್ನು ಬಲಿ ಕೊಡತಕ್ಕಂತಹ, ಹಾಗೂ ಒತ್ತೆ ಇಡತಕ್ಕಂತಹ ಈ ಕೆಲಸ ಏನಿದೆ ಇದು ಸಾಧ್ಯವಾದುದಲ್ಲ ಎಂಬ ಮಾತನ್ನು ತಮ್ಮ ಮುಖೇನ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಪ್ರವಾಹ ಪೀಡಿತ ವಿಚಾರ ತಮಗೆ ಗೊತ್ತಿದೆ. ಈ ರೀತಿಯ ಪ್ರವಾಹ ಕರ್ನಾಟಕ ರಾಜ್ಯದಲ್ಲಿ ಆಗಾಗ್ಗೆ ಬರುತ್ತಿದೆ. ಕಳೆದ ವರ್ಷ ಉಡುಪಿ ಹಾಗೂ ಕುಂದಾಪುರ ತಾಲ್ಲೂಕುಗಳಲ್ಲಿ ಈ ಒಂದು ಪ್ರವಾಹ ಬಂದಾಗ ಅಲ್ಲಿಗೆ ಬೇಕಾದಂತಹ ಎಲ್ಲ ಕಾರ್ಯಕ್ರಮಗಳನ್ನೂ ಕೂಡ ನಾವು ಕೈಗೊಂಡಿದ್ದೆವು. ಇದರ ಜೊತೆಗೆ ಆಗ ಇದ್ದಂತಹ ಕೆಲವು ಸರ್ಕಾರದ ಕಾನೂನುಗಳನ್ನು ಕೂಡ ಸಡಿಲಿಸಿ ಬಿಟ್ಟಿದ್ದೆವು. ಇದಕ್ಕಾಗಿ ಇರತಕ್ಕಂತಹ ಅನೇಕ ಸರ್ಕಾರಿ ಹುಕ್ಕುಂಗಳನ್ನೂ ಕೂಡ ತಿದ್ದುಪಡಿ ಮಾಡಿದ್ದೆವು. ಅದರ ವಿಚಾರ ಸಂಪೂರ್ಣವಾಗಿ ಶ್ರೀಮಾನ್ ಬಂಗಾರಪ್ಪನವರಿಗೂ ಪರಿಚಯ ಇದೆ. ಆದರೆ ಈ ಸಾರಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳಗಾಂ ಮತ್ತು ಬಿಜಾಪುರದ ಕಡೆ ಹಿಂದೆ ಬಂದಂತಹ ಪ್ರವಾಹದ ರೀತಿಯೇ ಪ್ರವಾಹ ಬಂದಿದೆ. ಇದರ ಬಗ್ಗೆ ನಾನು ಹೇಳುವುದು ಇಷ್ಟೆ. ಈ ಪ್ರವಾಹ ಬಂದಾಗ, ಬೆಳಗಾಂ ಮತ್ತು ಮುದೋಳ್ ಬಿಜಾಪುರದಲ್ಲಿ, ಸನ್ಮಾನ್ಯ ಸಚಿವರೂ ಪ್ರವಾಸ ಮಾಡಿದ್ದಾರೆ. ನಾನೂ ಕೂಡ ಅಲ್ಲಿ ಪ್ರವಾಸ ಮಾಡಿದ್ದೇನೆ. ನಾನು ನೋಡಿದ ರೀತಿಯಲ್ಲಿ ಹೇಳಬೇಕಾದರೆ ಸರ್ಕಾರ ಪ್ರವಾಹ ಪೀಡಿತ ಜನರ ಸಂಕಷ್ಟವನ್ನು ಹಾಗೂ ವಿಚಾರದ ಗಹನತೆಯನ್ನು ತಿಳಿದುಕೊಂಡ ಹಾಗೆ ಕಾಣಲಿಲ್ಲ. ಅಲ್ಲಿ ಅನೇಕ ಮನೆಗಳು ಕೊಚ್ಚಿ ಹೋಗಿವೆ. ಅನೇಕ ಜನ ನಿರಾಶ್ರಿತರಾಗಿದ್ದಾರೆ. ಉಟ್ಟಂತಹ ಒದ್ದೆ ಬಟ್ಟೆಯಲ್ಲಿ ಸುಮಾರು 5-6 ದಿವಸಗಳವರೆಗೆ ಕಾಲ ಕಳೆಯುತ್ತಿದ್ದರು, ಮತ್ತೆ ಆ ಭಾಗದಲ್ಲಿ ಚರ್ಮವನ್ನು ಹದ ಮಾಡತಕ್ಕಂತಹ ಒಂದು ಹಳ್ಳಿಯಲ್ಲಿ ಪೂರ್ತಿ ಎಲ್ಲ ಕೊಚ್ಚಿ ಹೋಗಿದೆ, ಅವರು ಇಂದು ನಿರಾಶ್ರಿತರಾಗಿದ್ದಾರೆ. ಬಹುಶಃ ಅವರ ಜೀವನದಲ್ಲಿ ಸುಧಾರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಬ್ಯಾಂಕಿನಿಂದ ಹಾಗೂ ಖಾದಿ ಬೋರ್ಡಿನಿಂದ ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕೊಡುವುದಕ್ಕಾಗುವುದಿಲ್ಲ. ಬೇರೆ ಸಾಲವನ್ನು ಕೂಡ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿದ್ದಾರೆ. ಅಲ್ಲೇ ನಾನು ಮಂತ್ರಿಗಳಿಗೆ ಸಲಹೆ ಕೊಟ್ಟದ್ದು ಏನೆಂದರೆ, ಈಗ ಆರ್ಡರ್ ಏನಿದೆ ಅದನ್ನು ತಿದ್ದುಪಡಿಮಾಡಿ, ಉಡುಪಿ, ಕುಂದಾಪುರ ಹಾಗೂ ಹೊನ್ನಾವರದಲ್ಲಿ, ಪ್ರವಾಹ ಪೀಡಿತರಿಗೆ ಸಹಾಯ ಮಾಡಿದ್ದೆವು. ಅದೇ ಆರ್ಡರ್ ಮುಖೇನ ಈ ಭಾಗದ ಜನರಿಗೂ ಸಹಾಯ ಮಾಡಿ ಎಂಬುದಾಗಿ ನಾನು ಸರ್ಕಾರವನ್ನು ಬೇಡಿಕೊಂಡಿದ್ದೆ. ಆದರೆ ಇವತ್ತಿನವರೆಗೂ ಕೂಡ ಅದನ್ನು ತಿದ್ದುಪಡಿ ಮಾಡಿದ ಹಾಗೆ ಕಾಣಲಿಲ್ಲ. ಉಡುಪಿ, ಕುಂದಾಪುರದಲ್ಲಿ ಆದಂತಹ ಪ್ರವಾಹ ಪೀಡಿತರಿಗೆ ಯಾವ ರೀತಿಯ ಸಹಾಯವನ್ನು ಮಾಡಿದ್ದೆವೋ ಅದೇ ರೀತಿಯ ಸಹಾಯ ಮಾಡಿ ಎಂಬುದಾಗಿ ಸಲಹೆಯನ್ನೂ ಕೂಡ ಕೊಟ್ಟಿದೆ. ಇವತ್ತಿನವರೆಗೂ ಆ ಬಗ್ಗೆ ಸರ್ಕಾರ ಚಿಂತನೆಯನ್ನೂ ಕೂಡ ಮಾಡಿಲ್ಲಿಲ್ಲ. ಆದರೆ ಸರ್ಕಾರ ಕೊಟ್ಟಿರುವಂತಹ ಹುಕುಂ ಯಾವುದೆಂದರೆ, ತಹಸೀಲ್ದಾರ್‌ರವರಿಗೆ 300 ರೂಪಾಯಿಗಳವರೆಗೆ ಕೊಡಬಹುದು. ಆ ರೀತಿ ಮಾಡಿ. ಮತ್ತೆ ಜಿಲ್ಲಾಧಿಕಾರಿಗಳಿಗೆ 700 ರೂಪಾಯಿಗಳವರೆಗೆ ಪರಿಹಾರವನ್ನು ಕೊಡಬಹುದು, ಅದರಂತೆ ಕೊಡಿ ಎಂಬುದಾಗಿ ಹುಕುಂ ಮಾಡಿದ್ದಾರೆ. ಈ ರೀತಿಯ ಸಹಾಯವನ್ನು ಪ್ರವಾಹ ನಿರಾಶ್ರಿತರಿಗೆ ಮಾಡಿದ್ದೇ ಆದರೆ, ಅವರಿಗೆ ಸರಿಯಾದಂತಹ ಪುರ್ಣ ವ್ಯವಸ್ಥೆಯನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ಉದಾರ ರೀತಿಯಿಂದ ಉಡುಪಿ, ಕುಂದಾಪುರ ಹಾಗೂ ಹೊನ್ನಾವರದಲ್ಲಿ ಆದಂತಹ ಪ್ರವಾಹ ಪೀಡಿತರಿಗೆ ಯಾವ ರೀತಿಯ ಸಹಾಯವನ್ನು ಹಿಂದೆ ಇದ್ದಂತಹ ಸರ್ಕಾರ ಮಾಡಿತ್ತೋ ಅದೇ ರೀತಿಯ ಸಹಾಯವನ್ನು ಮಾಡಬೇಕು. ಆದರೆ ಈ ಬಗ್ಗೆ ಇಷ್ಟರವರೆಗೆ ಯಾವುದೇ ರೀತಿಯ ಸಹಾಯವನ್ನು ಪ್ರವಾಹ ಪೀಡಿತ ನಿರಾಶ್ರೀತರಿಗೆ ಮಾಡತಕ್ಕಂತಹ ಕೆಲಸವನ್ನು ಇವತ್ತೂ ಕೂಡ ಮಾಡಿಲ್ಲ. ಆ ರೀತಿಯ ಸಹಾಯವನ್ನು ಮಾಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಶ್ರೀ ವಿ.ಎಲ್. ಪಾಟೀಲ್.—ಪ್ರವಾಹ ಬಂದ ಕೆಲವೇ ಸಮಯದಲ್ಲಿ ನಾನು ಸ್ಥಳಕ್ಕೆ ಹೋಗಿದ್ದೆ.

Mr. Deputy Speaker.—You can refer to 'Scarcity relief' now only.

ಶ್ರೀ ಎಂ. ವೀರಪ್ಪ ಮೊಯ್ಲಿ.—I am refering

ನಾನು ಒಟ್ಟಿಗೆ ಹೇಳುತ್ತಿದ್ದೇನೆ. ಪ್ರವಾಹ ಪೀಡಿತರ ನೆರವಿಗೆ 100ಕ್ಕೆ 100 ಪಾಲು ಕೇಂದ್ರ ಸರ್ಕಾರದಿಂದ ಸಹಾಯ ಬರುತ್ತದೆ. ಇದರಿಂದ ಹೆಚ್ಚು ಪ್ರಯೋಜನವನ್ನು ತಾವು ಪಡೆಯಬೇಕಾಗಿತ್ತು. ಹಿಂದೆ ಕೂಡ ಕೇಂದ್ರ ಸರ್ಕಾರ ಇದಕ್ಕಾಗಿ ಸಹಾಯ ಮಾಡಿದ್ದು ಇದೆ. ಇವತ್ತು ಅದೇ ರೀತಿಯ ಸಹಾಯವನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳುವುದಕ್ಕೆ ಸರ್ಕಾರ ಯಾವ ರೀತಿಯ ಪ್ರಯತ್ನ ಮಾಡಿದೆಯೋ ನನಗೆ ತಿಳಿಯದು. I am yet to know whether they have sent the memorandum for flood in respect of Belgaum and Bijapur. ಮೆಮೊರಾಂಡಂನ್ನು ಕಳುಹಿಸಿದ್ದಾರೋ ಅಥವಾ ಇಲ್ಲವೋ ಎಂಬ ಅನುಮಾನ ನನಗಿದೆ. ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಆಗಿರುವಂತಹ ಪ್ರವಾಹದ ಬಗ್ಗೆ ಇಷ್ಟರಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿಯೊಂದು ಹೋಗಬೇಕಾಗಿತ್ತು. ಮತ್ತೆ ಕೇಂದ್ರದ ಅಧ್ಯಯನ ತಂಡ ಕೂಡ ಸಮಯಕ್ಕೆ ಸರಿಯಾಗಿ ಬಂದರೆ ಮಾತ್ರ....

ಶ್ರೀ ವಿ.ಎಲ್. ಪಾಟೀಲ್.—ಮನವಿಯನ್ನು ಕಳುಹಿಸಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಾದರೆ ಮನವಿಯನ್ನು ಯಾವಾಗ ಕಳುಹಿಸಿದ್ದೀರಿ ?

ಶ್ರೀ ವಿ.ಎಲ್. ಪಾಟೀಲ್.—ಯಾವಾಗ ಕಳುಹಿಸಿದ್ದೇವೆಂದು ನಂತರ ಹೇಳುತ್ತೇನೆ.

(ಶ್ರೀ ಬಿ.ಜಿ. ಬಣಕಾರ್ ರವರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯ್ಲಿ.—ನಂತರ ಹೇಳಿ ಅಲ್ಲಿಯವರೆಗೂ ಗುಟ್ಟಾಗಿ ಇಡಿ. ಮಾನ್ಯ ಸಚಿವರು ಪ್ರವಾಹ ಬಂದಂತಹ ಎಲ್ಲ ಪ್ರದೇಶಗಳಿಗೂ ಭೇಟಿ ನೀಡಿಲ್ಲ. ಪ್ರವಾಹ ನಡೆದಂತಹ ಪ್ರದೇಶದಲ್ಲಿರತಕ್ಕಂತಹ ಜನಗಳಿಗೆ ಸಹಾಯ ಮಾಡಲು ಸುಮಾರು 4–5 ದಿವಸಗಳು ಬೇಕಾಯಿತು ಅನೇಕ ಜನ ಬಟ್ಟೆ ಇಲ್ಲದೆ ಉಟ್ಟಂತಹ ಒದ್ದೆ ಬಟ್ಟೆಯಲ್ಲಿ 10 ದಿವಸಗಳವರೆಗೆ ಇದ್ದುದನ್ನು ನಾನೇ ನೋಡಿದ್ದೇನೆ. ಕೇವಲ ಬಟ್ಟೆ ಒದಗಿಸಿಕೊಡತಕ್ಕಂತಹ ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ಅಲ್ಲಿ ರೇಷನ್ ಕೂಡ ಕೊಟ್ಟಿಲ್ಲ. ಎಲ್ಲ ಪರಿಸ್ಥಿತಿಯನ್ನು ನಾನು ಕಂಡಿದ್ದೇನೆ. Even when I visited the place it was not done in many places.

ಶ್ರೀ ವಿ.ಎಲ್. ಪಾಟೀಲ್.—ಪ್ರವಾಹ ಬಂದ 24 ತಾಸುಗಳಲ್ಲಿ ನಾನೇ ಸ್ಥಳಕ್ಕೆ ಹೋಗಿದ್ದೇನೆ. ನಿರಾಶ್ರಿತರಿಗೆ ಅಕ್ಕಿ, ಗೋಧಿ ಮುಂತಾದವುಗಳನ್ನು ಪ್ರತಿಯೊಂದು ಕುಟುಂಬದವರಿಗೂ ನಾವು ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ರತಿಯೊಂದು ಕುಟುಂಬದವರಿಗೆ ಕೊಟ್ಟಿದ್ದೇ ಸರಿಯಲ್ಲ. ಆ ರೇಷನ್ ಕೊಟ್ಟಿದು 10 ದಿವಸಗಳಾದ ಮೇಲೆ.

ಶ್ರೀ ವಿ.ಎಲ್. ಪಾಟೀಲ್.—ಕೇಂದ್ರದ ಮಂತ್ರಿಗಳು ಆ ಸ್ಥಳಕ್ಕೆ ಭೇಟಿ ನೀಡಿದಂತಹ ಸಮಯಕ್ಕೆ ನೀರು ಕೆಳಗಡೆ ಹೋಗಿತ್ತು. ಆದರೆ ಪ್ರವಾಹ ಬಂದ ಎರಡು ತಾಸುಗಳಲ್ಲಿ ನಾವು ಆ ಸ್ಥಳದಲ್ಲಿದ್ದೇವೆ. ಆಗ ಶ್ರೀ ಮಲ್ಲಾರಗೌಡ ಪಾಟೀಲ್‌ರವರೂ ಕೂಡ ಸ್ಥಳದಲ್ಲಿದ್ದರು.

ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಮಂತ್ರಿಗಳು ಹೇಳಿದ್ದು ಸತ್ಯಾಂಶ ಇದ್ದರೂ ಇರತಕ್ಕಂತಹ ಲೋಪದೋಷಗಳನ್ನು ಎತ್ತಿ ತೋರಿಸಬೇಕಾಗಿದೆ. ವೈಯಕ್ತಿಕವಾಗಿ ಇದನ್ನು ಮಾಡುವಾಗ ತಮ್ಮ ಕರ್ತವ್ಯ ಎಂಬುದಾಗಿ ತಿಳಿದುಕೊಂಡು ಮಾಡಿದರೆ ಒಳ್ಳೆಯದು.

ಶ್ರೀ ವಿ.ಎಲ್. ಪಾಟೀಲ್.—ಆ ಕರ್ತವ್ಯವನ್ನು ಮಾಡಿದ್ದೇವೆಯೋ ಅಥವಾ ಇಲ್ಲವೋ ತಾವು ತಿಳಿದುಕೊಳ್ಳಬೇಕು. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ವಿರೋಧಪಕ್ಷದವರು ಹೇಳಿದರು ನಮ್ಮ ಎಂ.ಎಲ್.ಎ.ಗಳು ಹೇಳಿದರು ಅಂತ. ಏರೋಡ್ರಮ್‌ನಲ್ಲಿ ಕೇಂದ್ರ ಸಚಿವರು ಪತ್ರಿಕಾ ಹೇಳಿಕೆಯನ್ನು ಕೊಟ್ಟ ಮೇಲೆ ನೀವು ಸ್ಥಳಕ್ಕೆ ಹೋಗಿದ್ದೀರಾ ಎಂಬುದಾಗಿ ಪತ್ರಿಕೆಯವರು ಕೇಳಿದ್ದಕ್ಕೆ, ರಾಜ್ಯದ ಮಂತ್ರಿಗಳು ಸ್ಥಳಕ್ಕೆ ಹೋಗಿಲ್ಲ ಎಂಬುದಾಗಿ ನಮ್ಮ ಎಂ.ಎಲ್.ಎ.ಗಳು ಹೇಳಿದರು ಎಂಬುದಾಗಿ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ, ಮುದೋಳ್‌ನಲ್ಲಿ ಪ್ರವಾಸಿಮಂದಿರದಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಬಂದಿದ್ದೀರಿ. ಸ್ಥಳಕ್ಕೆ ಎಲ್ಲಿ ಹೋಗಿದ್ದೀರಿ ? ಅದು ಸ್ಥಳಕ್ಕೆ ಯಾವಾಗ ಹೋಗಿದ್ದೀರಿ ಅಂದರೆ ನೀರು ಇಳಿದ ಮೇಲೆ ಹೋಗಿದ್ದೀರಿ, ನೀರು ಇರುವಂತಹ ಅನೇಕ ಕಡೆ ಹೋಗಿಲ್ಲ. 10 ದಿವಸಗಳು ಆದ ಮೇಲೆ ನೀರು ಇಳಿದ ಮೇಲೂ ಕೂಡ ನೀವು ಏನು ಮಾಡಿದ್ದೀರಿ ಅಂತ ನೋಡಿದ್ದೇವೆ.

ಶ್ರೀ ವಿ.ಎಲ್. ಪಾಟೀಲ್.—ಎಲ್ಲ ಕಡೆ ಹೋಗಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸಂಕೇಶ್ವರಕ್ಕೆ ಹೋಗಿದ್ದೀರಿ. ಮುದೋಳ್‌ನಲ್ಲಿ ಸ್ಥಳಕ್ಕೆ ಎಲ್ಲಿ ಹೋಗಿದ್ದೀರಿ ?

ಶ್ರೀ ವಿ.ಎಲ್. ಪಾಟೀಲ್.—ಮುದೋಳ್‌ಗೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿದ್ದೇನೆ. ಅಲ್ಲಿ ಪ್ರವಾಹ ಬಂದಂತಹ ಸ್ಥಳಕ್ಕೂ ಹೋಗಿ, ಹುಲ್ಲಿನ ಬಣವೆಯ ಮೇಲೆ ಕುಳಿತಿದ್ದಂತಹವರನ್ನು ಹೆಲಿಕ್ಯಾಪ್ಟರ್‌ನಲ್ಲಿ ಕರೆದುಕೊಂಡು ಊರಿಗೆ ಕರೆದುಕೊಂಡು ಬಂದಿದ್ದೇವೆ. ನಾನು ಮತ್ತು ನನ್ನ ಜೊತೆಗೆ ಡಿ. ಐ. ಜಿ. ಇದ್ದರು. ಇಬ್ಬರೂ ಹೋಗಿದ್ದೇವೆ. ಹೆಲಿಕ್ಯಾಪ್ಟರ್‌ನಲ್ಲಿ ಜಾಗ ಇರಲಿಲ್ಲವಾದ್ದರಿಂದ ಅವರನ್ನು ಮುದೋಳ್‌ನಲ್ಲಿ ಇಳಿಸಿ ಹೋಗಿದ್ದೇವೆ. ಅಲ್ಲಿ ಹೋಗಿ ಕೆಳಗೆ ಇದ್ದ ಜನರನ್ನೆಲ್ಲಾ ಮೇಲಕ್ಕೆ ಕರೆದು ತಂದಿದ್ದೇವೆ.

2 p.m.

ಶ್ರೀ ಎಂ. ವೀರಪ್ಪಮೊಯ್ಲಿ.—ಅದಕ್ಕೆ ಬೇಕಾದರೆ ನಿಮ್ಮನ್ನು ಕಾಂಪ್ಲಿಮೆಂಟ್ ಮಾಡೋಣ. ನಾನು ಹೇಳುವುದು ಏನೆಂದರೆ ನೀವು ಹೋಗಿದ್ದೀರಿ ಆದರೆ ಎಲ್ಲಾ ಕಡೆಯೂ ಹೋಗಲಿಲ್ಲ, ಆದುದರಿಂದ ತಾವು ಎಲ್ಲಾ ಕಡೆಗೂ ಹೋಗಿದ್ದೇನೆ ಅಂತ ಹೇಳಬೇಡಿ. ಹೋಗಿದ್ದರೆ ಆ ವಿವರಗಳನ್ನೆಲ್ಲಾ ಕೊಡುತ್ತೀರಾ ?

ಶ್ರೀ ವಿ.ಎಲ್. ಪಾಟೀಲ್.—ಕೊಡುತ್ತೇನೆ.

ಶ್ರೀ ವಿ. ಎಸ್. ಕೌಜಲಗಿ.—ನನ್ನ ಕ್ಷೇತ್ರದಲ್ಲಿರುವ 10–12 ಹಳ್ಳಿಗಳನ್ನು ನಾನು ನೋಡಿ

ಬಂದಿದ್ದೇನೆ. 22ನೇ ತಾರೀಖು ಮಾನ್ಯ ಮಂತ್ರಿಗಳು ಬೆಳಗಾಂಗೆ ಭೇಟಿ ಕೊಟ್ಟಿದ್ದಾರೆ, ನಾನು ಇದರ ಬಗ್ಗೆ ವ್ಯವಹಾರ ಮಾಡಿದರೂ ಕೂಡ ಸಾಯಂಕಾಲ 6 ಗಂಟೆಯವರೆಗೂ ಉತ್ತರ ಬರಲಿಲ್ಲಾ. ನಾನು ಜಿಲ್ಲಾಧಿಕಾರಿಗಳಿಗೆ ವಿಷಯ ತಿಳಿಸಿ ಫೋನ್ ಮಾಡಿ ಅದಕ್ಕೆ ತಕ್ಕ ಅರೇಂಜ್‌ಮೆಂಟ್ಸ್ ಎಲ್ಲಾ ಮಾಡಿಕೊಂಡು ಇದ್ದರೂ ಕೂಡ ಬರಲಿಲ್ಲಾ. ಅವರು ಎಲ್ಲೋ ಬೇರೆಕಡೆಗೆ ಹೋಗಿದ್ದರು.

ಶ್ರೀ ವಿ.ಎಲ್. ಪಾಟೀಲ್.—ಬೇರೆ ಕಡೆಗೆ ಹೋಗಿದ್ದರು ಎಂದರೆ ನಾನೇನಾದರೂ ಬೊಂಬಾಯಿಗೆ ಹೋಗಿದ್ದನೇ, ಎಲ್ಲಿಗೆ ಹೋಗಿದ್ದೆ ಅನ್ನುವುದನ್ನು ತಿಳಿಸಿ. ನಾನು ಎಲ್ಲೂ ಹೋಗಿರಲಿಲ್ಲ. ಪ್ರವಾಹ ಪೀಡಿತ ಪ್ರದೇಶವಾದ 40–50 ಹಳ್ಳಿಗಳಲ್ಲಿ ಇದ್ದನೇ ವಿನಾ ಇನ್ನೆಲ್ಲೂ ಹೋಗಿರಲಿಲ್ಲ, ಆದರೂ ಕೂಡ ನಾನು ಆಗಾಗ್ಗೆ ಟೆಲಿಗ್ರಾಂ, ಫೋನ್, ವೈರ್‌ಲೆಸ್ ಮೆಸೇಜ್ ಎಲ್ಲಿಂದ ಬರುತ್ತದೆ ಅನ್ನುವುದನ್ನು ನಿರೀಕ್ಷಿಸುತ್ತಾ ಇದ್ದೆ.

ಶ್ರೀ ವಿ.ಎಸ್. ಕೌಜಲಗಿ.—ನನ್ನ ಕ್ಷೇತ್ರದಲ್ಲಿ ತಾವು ನೀರೆಲ್ಲಾ ಇಳಿದ ಮೇಲೆ ಬಂದಿದ್ದೀರಿ. ಮೊದಲೇ ಬಂದಿಲ್ಲಾ.

ಶ್ರೀ ವಿ.ಎಲ್. ಪಾಟೀಲ್.—ಅದೇ ಕಾಲದಲ್ಲಿ ಬಿಜಾಪುರದಲ್ಲೂ ಕೆಲವು ಹಳ್ಳಿಗಳಲ್ಲಿ ನೀರು ಇತ್ತು. ಅಲ್ಲಿ ನೀರಿನ ಒಳಗೆ ಯಾರು ಸಿಕ್ಕಿ ಹಾಕಿಕೊಂಡಿದ್ದರೋ ಅವರನ್ನೆಲ್ಲಾ ಮೇಲಕ್ಕೆ ಎತ್ತಿದ್ದೇವೆ. ಬೋಟುಗಳನ್ನು ಉಪಯೋಗಿಸಿಕೊಂಡು ಆ ಜನರನ್ನು ಮೇಲಕ್ಕೆ ಎತ್ತಿದ್ದೇವೆ. ಅಲ್ಲಿ 160 ಜನರನ್ನು ಪ್ರವಾಹದಿಂದ ಬದುಕಿಸಿದ್ದೇವೆ.

ಶ್ರೀ ವಿ.ಎಸ್, ಕೌಜಲಗಿ.—ಅವರನ್ನೇನೋ ಬದುಕಿಸಿದಿರಿ, ಆಮೇಲೂ ಏನೂ ಪ್ರಯೋಜನವಾಗಲಿಲ್ಲಾ. ನಾವು ಅಲ್ಲಿ ಇದ್ದಾಗ ನೀವು ಬರಲಿಲ್ಲಾ.

ಶ್ರೀ ವಿ.ಎಲ್. ಪಾಟೀಲ್.—ನಾನು ಅಲ್ಲಿಗೆ ಬಂದಾಗ ನೀವು ಇರಲಿಲ್ಲಾ.

ಶ್ರೀ ವೀರಪ್ಪಮೊಯ್ಲಿ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಫ್ಲಡ್ ಬಗ್ಗೆ ಕೇಂದ್ರ ಸರ್ಕಾರಕ್ಕೆ ಏನಾದರೂ ಮೆಮೋರ್ಯಾಂಡಂ ಕೊಟ್ಟಿದ್ದೀರಾ, ಕಳುಹಿಸಿದ್ದೀರಾ ಅಂತ ಕೇಳಿದರೆ ಅದಕ್ಕೆ ಉತ್ತರ ಇಲ್ಲ, ಬರೇ ತಪ್ಪು ಹೇಳಿಕೆ ಕೊಡುತ್ತಿದ್ದಾರೆ ಆದರಿಂದ ಏನು ಪ್ರಯೋಜನ ಹೇಳಿ, ತಪ್ಪು ಉತ್ತರ ಕೊಟ್ಟು ಅವರೇ ಸಿಕ್ಕಿ ಹಾಕಿಕೊಳ್ಳುತ್ತಾರೆ. ಈಗಲಾದರೂ ಕೂಡ ಕೇಂದ್ರ ಸರ್ಕಾರಕ್ಕೆ ಯಾವತ್ತು ಈ ಫ್ಲಡ್ ಬಗ್ಗೆ ಮೆಮೊರ್ಯಾಂಡಂ ಅನ್ನು ಕಳುಹಿಸಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ವಿ.ಎಲ್. ಪಾಟೀಲ್.—ಈ ಬಗ್ಗೆ ಮೆಮೊರ್ಯಾಂಡಂ ಅನ್ನು 19–7–83 ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ವೀರಪ್ಪಮೊಯ್ಲಿ.—ನಾನೇನೂ ತಪ್ಪು ಹೇಳಿಕೆ ಕೊಡಲಿಲ್ಲಾ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಆಗಲಿ. ಈ ಹೆಲಿಕ್ಯಾಪ್ಟರ್ ವಿಷಯವನ್ನೇ ತೆಗೆದುಕೊಂಡು ಒಂದು ದೊಡ್ಡ ಕತೆ ಮಾಡಬೇಡಿ. ಅಧ್ಯಕ್ಷರೇ ಈಗ ಏನಾಗಿದೆ ಎಂದರೆ ಇವರು ಹೆಲಿಕ್ಯಾಪ್ಟರ್‌ನಲ್ಲಿ ತಿರುಗಾಡಿದರು, ಆದರೆ ಇವರು ಎಷ್ಟು ಕಡೆ ಹೋಗಿದ್ದಾರೆ ಅದನ್ನು ಹೇಳಲಿಲ್ಲಾ. ಅವರು ಎಲ್ಲಾ ಕಡೆಯೂ ಹೋಗಲಿಲ್ಲಾ. ಅವರು ಎಲ್ಲೆಲ್ಲಿಗೆ ಹೋಗಿದ್ದಾರೆ ಎಲ್ಲೆಲ್ಲಿಗೆ ಹೋಗಿಲ್ಲಾ ಅನ್ನುವುದು ನಮಗೂ ಗೊತ್ತಿದೆ, ನಿಮಗೂ ಹೆಚ್ಚು ಗೊತ್ತಿದೆ. ನಾನು ಈ ವಿಚಾರ ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಹೋದ ದಿವಸ ಅನೇಕ ಕಡೆಗಳಲ್ಲಿ ಫ್ಲಡ್ ಏರಿಯಾದ ಜನರು ನನ್ನ ಹತ್ತಿರ ಬಂದು ಹೇಳಿದರು. ಇವರು ಆ ಪ್ರವಾಹದ ಜನರಿಗೆ 100 ರಿಂದ 500 ರೂಪಾಯಿನವರೆಗೆ ಏನು ಕೊಡಬೇಕೆಂದಿದ್ದರೋ ಆ ಬಗ್ಗೆ ಮೊದಲನೇ ಕಂತನ್ನು 4–5 ದಿವಸ ತಡವಾಗಿ ಕೊಟ್ಟಿದ್ದಾರೆ. ಅದರಲ್ಲಿ ಒಂದು ವಿಶೇಷ ಏನೆಂದರೆ ಅವರು ವಿತರಣೆ ಮಾಡಿದ್ದು ಮೊದಲು 25 ಪರ್ಸೆಂಟ್ ಅನಂತರ 60 ಪರ್ಸೆಂಟ್ ಕೊಟ್ಟರು. ಉಳಿದುದ್ದನ್ನು ಆಮೇಲೆ ಕೊಟ್ಟರು. ನಾನು ಹೋದಾಗ ಅವರುಗಳು ಹೇಳಿದ್ದು ಅನೇಕ ಜನರಿಗೆ ವಸ್ತ್ರ ಕೊಟ್ಟಿರಲಿಲ್ಲಾ, ಚಾಪೆ ಕೊಟ್ಟಿರಲಿಲ್ಲಾ, ರೇಷನ್ ಕೊಟ್ಟಿರಲಿಲ್ಲಾ. ಅನೇಕರನ್ನು ಅಲೆದಾಡಿಸಿದ್ದಾರೆ, ನಾನು ಗೋಕಾಕ್‌ನಲ್ಲಿ ನೋಡಿದ್ದೇನೆ, ಅನೇಕ ಜನ ಇದರ ಬಗ್ಗೆ ಬಂದು ಹೇಳಿದ್ದಾರೆ. ಈಗ ನಾನು ಹೇಳುವುದು ಇಷ್ಟೆ; ಸನ್ಮಾನ್ಯ ಸಚಿವರು ಆ ಕ್ಷೇತ್ರಕ್ಕೆ ಹೋಗಿರಲಿಲ್ಲಾ ಅಂತ ಹೇಳುತ್ತೇನೆ. ಆದರೆ ಇದರ ಬಗ್ಗೆ ವಾದ ವಿವಾದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಎಲ್ಲಿಗೆ ಹೋಗುವುದಿಲ್ಲ ಅಂಥಾ ಕಡೆ ಜಿಲ್ಲಾಧಿಕಾರಿಗಳಿಗಾಗಲಿ ಅಥವಾ ಡಿವಿಷನಲ್ ಕಮೀಷನರಾಗಲಿ ಇದನ್ನು ವಿತರಣೆ ಮಾಡುವುದಕ್ಕೆ ಅಧಿಕಾರ ಕೊಡಬೇಕಾಗಿತ್ತು.

ಶ್ರೀ ವಿ.ಎಲ್. ಪಾಟೀಲ್.—ಅಧಿಕಾರ ಕೊಟ್ಟಿದ್ದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಉಡುಪಿ ಮತ್ತು ಕುಂದಾಪುರ ಭಾಗದಲ್ಲಿ ಸರಿಯಾದ ವ್ಯವಸ್ಥೆ ಮಾಡಿದ್ದೀರಿ. ಅಲ್ಲಿ ಅಧಿಕಾರಿಗಳಿಗೆ ಏನು ಒಂದು ವ್ಯವಸ್ಥೆ ಮಾಡಿದ್ದರೋ ಅದೇರೀತಿ ಎಲ್ಲಾ ಕಡೆಯೂ ಮಾಡಬೇಕಾಗಿತ್ತು. ಎರಡು ಜಿಲ್ಲೆಗೊಂದು ಸಮಿತಿ ಮಾಡಬೇಕಾಗಿತ್ತು. ಅರೀತಿ ಮಾಡಲಿಲ್ಲಾ. ಒಬ್ಬೊಬ್ಬರೂ ಒಂದೊಂದು ದಿಕ್ಕಿಗೆ ಹೋದರು, ತಾಲ್ಲೂಕಿಗೆ ಒಂದೊಂದು ಸಮಿತಿ ಮಾಡಲಿಲ್ಲಾ, ಹಾಗೂ ಮಾಡಲಿಲ್ಲಾ. ಅಲ್ಲಿಗೆ ಯಾರು ಹೋಗುತ್ತಾರೋ ಅವರ ಹತ್ತಿರ ಬಂದು ಆ ಜನಗಳು ಹೇಳುತ್ತಾ ಇದ್ದರು. ಒಟ್ಟಿನಲ್ಲಿ ಹೇಳಬೇಕಾದರೆ ಸರಿಯಾದ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಲಿಲ್ಲಾ. ಆದುದರಿಂದ ಮಾನ್ಯ ಸಚಿವರು ಎಲ್ಲವನ್ನೂ ಸರಿಯಾಗಿ ವ್ಯವಸ್ಥೆ ಮಾಡಿದ್ದೇನೆ ಅಂತ ಹೇಳುವುದಕ್ಕೆ

ಹೋಗಬೇಡಿ ಎಂದು ಹೇಳುತ್ತೇನೆ. What you do is not important, but the sense of direction is important. ವಿಷಯ ತಿಳಿದ ತಕ್ಷಣ ತಾವು ಹೋಗಿ ಸಹಾಯ ಮಾಡಬೇಕಾಗಿತ್ತು. ಅವರಿಗೆ ಒಂದು ಪುನರ್‌ವ್ಯವಸ್ಥೆ ಏನು ಮಾಡಬೇಕಾಗಿತ್ತೋ ಆ ದಿಶೆಯಲ್ಲಿ ಸರ್ಕಾರ ಏನೂ ಕಾರ್ಯಕ್ರಮ ಮಾಡಲಿಲ್ಲಾ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ತಮಗೆ ಇಷ್ಟು ಮಾತ್ರ ಹೇಳುತ್ತೇನೆ. ಕೇಂದ್ರಕ್ಕೆ ಈ ಫ್ಲಡ್ ಬಗ್ಗೆ ಒಂದು ಮೆಮೋರ್‍ಯಾಂಡಂ ಅನ್ನು ಅವರು ಮೊದಲು ಕಳುಹಿಸಬೇಕಾಗಿತ್ತು. ಕೇಂದ್ರ ಸಚಿವರಾದ ಮಾನ್ಯ ಶಂಕರಾನಂದ್‌ರವರು ಬಂದಿದ್ದಾಗ್ಗೆ ಈ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಾಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಏನೆಂದರೆ ಡೆಲ್ಲಿಯಲ್ಲಿ ಹೋಗಿ ಏನು ಕೇಳಬೇಕು, ಅಲ್ಲಿ ಹೋಗಿ ಯಾರನ್ನು ಕೇಳಬೇಕು. ಎಂದು.

ಶ್ರೀ ವಿ.ಎಲ್. ಪಾಟೀಲ್.—ಈ ಮಾತನ್ನು ಯಾರು ಹೇಳಿದರು ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಹೇಳಿಕೆ ಕೊಟ್ಟಿದ್ದಾರೆ ಅದನ್ನೇ ನಾನು ಹೇಳಿದ್ದೇನೆ, ಈ ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ, ಈ ಮಾತನ್ನು ಅವರುಹೇಳಿದಾಗ ನಾನು ಉತ್ತರ ಹೇಳಿದೆ ಏನೆಂದರೆ ಪ್ರವಾಹ ಸಂತ್ರಸ್ಥರನ್ನು ರಾಜಕೀಯ ಸಂತ್ರಸ್ಥರನ್ನಾಗಿ ಮಾಡಬೇಡಿ ಅಂತ ಹೇಳಿದೆ. ಪ್ರತಿಯೊಂದು ಕಡೆಯಲ್ಲಿಯೂ ಕೂಡ ಜನರ ಕಷ್ಟದಲ್ಲಿ, ಬಡತನದಲ್ಲಿ, ಇವರು ಇವತ್ತು ರಾಜಕೀಯವನ್ನೇ ಬಂಡವಾಳವನ್ನಾಗಿ ಮಾಡತಕ್ಕ ಪ್ರವೃತ್ತಿ ಬೆಳೆಸಿಕೊಂಡು ಬಂದು ರಾಜ್ಯದ ಜನರ ಹಿತಾಸಕ್ತಿಯನ್ನು ಎಷ್ಟರಮಟ್ಟಿಗೆ ಇವರು ಭದ್ರಪಡಿಸುತ್ತಾರೆಂದು ನಾನು ಕೇಳಬೇಕಾಗಿದೆ. ನೆರೆ ಹಾವಳಿಯ ವಿಚಾರದಲ್ಲಿ ಮೆಮೊರ್‍ಯಾಂಡಂ ಕಳುಹಿಸಿಲ್ಲ. ಇತ್ತೀಚೆಗೆ ಕೇಂದ್ರಸರ್ಕಾರಕ್ಕೆ ಮೆಮೊರ್‍ಯಾಂಡಂ ಕಳುಹಿಸಿದ್ದಾರೆಂದು ಕೇಳಿದ್ದೇನೆ, ಮೆಮೊರ್‍ಯಾಂಡಂನ್ನು ಇವರು ಕಳುಹಿಸಿದ ಕೂಡಲೇ ಕೇಂದ್ರಸರ್ಕಾರದ ಅಧ್ಯಯನ ತಂಡವನ್ನು ರಾಜ್ಯಕ್ಕೆ ಕಳುಹಿಸಲಿಕ್ಕೆ ನಿರ್ಣಯ ಮಾಡಿದೆ. ಇಷ್ಟರೊಳಗೆ ಕೇಂದ್ರಸರ್ಕಾರದ ಅಧ್ಯಯನ ತಂಡ ರಾಜ್ಯಕ್ಕೆ ಬರಬೇಕಾಗಿತ್ತು.

ಶ್ರೀ ವಿ.ಎಲ್. ಪಾಟೀಲ್.—ಈ ಬಗ್ಗೆ ಮೆಮೊರ್‍ಯಾಂಡಂನ್ನು ನಾವು 19ನೇ ಜುಲೈನಲ್ಲಿ ಕೇಂದ್ರಕ್ಕೆ ಕಳುಹಿಸಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನೆರೆ ಯಾವಾಗ ಬಂತು ಸ್ವಾಮಿ, ಜೂನ್ ತಿಂಗಳಲ್ಲಿ ಬಂದಿದೆ. ರಾಜ್ಯಕ್ಕೆ ಬರಗಾಲ ಬಂದಾಗ, ನೆರೆ ಬಂದಾಗ ಕೇಂದ್ರದ ಸಹಾಯ ಕೇಳತಕ್ಕದ್ದು ಇದೆ. ಈ ವಿಷಯಗಳಲ್ಲಿ ಕೇಂದ್ರಕ್ಕೆ ರಾಜ್ಯದಿಂದ ಮೆಮೊರ್‍ಯಾಂಡಂ ಕೊಡತಕ್ಕದ್ದು ನಡೆದುಕೊಂಡು ಬಂದಿದೆ. ಮತ್ತು ಕೇಂದ್ರದವರು ಯಾವಾಗಲೂ ಸಹಾಯ ಮಾಡುತ್ತಾ ಬಂದಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಇದು ತಿಳಿದಿಲ್ಲವೆಂದು ಕಾಣುತ್ತದೆ. ಇವರು ಕೇಂದ್ರವನ್ನು ಈ ವಿಷಯದಲ್ಲಿ ಏನು ಕೇಳುವುದು ಎಂದು ಹೇಳಿದ್ದಾರೆ.

ಶ್ರೀ ವಿ.ಎಲ್. ಪಾಟೀಲ್.—ರಾಜ್ಯಕ್ಕೆ ಬರಗಾಲ ಬಂದಾಗ ನಾವು [illegible] ನಮಗೆ ಇಷ್ಟು ಹಣ ಬೇಕೆಂದು ಬೇಡಿದ್ದೇವೆ. ಫ್ಲಡ್ ಆದಾಗ ಕೂಡ ನಾವು ಅವರಿಗೆ ಬೇಡಿದ್ದೇವೆ. ಅವರು ನಮಗೆ ಯಾವಾಗ ಸಹಾಯ ಮಾಡುತ್ತಾರೋ ಎಂದು ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾವು ಅರಿಕೆ ಮಾಡಿಕೊಂಡಂತ ಕೇಂದ್ರಸರ್ಕಾರದವರು ನಮಗೆ ಈ ಸಂದರ್ಭದಲ್ಲಿ ಸಹಾಯ ಮಾಡುವಂಥ ಪರಂಪರೆ ಇದೆ, ಇತಿಹಾಸ ಇದೆ. ಇದನ್ನು ಸ್ವಲ್ಪ ತಾವು ನೋಡಿಕೊಳ್ಳಬೇಕು, ಎಲ್ಲಾ ಕಣ್ಣುಮುಚ್ಚಿ ವ್ಯವಹಾರ ಮಾಡುವುದು ಬೇಡ. ಈ ವಿಷಯಗಳಲ್ಲಿ ಮೆಮೊರ್‍ಯಾಂಡಂ ಕೂಡ ಕೊಡದೆ ಇದ್ದುದರಿಂದ ಕೇಂದ್ರದವರ ಅಧ್ಯಯನ ತಂಡ ಇಷ್ಟರವರೆಗೆ ಬರಲಿಲ್ಲ. ಇಷ್ಟರವರೆಗೆ ಅವರು ಬರಬೇಕಾಗಿತ್ತು, ಎಲ್ಲಾ ವಿಷಯಗಳಲ್ಲಿ ತರ್ಕಬದ್ಧವಾಗಿ ವ್ಯವಹರಿಸಿದಂತೆ ಒಂದು ಸರಿಯಾದ ರೀತಿಯ ವ್ಯವಸ್ಥೆಯನ್ನು ತಾವು ಮಾಡಬೇಕು. ಕರ್ನಾಟಕ ರಾಜ್ಯದ ಜನತೆಯನ್ನು ತಮ್ಮ ರಾಜಕೀಯಕ್ಕಾಗಿ ಬಲಿ ತೆಗೆದುಕೊಳ್ಳುವ ಕೆಲಸವನ್ನು ಈ ರಂಗದಲ್ಲಿ ಮಾಡಬೇಡಿ. ಈ ವಿಷಯಗಳಲ್ಲಿ ತಾವು ಸ್ವಲ್ಪ ವ್ಯವಹಾರಿಕವಾಗಿ ನಡೆದುಕೊಳ್ಳಬೇಕು. ಆದ್ದರಿಂದ ಕಂದಾಯ ಇಲಾಖೆ ಇಲ್ಲಿ ಯಾವ ರೀತಿಯ ಕಾರ್ಯಗಳನ್ನು ಮಾಡತಕ್ಕದ್ದರಲ್ಲಿ ಯಾವುದೇ ಸಾಧನೆಯಾಗಿಲ್ಲ. ಭೂ ಮಸೂದೆಯ ಬಗ್ಗೆ ಬರಗಾಲ ಪರಿಸ್ಥಿತಿಯ ಬಗ್ಗೆ ಮತ್ತು ಜನಹಿತ ಕಾರ್ಯಗಳಲ್ಲಿ ಈ ಸರ್ಕಾರ ಜನತೆ ಮೆಚ್ಚಿಕೊಳ್ಳತಕ್ಕ ರೀತಿಯಲ್ಲಿ ಕೆಲಸ ಮಾಡಿಲ್ಲ. ಪ್ರಮುಖವಾದ ಕಂದಾಯ ಇಲಾಖೆ ನಡೆದುಕೊಂಡು ಬರತಕ್ಕ ರೀತಿಯಲ್ಲಿ ನೋಡಿದರೆ, ಬರಗಾಲ ಪರಿಸ್ಥಿತಿಯಲ್ಲಾಗಲೀ, ಪ್ರವಾಹದ ಪರಿಸ್ಥಿತಿಯಲ್ಲಾಗಲೀ ಅವುಗಳನ್ನು ಎದುರಿಸತಕ್ಕ ಧೀಮಂತ ತನದಲ್ಲಿ ಸರ್ಕಾರ ಕೆಲಸ ಮಾಡಿಲ್ಲ. ಬರಗಗಾಲದ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ, ಪ್ರವಾಹವನ್ನು ಎದುರಿಸತಕ್ಕ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ, ಭೂ ಮಸೂದೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಮತ್ತು ಬಡವರಿಗೆ ಜಾಗ ಕೊಡುವುದರಲ್ಲಿ ಮತ್ತು ಅವರ ಹಿತಸಾಧನೆಯನ್ನು ಮಾಡುವುದರಲ್ಲಿ ಸರ್ಕಾರ ವಿಫಲವಾಗಿದೆ. ಚುನಾವಣೆಯ ಸಂದರ್ಭದಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ಗೇಣಿದಾರರಿಗೆ ಪರಿಹಾರ

ಕೊಡುವ ವಿಚಾರದಲ್ಲಿ ಒಂದು ಶಬ್ದವನ್ನೂ ಕೂಡ ಈ ಬೇಡಿಕೆಯಲ್ಲಿ ಹೇಳಿಲ್ಲ. ಅದರ ಬಗ್ಗೆ ಒಂದು ಸೂಚನೆಯೂ ಕೂಡ ಇಲ್ಲಿಲ್ಲ. ಇವರು ಯಾವ ರೀತಿಯಲ್ಲಿಯೂ ಮಾಜಿ ಗೇಣಿದಾರರಿಗೆ, ಬಡವರಿಗೆ ಕೃಷಿ ಕೂಲಿಗಾರರಿಗೆ ಅನುಕಂಪ ತೋರಿಸತಕ್ಕ ಕೆಲಸವನ್ನು ಮಾಡಲಿಲ್ಲ. ಆದ್ದರಿಂದ ನಾವು ಈ ಬೇಡಿಕೆಯನ್ನು ಒಪ್ಪಿದರೆ ನಾವು ಈ ಮೂಲಕ ತಮಗೆ ಹಣವನ್ನು ಏನು ಕೊಡುತ್ತಿದ್ದೇವೆ ಅದನ್ನು ಭೂಮಾಲೀಕರನ್ನು ಎತ್ತಿಕಟ್ಟಲಿಕ್ಕೆ ಉಪಯೋಗ ಮಾಡುತ್ತೀರಿ ಎಂದು ನಾನು ಹೇಳಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಯ ಮೇಲೆ ನಾನು ಭಾಷಣ ಮಾಡುವುದಿಲ್ಲ. ಮೂರು ನಾಲ್ಕು ತಿಂಗಳುಗಳ ಹಿಂದೆ ಸಣ್ಣ ಪುಟ್ಟ ಹಿಡುವಳಿದಾರರು ಭೂಮಿಯನ್ನು ಯಾರು ಕಳೆದುಕೊಂಡಿದ್ದಾರೋ ಅವರ ಬಗ್ಗೆ ಏಕಗಂಟಿನಲ್ಲಿ ಪರಿಹಾರ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಬಹಳ ಸಂತೋಷಪಡತಕ್ಕ ವಿಚಾರ. ಸಣ್ಣ ಪುಟ್ಟ ಭೂಮಾಲೀಕರಿಗೆ ಏಕಗಂಟಿನಲ್ಲಿ ಪರಿಹಾರ ಕೊಡುತ್ತೇವೆಂದು ಪ್ರಕಟಣೆ ಮಾಡುತ್ತಿದ್ದಂತೆಯೇ ನಾನು ಸಣ್ಣ ಪುಟ್ಟ ಗೇಣಿದಾರರು ಏನು ಇದ್ದಾರೆ ಅವರು ತಾವು ಒಂದೇ ಕಂತಿನಲ್ಲಿ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲ, ನಮಗೂ ಕೂಡ ಅದನ್ನು ವಜಾ ಮಾಡಬೇಕು ಎನ್ನುವಂಥ ಬೇಡಿಕೆಯನ್ನು ಅವರ ಮುಂದೆ ಇಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾದರೆ ಗೇಣಿದಾರ ಕೊಡಬೇಕಾದ ಕಂತನ್ನು ವಜಾ ಮಾಡತಕ್ಕದ್ದರ ಬಗ್ಗೆ ಹೇಳಿದರೆ ಮುಖ್ಯಮಂತ್ರಿಗಳು ಹೇಳಿದಂಥ ಮಾತಿಗೆ ಬೆಲೆ ಬರುತ್ತದೆ. ಇಲ್ಲದಿದ್ದರೆ 5 ಪೈಸಾ ಬೆಲೆ ಕೂಡ ಅವರಿಗೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.--ಮಾನ್ಯ ಬಂಗಾರಪ್ಪನವರು ವಿಧವೆಯರಿಗೆ, ಹೆಂಗಸರಿಗೆ ಅಪ್ರಾಪ್ತ ಮಕ್ಕಳಿಗೆ, ದುರ್ಬಲ ವರ್ಗದವರಿಗೆ ಮತ್ತು ಮಾಜೀ ಭೂಮಾಲೀಕರು ಏನು ಇದ್ದಾರೆ ಅವರಿಗೆ ಕಾಂಫನ್ಸೇಶನ್ ಕೊಡತಕ್ಕ ವಿಚಾರದಲ್ಲಿ ಹೇಳಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಹೇಳಿದ ರೀತಿಯಲ್ಲಿ ಇವರು ನಡೆದುಕೊಂಡಿಲ್ಲ. ಕಂದಾಯ ಇಲಾಖೆಯು ಕೆಲಸ ಮಾಡಿದಾಗ ಮಾತ್ರ ಬೇರೆ ಇಲಾಖೆಗಳೂ ಕೂಡ ಕೆಲಸ ಮಾಡುತ್ತವೆ. ಕಂದಾಯ ಇಲಾಖೆ ಇವತ್ತು ಯಾವುದೇ ರೀತಿಯಲ್ಲಿ ಕಾರ್ಯಕ್ರಮವನ್ನು ಜನತೆಗೆ ಕೊಡದೆ ಇರತಕ್ಕ ರೀತಿಯಲ್ಲಿ ಒಂದು ತಟಸ್ಥ ರೀತಿಯಲ್ಲಿ ನಿಂತ ಇಲಾಖೆಯಾಗಿದೆ. ಜನತೆಯಲ್ಲಿ ಯಾವ ಒಂದು ಆಸೆಯನ್ನು ಹುಟ್ಟಿಸಲಿಕ್ಕೆ ಬೇಕಿತ್ತೋ ಈ ದಿಸೆಯಲ್ಲಿ ಸರ್ಕಾರ ಮುಂದೆ ಹೋಗುವ ಬದಲು ಹಿಂದೆ ತಿರುಗಿದ್ದರಿಂದ ಈ ರೀತಿಯಾಗಿದೆ. ಹಿಂದೆ ಹೋಗುವುದನ್ನು ನಿಲ್ಲಿಸತಕ್ಕ ಶಕ್ತಿಯನ್ನು ಈ ಸರ್ಕಾರ ಕಳೆದುಕೊಂಡಿದೆ ಎಂದು ಹೇಳಿ ಇವರು ಡಿಮ್ಯಾಂಡ್ ಯಾವುದು ಇಟ್ಟಿದ್ದಾರೆ ಅದರ ಮೂಲಕ ಹಣವನ್ನು ಕೊಟ್ಟರೆ ಅದನ್ನು ಇವರು ಸರಿಯಾದ ರೀತಿಯಲ್ಲಿ ಖರ್ಚು ಮಾಡುತ್ತಾರೆಯೇ ಎನ್ನುವಂಥ ಸಂಶಯ ನಾನು ವ್ಯಕ್ತಪಡಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಡಾ|| ವಿ. ಎಸ್. ಆಚಾರ್ (ಉಡುಪಿ).--ಸನ್ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಕೆಲವೊಂದು ಬೇಡಿಕೆಗಳ ಬಗ್ಗೆ ಮಾನ್ಯ ಸಚಿವರು ನಮ್ಮ ಮುಂದೆ ಬೇಡಿಕೆಯನ್ನು ಇಟ್ಟಿದ್ದಾರೆ. ಇಲ್ಲಿ ನಾನು ಪ್ರಾಸ್ತಾವಿಕವಾಗಿ ಎರಡು ಮಾತುಗಳನ್ನು ಹೇಳಲೇ ಬೇಕಾಗಿದೆ. ಬಹಳ ಹಿಂದಿನಿಂದಲೂ, ಬ್ರಿಟಿಷರ ಕಾಲದಿಂದಲೂ ಏನೊಂದು ರೀತಿಯಲ್ಲಿ ಆಡಳಿತ ಯಂತ್ರ ನಡೆಯುತ್ತಿತ್ತೋ ಅದೇ ರೀತಿಯಲ್ಲಿ ಈ ಕಂದಾಯ ಇಲಾಖೆಯ ಮೂಲಕ ದೇಶದ ಆಡಳಿತ ನಡೆಯುತ್ತಿದೆ. ಈ ದೃಷ್ಟಿಯಿಂದ ಕಂದಾಯ ಇಲಾಖೆ ಆಡಳಿತದ ಬೆನ್ನೆಲುಬು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಯಾರು ಸರ್ಕಾರವನ್ನು ನಡೆಸುತ್ತಿದ್ದಾರೋ ಅವರ ಮನಸ್ಸಿನಲ್ಲಿ ಏನೇನು ಕಾರ್ಯಕ್ರಮಗಳು ಜಾರಿಗೆ ಬರಬೇಕು ಎಂದು ಇದೆಯೋ ಅವನ್ನು ಈ ಇಲಾಖೆಯ ಮುಖಾಂತರವೇ ಜಾರಿಗೆ ತರಬೇಕು. ಹಿಂದೆ ಈ ಇಲಾಖೆಯ ಕೆಲಸವಾದರೂ ಲ್ಯಾಂಡ್ ರೆವಿನ್ಯೂ ವಸೂಲು ಮಾಡುವುದು, ಸರ್ವೆ ಮಾಡುವುದು ಮತ್ತು ರೆಕಾರ್ಡ್‌ಗಳನ್ನು ನೋಡಿಕೊಳ್ಳುವುದು, ಮತ್ತು ಕಾನೂನು ವ್ಯವಸ್ಥೆಯನ್ನು ನೋಡಿಕೊಳ್ಳುವುದು ಇಷ್ಟೇ ಆಗಿತ್ತು. ಆದರೆ ಈಗ ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರ್ ಅವರ ಪವರ್ಸ್ ಕೂಡ ಕೊಟ್ಟಿದ್ದಾರೆ. ಬರಗಾಲ ಪೀಡಿತ ಪ್ರದೇಶಗಳ ಕಾಮಗಾರಿಗಳ ಕೆಲಸ ಅಷ್ಟೆ ಅಲ್ಲ ಎಲ್ಲಾ ಇಲಾಖೆಗಳನ್ನು ಮಾನಿಟರ್ ಮಾಡತಕ್ಕ ಕೆಲಸವನ್ನೂ ಸಹ ಮಾಡಬೇಕು, ಎಲ್ಲಾ ಅಭಿವೃದ್ಧಿ ಕೆಲಸಗಳೂ ಇವರಿಂದಲೇ ಆಗಬೇಕು, ಸರ್ಕಾರದ ಸ್ಪೆಷಲ್ ಪ್ರೋಗ್ರಾಮ್, ಹರಿಜನ ಗಿರಿಜನರ ವಿಶೇಷ ಯೋಜನೆಗಳನ್ನು ನೋಡಿಕೊಳ್ಳತಕ್ಕದ್ದು, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಪ್ಲಾನ್‌ಗಳನ್ನು ರೂಪಿಸತಕ್ಕ ಕೆಲಸ ಎಲ್ಲವನ್ನು ಇವರೇ ಮಾಡಬೇಕು. ಉದಾಹರಣೆಗೆ ತಹಶೀಲ್ದಾರ್ ಅವರ ಮಟ್ಟದಲ್ಲಿ ಕ್ಯಾಸ್ಟ್ ಸರ್ಟಿಫಿಕೇಟ್, ಇನ್‌ಕಂ ಸರ್ಟಿಫಿಕೇಟ್, ಇಪ್ಪತ್ತು ಅಂಶದ ಕಾರ್ಯಕ್ರಮಗಳನ್ನು ಜಾರಿಗೆ ತರುವಂಥಾದ್ದು ಆರ್.ಟಿ, ಮೀಟಿಂಗ್‌ನಲ್ಲಿಯೂ ಕೂಡಾ ಜಿಲ್ಲಾಧಿಕಾರಿಯವರೇ ಪ್ರಿಸೈಡ್ ಮಾಡಬೇಕು. ಇದೆಲ್ಲಾ ನೋಡಿದಾಗ ಜಿಲ್ಲಾಧಿಕಾರಿಯವರು ಫ್ಯಾಮಿಲಿ ಪ್ಲಾನಿಂಗ್‌ನಿಂದ ಹಿಡಿದು ಡಿಸ್ಟ್ರಿಕ್ಟ್ ಪ್ಲಾನಿಂಗ್ ಅಥಾರಿಟಿಯವರೆಗೂ ಎಲ್ಲಾ ಕೆಲಸಗಳನ್ನು ಇವರೇ

---

* ಈ ಚಿಹ್ನೆ ಸಂಭಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನೋಡಿಕೊಳ್ಳಬೇಕು. ಇಲಾಖೆಗಳನ್ನು ಸರಿಯಾದ ರೀತಿಯಲ್ಲಿ ಕೆಲಸ ಮಾಡಿಕೊಳ್ಳುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಕೆಲಸ ಮಾಡತಕ್ಕ ಇನ್‌ಫ್ರಾಸ್ಟ್ರಕ್ಚರ್ಸ್ ತೆಗೆದುಕೊಳ್ಳುವುದು ಅದನ್ನು ಸರಿಪಡಿಸತಕ್ಕ ವಿಚಾರ ಇವೆಲ್ಲವನ್ನೂ ಅವರೇ ಮಾಡಬೇಕು.

ಹಳೆಯದು ಅಂದರೆ ಹಿಂದಿನಿಂದ ಬಂದಂಥ್ಥಾದ್ದೆ ಮುಂದೆ ಹೋಗತಕ್ಕಂಥಾ ವಿಚಾರ ಮಾತ್ರ ಇದೆ. ಇಷ್ಟು ಅಗಾಧತೆಗೆ ತಕ್ಕಂತೆ ಬೇಕಾದ ಸಿಬ್ಬಂದಿ ಬಗ್ಗೆ ಯೋಚನೆ ಮಾಡತಕ್ಕಂಥ ಕೆಲಸ ಇಲ್ಲಿ ನಡೆಯಲಿಲ್ಲ. ಮತ್ತು ಇನ್‌ಫ್ರಾಸ್ಟ್ರಕ್ಚರ್ ಏನು ಇರಬೇಕು ಅದು ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಕರ್ನಾಟಕ ರಾಜ್ಯ 1956ನೇ ಇಸವಿ ಆದಮೇಲೆ, ಪುನರ್ಸಂಘಟನೆ ಆದಮೇಲೆ ಜಿಲ್ಲೆಗಳ ಆಡಳಿತವನ್ನು ಸರಿಯಾಗಿ ನೋಡಿಕೊಳ್ಳಲಿಕ್ಕೆ ಇಷ್ಟರವರೆಗೆ ಆಗಲಿಲ್ಲ. ವಾಸುದೇವರಾವ್ ಕಮಿಟಿ ಸಲಹೆಗಳು ಏನಾಯಿತೋ ಗೊತ್ತಿಲ್ಲ, ಇವತ್ತು 4 ಲಕ್ಷ ಜನಸಂಖ್ಯೆ ಇರತಕ್ಕ ಜಿಲ್ಲೆಗೂ ಒಬ್ಬ ಜಿಲ್ಲಾಧಿಕಾರಿ ಇದ್ದಾರೆ ನಾಲ್ಕೂ ಮುಕ್ಕಾಲು ಲಕ್ಷ ಜನಸಂಖ್ಯೆ ಇರತಕ್ಕಂಥ ಜಿಲ್ಲೆಗೂ ಒಬ್ಬರೇ ಜಿಲ್ಲಾಧಿಕಾರಿ ಇದ್ದಾರೆ ಜಿಲ್ಲಾ ಮತ್ತು ತಾಲ್ಲೂಕಿನ ದಕ್ಷ ಆಡಳಿತದ ಬಗ್ಗೆ ಯಾವ ಒಂದು ಪ್ರಸ್ತಾವನೆಯೂ ಇದರಲ್ಲಿಲ್ಲ, ಜಿಲ್ಲೆಗಳ ಪುನರ್ವಿಂಗಡಣೆ ಆದಮೇಲೆ ಅದಕ್ಕೆ ಬೇಕಾದ ಆಡಳಿತ ಯಂತ್ರವನ್ನು ಸರಿಪಡಿಸಲಿಕ್ಕೆ ಬೇಕಾದ ದಿಟ್ಟತನದ ನಿಲುವನ್ನು ಇವತ್ತು ರಾಜ್ಯಸರ್ಕಾರ ತೋರಿಸಬೇಕಾಗಿದೆ. ರಾಜ್ಯದಲ್ಲಿ ಜನತೆ ಬದಲಾವಣೆ ತಂದಾಗ, ಮೊದಲು ಕಾಣಬೇಕಾದ ಬದಲಾವಣೆ ಅಂದರೆ ತಾಲ್ಲೂಕು ಆಫೀಸಿಗೆ, ಮತ್ತು ಜಿಲ್ಲಾ ಕಛೇರಿಗಳಿಗೆ ರಾಜ್ಯದ ಪ್ರಜೆ ಏನು ನಿರೀಕ್ಷೆ ಇಟ್ಟುಕೊಂಡು ಹೋಗುತ್ತಾನೋ ಅವನಿಗೆ ಅಲ್ಲಿ ಮರ್ಯಾದೆ ಸಿಗಬೇಕು, ಅವನನ್ನು ಕರೆದು ಕೂಡಿಸಿ ಮಾತನಾಡುವಂಥ ಮನೋಭೂಮಿಕೆ ಬೇಕಾಗುತ್ತದೆ. ಇವತ್ತು ಆಡಳಿತ ಯಂತ್ರದಲ್ಲಿ ಅದರಲ್ಲೂ ಕಂದಾಯ ಇಲಾಖೆಯಲ್ಲಿ ಮೊದಲು ಸಫಲವಾದರೆ ಅಲ್ಲಿಂದ ಮುಂದೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಅನೇಕ ವಿಚಾರಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅವರು ತಿಳಿಸಿದಂಥ ವಿಚಾರವನ್ನು ಕಾರ್ಯರೂಪಕ್ಕೆ ತರಬೇಕಾದರೆ ಇವತ್ತು ನಮ್ಮ ಕಂದಾಯ ಇಲಾಖೆಯಲ್ಲಿರತಕ್ಕ ಆಡಳಿತ ಯಂತ್ರ ಸರಿಯಾಗಿರಬೇಕು, ಅದು ಸರಿಯಾಗಿರಲಿಕ್ಕೆ ಬೇಕಾದ ವ್ಯವಸ್ಥೆಯನ್ನು ಹೊಸ ಸರ್ಕಾರ ಮಾಡಬೇಕಾಗಿತ್ತು. ದುರ್ದೈವದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಏನೆಂದರೆ, ಈ ಸರ್ಕಾರ ಬದಲಾದರೂ ಕಂದಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳ ಮನೋಭೂಮಿಕೆ ಬದಲಾಗಿಲ್ಲ; ಅಧಿಕಾರಿಗಳ ಮನೋಭೂಮಿಕೆ ಬದಲಾಗಬೇಕು, ಅದಕ್ಕೆ ಇರತಕ್ಕಂಥ ಡೈರಕ್ಷನ್ಸ್ ಅಂದರೆ ನಿಶ್ಚಿತವಾದಂಥ ಒಂದು ಮಾರ್ಗದರ್ಶನ ಅಭಾವ ಉಂಟು ಆ ಮಾರ್ಗದರ್ಶನದ ಅಭಾವವನ್ನು ತುಂಬಿ ಕೊಡಬೇಕು ಎಂದು ಅತ್ಯಂತ ಕಳಕಳಿಯಿಂದ ಕೇಳುತ್ತಾ ಇದ್ದೇನೆ. ನಾವು ಒಂದು ಜಿಲ್ಲೆಗೆ ಗಡಿ ಎಂದು, ಅಥವಾ ಒಂದು ತಾಲ್ಲೂಕಿನ ಗಡಿ ಎಂದು ಹಾಕಬಹುದು, 20 ಲಕ್ಷ ಜನ ಇರತಕ್ಕಂಥ ಒಂದು ಜಿಲ್ಲೆ ಆಗಬಹುದು, ಅಥವಾ 4 ಲಕ್ಷ ಇರತಕ್ಕಂಥ ಜಿಲ್ಲೆ ಆಗಬಹುದು. ಅದಕ್ಕೆ ಒಂದು ಜಿಲ್ಲಾ ಕಛೇರಿ ಎಂದು ಬೋರ್ಡ್ ಹಾಕುವುದು. ತಾಲ್ಲೂಕುಮಟ್ಟದಲ್ಲಿ ತಾಲ್ಲೂಕು ಕಛೇರಿ ಎಂದು ಬೋರ್ಡ್ ಸರ್ಕಾರ ಹಾಕಬಹುದು. ಆದರೆ ಜನರಿಗೆ ಆ ಬೋರ್ಡಿನ ಹಿಂದೆ ಎಷ್ಟು ಕೆಲಸ ಆಗಬೇಕು, ತಮಗೆ ಬೇಕಾದ ಅವಶ್ಯಕತೆಗಳು ಸಿಗಬೇಕು ಎಂದು ಇರುವಾಗ ಅದನ್ನು ಸರಿಪಡಿಸುವಂಥ ಕೆಲಸ ಮೊಟ್ಟಮೊದಲಿಗೆ ಆಗಬೇಕು, ಈ ವರ್ಷದಲ್ಲಿ ಈಗಾಗಲೇ 6-7 ತಿಂಗಳು ಆಗಿಹೋಯಿತು. ನಾನು ಸುಮಾರು 17 ಜಿಲ್ಲೆಗಳನ್ನು ಸುತ್ತಿ ಬಂದಿದ್ದೇನೆ. ತಾಲ್ಲೂಕು ಕಛೇರಿಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸತಾಯಿಸುತ್ತಾರೆ ಎನ್ನುವ ಭಾವನೆ ಜನರಲ್ಲಿ ಏನಿದೆಯೋ ಅದು ಬದಲಾಗಿಲ್ಲ. ಹೊಸ ಸರ್ಕಾರ ಬಂದಮೇಲೆ ಹೊಸ ಚೈತನ್ಯ ಹೊಸ ದೃಷ್ಟಿ ಬರುವಂಥ ಕೆಲಸ ಇಲ್ಲಿ ಮಾಡಿಲ್ಲ. ಇದನ್ನು ಅತ್ಯಂತ ವಿಷಾದದಿಂದ ಹೇಳುತ್ತಿದ್ದೇನೆ. ದಯವಿಟ್ಟು ಇನ್ನಾದರೂ ಸಮಯ ಹಾಳುಮಾಡದೆ ಅಧಿಕಾರಿಗಳ ಮನೋಭೂಮಿಕೆಯನ್ನು ಬದಲು ಮಾಡುವುದು ಅಗತ್ಯವುಂಟು ಎಂದು ಪ್ರಾರಂಭದಲ್ಲಿ ಹೇಳುತ್ತೇನೆ.

ಇನ್ನು ಭೂಸುಧಾರಣೆ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಅನೇಕ ವಿಚಾರಗಳನ್ನು ಮಾನ್ಯ ಮೊಯಿಲಿಯವರು ಪ್ರಸ್ತಾಪ ಮಾಡಿದ್ದಾರೆ. ಮುಖ್ಯವಾಗಿ ನಾನೂ ಸಹ ಆ ಒಂದು ಜಿಲ್ಲೆಯಿಂದ ಬರುತ್ತಾ ಇದ್ದೇನೆ. ಇಲ್ಲಿ 8 ಲಕ್ಷ, 13 ಸಾವಿರದ 268 ಕೇಸಸ್‌ನಲ್ಲಿ ಅಷ್ಟು ಡಿಕ್ಲರೇಷನ್ಸ್ ಬರಹುದು ಎಂದು ಲೆಕ್ಕ. ಅದರಲ್ಲಿ ಹೆಚ್ಚು ಕಡಿಮೆ 2 ಲಕ್ಷ ಡಿಕ್ಲರೇಷನ್ಸ್ ಬರೀ ದಕ್ಷಿಣ ಜಿಲ್ಲೆಯೊಂದರಿಂದ ಆಗಿದೆ. ಆ ಜಿಲ್ಲೆಯಿಂದ ನಾನೂ ಸಹ ಬರುತ್ತಾ ಇದ್ದೇನೆ. ಇವತ್ತು ಎಲ್ಲಕ್ಕಿಂತ ಮೊದಲು ಹೊಸ ಸರ್ಕಾರ ಬಂದಮೇಲೆ ಒಂದು ಮಾತನ್ನಾದರೂ ಹೇಳಬೇಕಾಗಿತ್ತು. ಏನೆಂದರೆ, ಇನ್ನಷ್ಟು ಒಳ್ಳೆಯ ರೀತಿಯಲ್ಲಿ, ಇನ್ನಷ್ಟು ವ್ಯವಸ್ಥೆಯಾಗಿ ಆ ಗೇಣಿದಾರರಿಗೆ ರಕ್ಷಣೆ ಕೊಡುತ್ತೇವೆ ಎಂದು. ಹಿಂದೆ ಮುಕ್ಕಾಲುಪಾಲು ಕೆಲಸ ಆಗಿಹೋಗಿತ್ತು. ನಿಮ್ಮ ವರದಿ ಪ್ರಕಾರ 1568 ಕೇಸಸ್ ಅಂದರೆ ಡಿಕ್ಲರೇಷನ್ಸ್ ಮಾತ್ರ ಇತ್ಯರ್ಥವಾಗದೇ ಇರತಕ್ಕಂಥಾದ್ದು. ಗೇಣೀದಾರರಿಗೆ ರಕ್ಷಣೆ ಕೂಡತಕ್ಕಂಥ ಅವಕಾಶ ಏನಿದೆ ಇದನ್ನು ಏನಾದರೂ ಹಿಂದೆ ತಗೆದುಕೊಳ್ಳತಕ್ಕ ಮಾತು ಆಡಳಿತ ಪಕ್ಷದಿಂದ ಬರಲಿಲ್ಲ, ಯಾರೂ ಆಡಲಿಲ್ಲ ಎಂದು ಅಷ್ಟಕ್ಕೆ ಸಮಾಧಾನ ಪಡಬೇಕಾಗಿದೆ. ಇವತ್ತು ಹೈಕೋರ್ಟಿನಿಂದ ಎಷ್ಟು ಕೇಸಸ್ ರಿಮ್ಯಾಂಡಾಗಿ ಬರುತ್ತಾ ಇದೆ, ಬೇರೆ ರೀತಿಯಲ್ಲಿ ಸ್ಟೇ ಆಗಿ ಬರುತ್ತಾ ಇದೆ ಎಂದು ನೋಡಬೇಕಾಗಿದೆ ಅವನ ಕಾಲದಲ್ಲಿ ಅಲ್ಲ, ಅವನ ತಂದೆ ಕಾಲದಲ್ಲಿ ಅಲ್ಲ, ಅವನ ಅಜ್ಜನ ಕಾಲದಿಂದ ಅವರು ಗೇಣೀದಾರರ

ಆಗಿದ್ದವರಿಗೆ ಭೂಸುಧಾರಣೆ ಫಲವಾಗಿ, 1974ರ ನಂತರ ಟ್ರಿಬ್ಯುನಲ್ ಮುಖಾಂತರ ಒಂದು ತುಂಡು ಭೂಮಿ ಸಿಕ್ಕಿದೆ, ಅದಕ್ಕೆ ಅವರಿಗೆ ಪೂರ್ತಿ ಹಕ್ಕು ಸಿಕ್ಕಿಲ್ಲ. ಇವರು ಪೂರ್ತಿ ಹಕ್ಕು ಸಿಕ್ಕಿದೆ ಎಂದು ಹೇಳುತ್ತಾರೆ, ಆದರಲ್ಲಿ ಅನುಭೋಗದಾರ ಎಂದು ನೊಂದಾಯಿಸಲ್ಪಟ್ಟಿದೆ ಎಂದು ಇದೆ. ಇದರ ಪ್ರಕಾರ ಪಟ್ಟಾ ಕೊಟ್ಟರೆ ಅವರವರೊಳಗೆ ವಿಭಜನೆ ಮಾಡಿಕೊಳ್ಳಲಿಕ್ಕೆ ಹಕ್ಕಿಲ್ಲ, ಅಡವಿಟ್ಟು ಬ್ಯಾಂಕಿನಲ್ಲಿ ದುಡ್ಡು ತೆಗೆದುಕೊಳ್ಳಲಿಕ್ಕೆ ಹಕ್ಕಿಲ್ಲ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಮಾರ್ಗದರ್ಶನ ಇದ್ದ ರೀತಿಯಲ್ಲಿ ಮಾಡಬಹುದೇ ವಿನಹ ಅವನ ಇಚ್ಛಾನುಸಾರ ಮಾರುವಂಥ ಹಕ್ಕಿಲ್ಲ. ಅಂತಹ ಗೇಣೀದಾರರು ಈ ರೀತಿ ಬೇರೆ ಬೇರೆ ತಡೆಯಾಜ್ಞೆಗಳುಬಂದು ಗೊಂದಲದ ಸುಳಿಯಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರಿಗೆ ಲೀಗಲ್ ಏಯ್ಡ್ ಸೆಲ್ ಎಂದು ಮಾಡಿದ್ದೀರಿ ನೀವು ಕೊಟ್ಟಂಥ ಅಂಕಿಅಂಶಗಳ ಪ್ರಕಾರ ಇಷ್ಟು ಕಡಿಮೆ ಜನರಿಗೆ ಅಂದರೆ ಮಾಜಿ ಗೇಣೀದಾರರಿಗೆ ಲೀಗಲ್ ಏಯ್ಡ್ ಸೆಲ್‌ನಿಂದ ಸಹಾಯ ಸಿಕ್ಕಿದೆ ಎಂದು ಸ್ಪಷ್ಟವಾಗಿದೆ. ಆದುದರಿಂದ ಇವರಿಂದ ಕೆಲಸ ಸರಿಯಾಗಿ ಆಗುತ್ತಾ ಇಲ್ಲ. ಲೀಗಲ್ ಏಯ್ಡ್ ಸೆಲ್‌ನಿಂದ ಸಹಾಯ ಸಿಗುತ್ತದೆ ಎಂದು ನಂಬಿಕೊಂಡು ಹೋದವರು ಇವತ್ತು ನಮ್ಮ ಹತ್ತಿರ ಬರುತ್ತಾ ಇದ್ದಾರೆ. ಎರಡು ಮೂರು ವರ್ಷಗಳಿಂದ ಲೀಗಲ್ ಏಯ್ಡ್ ಸೆಲ್‌ನವರು ಗೇಣೀದಾರರಿಗೆ ರಕ್ಷಣೆ ಕೊಟ್ಟಿರತಕ್ಕಂಥಾದ್ದು ಇಲ್ಲ. ಹಿಂದೆ ಆ ಜಾಗ ರಿಸೀವರ್ ಹತ್ತಿರ ಇದ್ದರೆ ಇವತ್ತಿಗೂ ರಿಸೀವರ್ ಹತ್ತಿರ ಆ ಜಾಗ ಇದೆ. ಎಲ್ಲಕ್ಕಿಂತ ಮೊದಲು ಭೂಸುಧಾರಣೆಯಿಂದ, ಮಾಜಿ ಗೇಣೀದಾರರಿಗೆ ಸಂಪೂರ್ಣ ರಕ್ಷಣೆ ಕೊಡತಕ್ಕ ಒಂದು ವಾತಾವರಣ ಅಲ್ಲಿ ನೆಲೆಗೊಳ್ಳಲಿಕ್ಕೆ ನಮ್ಮ ಸರ್ಕಾರದ ವತಿಯಿಂದ ಅದಕ್ಕೆ ಬೇಕಾದಂಥ ಮಾರ್ಗದರ್ಶನ ಸಿಗಬೇಕು ಎಂದು ಹೇಳುತ್ತೇನೆ. ಕೆಲವು ಅಧಿಕಾರಿಗಳು ಸಂಪೂರ್ಣವಾಗಿ ಇದರ ಹಿಂದೆ ಇನ್‌ವಾಲ್ವ್ ಆಗದೇ ಇದ್ದರೆ ಗೇಣೀದಾರರಿಗೆ ರಕ್ಷಣೆ ಸಿಗುತ್ತಿತ್ತು, ಭೂಸುಧಾರಣೆಯನ್ನು ಜಾರಿಗೊಳಿಸುವಲ್ಲಿ ಎಲ್ಲರೂ ಇನ್‌ವಾಲ್ವ್ಡ್ ಆಗಿದ್ದಾರೆ ಎಂದಲ್ಲ, ಕೆಲವರು ಆಗಿರಬಹುದು. ಆದುದರಿಂದ ಎಷ್ಟು ಜನರನ್ನು ಈ ಒಂದು ತಹಬಂದಿಗೆ ತರಲಿಕ್ಕೆ ಸಾಧ್ಯವಾಗುತ್ತದೋ ಆಗ ಖಂಡಿತವಾಗಿಯೂ ಆದರಿಂದ ರಕ್ಷಣೆ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಈ ಕೆಲಸ ಆಗಬೇಕಾಗಿದೆ. ಆಮೇಲೆ ಒಂದು ಸಣ್ಣ ಭೂಮಿ ಸಿಕ್ಕಿದಂತಹವರಿಗೆ ಅದನ್ನು ಮುಫತ್ತಾಗಿ ಕೊಡಬೇಕಾಗಿದೆ. ಒಂದು ಹೆಕ್ಟೇರ್ ಭೂಮಿ, ಅಂದರೆ 2.2 ಎಕರೆ–ಅಷ್ಟು ಸಣ್ಣ ಭೂಮಿಯಿಂದ ಏನು ಉತ್ಪತ್ತಿ ಸಿಗಲಿಕ್ಕೆ ಸಾಧ್ಯವುಂಟು ಅಂತಹವನಿಂದಲೂ ಪರಿಹಾರಬೇಕು ಎಂದು ಹೇಳುವುದು ಸಹಜವಲ್ಲ. ಸರ್ಕಾರ ಅಂತಹವರಿಗೆ ಮುಫತ್ತಾಗಿ ಯಾವರೀತಿ ಪರಿಹಾರ ಕೊಡಬೇಕು ಎಂದು ಯೋಚನೆ ಮಾಡಬೇಕು ಮತ್ತು ಸಂಪೂರ್ಣವಾಗಿ ಅವರ ಇಚ್ಛಾನುಸಾರ ವ್ಯವಹಾರ ಮಾಡುವಂಥ ಹಕ್ಕು ಇರತಕ್ಕ ಪಟ್ಟ ಕೊಡಬೇಕು. ನೀವು ಕೊಟ್ಟಿರತಕ್ಕ ಪಟ್ಟಾ ಹಕ್ಕಿನ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ, 1974ನೇ ಇಸವಿಯಲ್ಲಿ ಭೂಸುಧಾರಣೆಗೆ ತಿದ್ದುಪಡಿಯಾಯಿತು, ಆಗ 6 ವರ್ಷದವರೆಗೆ ಮಾರಲಿಕ್ಕೆ ಹಕ್ಕಿಲ್ಲ ಎನ್ನತಕ್ಕ ಕ್ಲಾಸ್ ಇತ್ತು, 1978ನೇ ಇಸವಿಯಲ್ಲಿ 6 ವರ್ಷ ಇದ್ದುದನ್ನು 15 ವರ್ಷಗಳವರೆಗೆ ಮಾರಲಿಕ್ಕೆ ಹಕ್ಕಿಲ್ಲ ಎಂದು ಮಾಡಿದರು. ಅಂದರೆ ಯಾವ ಬಗ್ಗೆ ಹೆಚ್ಚು ವಿಶ್ವಾಸ ಇರಬೇಕಾಗಿತ್ತೋ ಅಂತಹ ಅತೀ ಬಡವನ ಬಗ್ಗೆ ಅವಿಶ್ವಾಸ ತೋರಿಸುತ್ತಾ ಇದ್ದಾರೆ. ಮಹಾತ್ಮಾಗಾಂಧಿಯವರು, ಅತಿ ಬಡವನನ್ನು ನಂಬಬಹುದು, ನಾನು ದೊಡ್ಡ ದೊಡ್ಡ ಶ್ರೀಮಂತರನ್ನು ನಂಬುವುದಿಲ್ಲ ಎಂದು ಹೇಳುತ್ತಿದ್ದರು. ಬ್ಯಾಂಕಿನಲ್ಲೂ ಕೂಡ ಅತಿ ಬಡವ ತೆಗೆದುಕೊಂಡಂಥ ಸಾಲವನ್ನು ಮರ್ಯಾದೆಗೋಸ್ಕರ ವಾಪಸ್ ಕೊಡುತ್ತಾರೆ, ಶ್ರೀಮಂತರಿಂದ ವಾಪಸ್ ಬರುವುದಿಲ್ಲ ಎಂದು ಹೇಳುತ್ತಾರೆ. ಇದು ಪೇಪರಿನಲ್ಲೂ ಕೂಡ ಬಂದಿದೆ. ಬಡವನು ಸಾಮಾನ್ಯ ಪ್ರಜೆ, ಅವನು ವಿಶ್ವಾಸದಿಂದ ಇಲ್ಲಿ ಬಂದಿದ್ದಾನೆ, ಅಂತಹ ಬಡವನಿಗೆ 6 ವರ್ಷದಿಂದ 15 ವರ್ಷಗಳವರೆಗೆ ಮಾರುವುದಕ್ಕೆ ಹಕ್ಕಿಲ್ಲ ಅಂದರೆ ಅವನನ್ನು ನೀವು ನಂಬುವುದಿಲ್ಲ, ಅವನು ಮಾರಿ ತಿನ್ನುತ್ತಾನೆ ಎಂದು ಹೇಳತಕ್ಕಂಥ ಪರಿಸ್ಥಿತಿ ಬಂದಿದೆ. ಇನ್ನೊಂದು ವಿಪರ್ಯಾಸ ಬಂದಿದೆ. ಏನೆಂದರೆ, ನಮ್ಮಲ್ಲಿ ಚಾಲಗೇಣಿದಾರರು ಮತ್ತು ಮೂಲ ಗೇಣಿದಾರರು ಎಂದು ಇದ್ದರು. ಈ ಮೂಲ ಗೇಣೀದಾರರಿಗೆ ಮುಂದೆ ಪರ್ಮನೆಂಟ್ ಟೆನೆಂಟ್ ಎಂದು ಅವರಿಗೆ ಮಾರಾಟದ ಹಕ್ಕು ಇತ್ತು. That is called as Permanent Tenancy. They had a marketable title earlier to this enactment. ನೀವು ಏನು ಮಾಡಿದಿರಿ ಅಂದರೆ ಮೂಲಗೇಣೀದಾರರೂ ಕೂಡ ಪಟ್ಟಾ ಹಕ್ಕು ಕೊಡುತ್ತಾರೆಂದು ಡಿಕ್ಲರೇಷನ್ ಕೊಟ್ಟರು, ಡಿಕ್ಲರೇಷನ್ ಕೊಟ್ಟಮೇಲೆ ಅವರಿಗೂ ಕೆ. ಎಲ್. ಆರ್. ಎಸ್. ಪ್ರಕಾರ ಅನುಭೋಗದಾರ ಎಂದು ನೊಂದಾಯಿಸಲ್ಪಟ್ಟಿದೆ ಎಂದು ಬಂತು. ಅವರಿಗೂ ಮಾರಾಟದ ಹಕ್ಕಿಗೆ ತೊಡಕು ಬಂದಿದೆ. ಈ ರೀತಿ ಎಲ್ಲಾದರೂ ಇದೆಯೇ ? ಒಕ್ಕಲು ಇದ್ದವನಿಗೆ ರಕ್ಷಣೆ ಕೊಡತಕ್ಕಂಥ ಕಾನೂನು ತಂದು, ಈಗಾಗಲೇ ಇದ್ದಂಥ ಹಕ್ಕನ್ನು ಮೊಟಕು ಮಾಡುವಂಥ ಶಾಸನ ಎಲ್ಲಿಯಾದರೂ ಇರಲಿಕ್ಕೆ ಸಾಧ್ಯವೇ ?

2-30 p.m.

ಈ ಮಾಲೀಕರಿಗೆ ಹಿಂದೆ ಮಾರಾಟ ಮಾಡತಕ್ಕ ಹಕ್ಕು ಏನಿತ್ತು ಅದು ಈ ಕಾನೂನು ಬಂದ ಮೇಲೆ ಮೊಟಕು ಆಗಿದೆ ಇದನ್ನಾದರೂ ಸರಿಪಡಿಸಿ ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾವಿರಾರು ಜನ ಬಹಳ ತೊಂದರೆಗೆ ಒಳಪಟ್ಟಿದ್ದಾರೆ. ಮಾಜಿ ಧಣಿ ಅನುಮತಿ ಕೊಟ್ಟರೂ ಕೂಡ ಈಗಿನ ಕಾನೂನಿನ ಪ್ರಕಾರವಾಗಿ ಕೊಡುವುದಕ್ಕೆ ಬರುವುದಿಲ್ಲ, ಆದುದರಿಂದ ಈ ಭೂಸುಧಾರಣಾ ಕಾನೂನಿಗೆ ತಿದ್ದುಪಡಿ

ಆಗಬೇಕಾಗಿದೆ. ಮತ್ತು ಚಾಲು ಗೇಣಿದಾರರಿಗೆ ಟೆನೆನ್ಸಿಯನ್ನು ಸಂಪೂರ್ಣವಾದ ಹಕ್ಕು ಇಲ್ಲದೇ ಅವರ ಇಚ್ಛಾನುಸಾರ ಮಾರಾಟ ಮಾಡಲಿಕ್ಕೆ ಈಗಿನಿಂದಲೇ ಅಧಿಕಾರವನ್ನು ಕೊಡಲಿಕ್ಕೆ ಕೆಲಸ ವಾಗಬೇಕಾಗಿದೆ.

ಇನ್ನು ಪರಿಹಾರವನ್ನು ಕೊಟ್ಟಿರುವುದರ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ, ಅದರಲ್ಲಿ 28 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೀರಿ ಅದರಲ್ಲಿ 10 ಕೋಟಿ ರೂಪಾಯಿಗಳನ್ನು ಸರ್ಕಾರ ರಿಲೀಜ್ ಮಾಡಿದೆ ಎಂದು ಹೇಳಿದ್ದೀರಿ, ಮಿಕ್ಕಿದ್ದನ್ನು ಇನ್ನೂ ಏತಕ್ಕೆ ರಿಲೀಜ್ ಮಾಡಲಿಲ್ಲ ಎನ್ನುವುದು ಗೊತ್ತಾಗಲಿಲ್ಲ. ನಾನು 3–4 ಕಡೆಯ ಟ್ರಿಬ್ಯೂನಲ್‌ಗಳಿಗೆ ಹೋಗಿ ನೋಡಿದ್ದೇನೆ, ಅಲ್ಲಿಗೆ ಬರತಕ್ಕ ಜನರಿಗೆ ಯಾವ ರೀತಿಯ ಅನುಭವವಾಗಿದೆ ಎನ್ನುವುದರ ಬಗ್ಗೆ ನಾನೇ ಸ್ವತಃ ಹೋಗಿ ಖುದ್ದಾಗಿ ತಿಳಿದುಕೊಂಡಿದ್ದೇನೆ. ಶೇಕಡ 10 ರಷ್ಟು ಲಂಚವನ್ನು ಕೊಡದಿದ್ದರೆ ಅವರ ಕಾಗದ ಪತ್ರ ಗಳು ತಯಾರು ಮಾಡುವುದೇ ಇಲ್ಲ, ಇದರ ಬಗ್ಗೆ ಸಾಕಷ್ಟು ದೂರುಗಳು ಬಂದಿದೆ. ಇದರ ಬಗ್ಗೆ ನಾನೊಂದು ಪ್ರಶ್ನೆಯನ್ನು ಸಹ ಕಳುಹಿಸಿದ್ದೇನೆ, ಇದರ ಬಗ್ಗೆ ಕೆಲವರು ಮಾನ್ಯ ಮಂತ್ರಿಯವರಿಗೆ ಒಂದು ಪತ್ರ ಬರೆದು ಅದರ ಕಾಪಿಯನ್ನು ನನಗೆ ಕಳುಹಿಸಿ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಮೊನ್ನೆ ದಿವಸ ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಯವರು ಲಿಖಿತ ಮೂಲಕ ಉತ್ತರ ಕೊಡುತ್ತಾ ಇದು ಸರ್ಕಾರದ ವರ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೀರಿ. ಈ ರೀತಿಯಾದರೆ ಬಹಳ ಕಷ್ಟವಾದೀತು. ಇನ್ನು ಪರಿ ಹಾರವನ್ನು ಕೊಡುವ ವಿಷಯದಲ್ಲಿ ನಮ್ಮ ಮುಖ್ಯಮಂತ್ರಿಗಳವರು ಚೆಕ್ ಮುಖಾಂತರ ಯಾರಿಗೆ ಪರಿ ಹಾರ ಸಲ್ಲಬೇಕಾಗಿದೆಯೋ ಅಂಥವರಿಗೆ ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದು ಇವತ್ತಿನವರೆಗೂ ಜಾರಿಗೆ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಬಿ. ಎಲ್. ಪಾಟೀಲ್.—ಚೆಕ್ ಮುಖಾಂತರವಾಗಿ ಕಳುಹಿಸಿ ಕೊಡುತ್ತೇವೆ, ಇಲ್ಲದಿದ್ದರೆ ಅವರ ಅಕೌಂಟ್ ಇದ್ದರೆ ಅದಕ್ಕೆ ಟ್ರಾನ್ಸ್‌ಫರ್ ಮಾಡಬೇಕೆಂದು ಈಗಾಗಲೇ ಆರ್ಡರ್ ಮಾಡಿದ್ದೇವೆ.

ಶ್ರೀ ಎಂ. ಎಸ್. ಸೂರ್ಯನಾರಾಯಣ ರಾವ್.—ಚೆಕ್ ಮುಖಾಂತರ ಕೊಡಲು ಕೂಡ ಇಷ್ಟು ಪರ್ಸೆಂಟ್ ಕಮಿಷನ್ ಕೊಡಬೇಕೆಂದು ಹೇಳಿಯೇ ಚೆಕ್ ಕೊಡುತ್ತಾರೆ.

ಡಾ॥ ವಿ.ಎಸ್. ಆಚಾರ್.—ನಮ್ಮ ಪರಿಸ್ಥಿತಿ ಹೇಗಾಗಿದೆ ಎಂದರೆ ನೇಗಿಲ ನೊಗಕ್ಕೆ ಹೆಗಲು ಕೊಟ್ಟಿದ್ದು ಆಗಿದೆ....

ಶ್ರೀ ಎ. ಲಕ್ಷ್ಮೀಸಾಗರ್.—ಡಾ॥ ಆಚಾರ್‌ರವರು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದನ್ನು ಯಾವ ರೀತಿಯಾಗಿ ತಪ್ಪಿಸಬಹುದು, ಸುಲುಭೋಪಾಯ ಯಾವುದು, ಹೇಗೆ ತಪ್ಪಿಸಬಹುದು ಎನ್ನುವ ಬಗ್ಗೆ ಹೇಳಿ ಕೊಟ್ಟರೆ ಅದನ್ನು ಅನುಸರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಲ್. ಪಾಟೀಲ್.—ಚೆಕ್ ಮೂಲಕ ಕಳುಹಿಸಿ ಕೊಡುತ್ತೇವೆ, ಅಕೌಂಟ್ ಇರತಕ್ಕವರಿಗೆ ಅವರ ಅಕೌಂಟಿಗೆ ಜಮಾ ಮಾಡುವ ಬಗ್ಗೆ ತಿಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳುವ ಹಾಗೆ ಆ ರೀತಿಯಾದರೂ ಲಂಚ ತೆಗೆದುಕೊಂಡಿರುವ ಬಗ್ಗೆ ಮಾಹಿತಿ ಇದ್ದರೆ ಕೊಡಲಿ ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಡಾ॥ ವಿ.ಎಸ್. ಆಚಾರ್.—ನಮ್ಮ ಜಿಲ್ಲೆಯ ಪತ್ರಿಕೆಯಲ್ಲಿ ಎಲ್ಲಾ ಬಂದಿದೆ. ಶೇಕಡಾ 10 ರಷ್ಟು ಲಂಚ ತೆಗೆದುಕೊಂಡು ಕೆಲಸ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ತಾವು ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ ಇದರ ಬಗ್ಗೆ ನಮ್ಮ ಜಿಲ್ಲೆಯ ಪತ್ರಿಕೆಗಳವರು ಪ್ರಕಟ ಮಾಡಿದ್ದಾರೆ. ಬ್ರಹ್ಮಾವರಕ್ಕೆ ನಾನು ಮತ್ತು ನಮ್ಮ ಬಿ. ಬಿ. ಶೆಟ್ಟರು ಹೋದಾಗ ಅಲ್ಲಿ ನಮ್ಮಿಬ್ಬ ರನ್ನು ಹಿಡಿದು ನಿಲ್ಲಿಸಿ ಕೇಳಿದರು, ನಿಮಗೆಲ್ಲಾ ನಾವು ಓಟು ಹಾಕಿ ಕಳುಹಿಸಿ ಕೊಟ್ಟಿದ್ದೇವೆ, ನಮ್ಮ ಬೆಂಬಲ ದಿಂದ ಸರ್ಕಾರ ನಡೆಯುತ್ತಿದೆ, ಉಡುಪಿ ತಾಲ್ಲೂಕಿನಲ್ಲಿ ಶೇಕಡಾ 10 ಲಂಚ ಕೊಡದಿದ್ದರೆ ಒಂದೇ ಒಂದು ಪರಿಹಾರ ಕೂಡ ಸಿಕ್ಕುವುದಿಲ್ಲ ಎನ್ನತಕ್ಕ ಆಪಾದನೆಯನ್ನು ಮಾಡಿದರು. ಅದಕ್ಕೆ ನಾವು ಎಲ್ಲಾ ವಿವರ ವನ್ನು ಅವರಿಂದ ಪಡೆದು ಉಡುಪಿ ತಾಲ್ಲೂಕ್ ಆಫೀಸ್‌ಗೆ ಹೋಗಿ ಕಛೇರಿಯಲ್ಲಿದ್ದವರನ್ನೆಲ್ಲಾ ಆಚೆಗೆ ಕಳುಹಿಸಿ ಸಂಭಂಧಪಟ್ಟ ಕೇಸ್ ವರ್ಕರ್‌ರನ್ನು ನೇರವಾಗಿ ಕೇಳಿದೆವು, ನೀವು ಲಂಚವನ್ನು ತೆಗೆದುಕೊಳ್ಳು ತ್ತಿದ್ದೀರಿ ಎಂದು ಸಾರ್ವಜನಿಕರಿಂದ ನಮಗೆ ನೇರವಾಗಿ ದೂರು ಬಂದಿದೆ, ಇನ್ನು ಮುಂದೆ ಆ ರೀತಿ ಮಾಡ ಬೇಡಿ ಎಂದು ಅವರಿಗೆ ನಾವು ಎಚ್ಚರಿಕೆ ಕೊಟ್ಟು ಬಂದಿದ್ದೇವೆ. ಇಷ್ಟಾದರೂ ಕೂಡ 10 ದಿವಸಗಳಾದ ಮೇಲೆ ಒಬ್ಬ ವ್ಯಕ್ತಿ ಬಂದು ಹೇಳಿದರು 8 ಸಾವಿರ ರೂಪಾಯಿಗಳ ಪರಿಹಾರಧನ ಬರಬೇಕಾದರೆ 800 ರೂಪಾಯಿ ಕೊಡಬೇಕೆಂದು ಕೇಳುತ್ತಿದ್ದಾರೆ, ಅದನ್ನು ಕೊಡದಿದ್ದರೆ ನಮ್ಮ ಕೆಲಸವಾಗುವುದಿಲ್ಲವೆಂದು ಹೇಳಿದರು. ಈ ರೀತಿಯಾಗಿ ಇನ್ನೂ ಲಂಚದ ಹಾವಳಿ ನಡೆಯುತ್ತಿರುವುದರಿಂದ ನಾನು ಬಹಳ ಬೇಜಾರು ಪಟ್ಟುಕೊಂಡು ಕೇಳುತ್ತಿದ್ದೇನೆ. ಇವತ್ತು ಅವರಿಗೆ 100 ರೂಪಾಯಿ ಇರಲಿ ಎಷ್ಟೇ ಪರಿಹಾರ ಧನ ವಿರಲಿ ಅವರಿಗೆ ಚೆಕ್ ಮುಖಾಂತರ ಯಾವುದೇ ಲಂಚ ತೆಗೆದುಕೊಳ್ಳದೇ ಅವರಿಗೆ ಒದಗಿಸಿ ಕೊಡುವ ಹಾಗೆ ವ್ಯವಸ್ಥೆ ಮಾಡಿ.

ಒಬ್ಬ ಮಾನ್ಯ ಸದಸ್ಯರು.—ಲಂಚವನ್ನು ಯಾವ ರೀತಿಯಾಗಿ ನಿಲ್ಲಿಸಬಹುದು ಎನ್ನುವ ಬಗ್ಗೆ ಏನಾದರೂ ಸಲಹೆ ಇದ್ದರೆ ತಿಳಿಸಿ ಎಂದು ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ಡಾ॥ ಆಚಾರ್‌ರವರನ್ನು

ಕೇಳಿದರು, ಅದಕ್ಕೆ ನಾನು ಸಲಹೆ ಕೊಡುವುದು ಏನೆಂದರೆ ಯಾವುದೇ ಕೇಸ್ ಇಖಾಲೆಯಾದ ಇಷ್ಟು ದಿವಸದೊಳಗೆ ಸಂಬಂಧಪಟ್ಟವರಿಗೆ ಇಂತಿಷ್ಟು ದಿನದೊಳಗೇ ಪರಿಹಾರಧನ ಚೆಕ್ ಮುಖಾಂತರವಾಗಿ ಹೋಗಬೇಕೆಂದು ನಿಗದಿ ಮಾಡಿ. ಆ ರೀತಿಯಾಗಿ ಕಳುಹಿಸದಿದ್ದರೆ ಅದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡರೆ ಎಲ್ಲಾ ಸರಿಹೋಗುತ್ತದೆ. ಆಗ ಭ್ರಷ್ಟಾಚಾರಕ್ಕೂ ಅವಕಾಶವಿರುವುದಿಲ್ಲ.

ಡಾ॥ ವಿ. ಎಸ್. ಆಚಾರ್.—ಅನೇಕ ಕೇಸ್‌ಗಳು ಹೈಕೋರ್ಟಿನಲ್ಲಿ ಇವೆ. ಅದರ ಬಗ್ಗೆ ತಾವು ಇಲ್ಲಿ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಾ. ಅದರಲ್ಲಿ ಸುಮಾರು 8 ಸಾವಿರ ಚಿಲ್ಲರೆ ಕೇಸ್‌ಗಳ ಬಗ್ಗೆ ಟ್ರಿಬ್ಯೂನಲ್‌ನಲ್ಲಿ ಏನು ತೀರ್ಮಾನ ಕೊಡಲಾಗಿತ್ತು. ಅದನ್ನು ರದ್ದುಮಾಡಲಾಗಿದೆ. ಅವೆಲ್ಲಾ ರಿಮೊಂಡ್ ಆಗಿ ಹೋಗಿದೆ. ಇನ್ನೊಮ್ಮೆ ತನಿಖೆಯಾಗಲಿ ಎಂದು. ಆದ ಟ್ರಿಬ್ಯೂನಲ್‌ಗಳನ್ನು ಎಲ್ಲಾ ಕಡೆಗಳಲ್ಲೂ ನೇಮಕ ಮಾಡಿ ಆಷ್ಟೆ ಹೊರಟಿಲ್ಲವೆಂದು ನನಗನ್ನಿಸುತ್ತದೆ. ಶಿವಮೊಗ್ಗ ಮತ್ತಿತರ ಜಿಲ್ಲೆಗಳಲ್ಲಿ ಟ್ರಿಬ್ಯೂನಲ್‌ಗಳು ಇನ್ನೂ ನೇಮಕವಾಗಿಲ್ಲ, ಇದರಿಂದಾಗಿ ಅವು ಕೆಲಸ ಪ್ರಾರಂಭ ಮಾಡಿಲ್ಲ. ರಿಮ್ಯಾಂಡ್ ಆಗಿ ಉಳಿದಿರತಕ್ಕಂಥ ಕೇಸ್‌ಗಳು 37 ಸಾವಿರ ಇದೆ. 4 ಲಕ್ಷ ಚಿಲ್ಲರೆ ಕೇಸ್‌ಗಳು ಇತ್ಯರ್ಥವಾಗದೆ. ಇದರಲ್ಲಿ ಪುನಃ ಇನ್ನು ಕೆಲವರು ಹೈಕೋರ್ಟಿಗೆ ಹೋಗುವವರು ಇರಬಹುದು. ಇವೆಲ್ಲಾ ಪುನಃ ಕೋರ್ಟಿಗೆ ಹೋಗಿ ಪುನಃ ರಿಮ್ಯಾಂಡ್ ಆಗಿ ಟ್ರಿಬ್ಯೂನಲ್‌ಗೆ ಬರುವುದನ್ನು ತಪ್ಪಿಸುವ ದೃಷ್ಟಿಯಿಂದ ಆಯಾಯಾ ಜಿಲ್ಲೆಗಳಲ್ಲಿ ಅಪಲೇಟ್ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಬೇಕು. ಅಲ್ಲಿ ವಿಶೇಷ ಜಿಲ್ಲಾಧಿಕಾರಿಗಳು ಇರುತ್ತಾರೆ. ನೀವು ಹೀಗೆ ಮಾಡಿದರೆ ಮಾರು ಹೈಕೋರ್ಟಿಗೆ ಬರುವುದಕ್ಕೆ ಶಕ್ತಿ ಇರುವುದಿಲ್ಲವೋ ಅಂಥವನೂ ಸಹ ಇವತ್ತಿನ ದಿವಸ ಒಂದು ರೂಪಾಯಿ ಸ್ಟಾಂಪ್ ಹಚ್ಚಿ ಕೇಸ್ ಹಾಕುವುದಕ್ಕೆ ಅನುಕೂಲವಾಗುತ್ತದೆ, ಇದರಿಂದ ಸರ್ಕಾರಕ್ಕೂ ಸಹ ಫ್ರೀ ಲೀಗಲ್ ಏಡ್ ಕೊಡುವ ಅವಶ್ಯಕತೆಯೂ ಇರುವುದಿಲ್ಲ. ಆದುದರಿಂದ ತಾವು ಡಿಸ್ಟ್ರಿಕ್ಟ್‌ಗಳಲ್ಲಿಯೇ ಈ ಅಪೆಲೆಟ್ ಟ್ರಿಬ್ಯೂನಲ್‌ಗಳನ್ನು ಮಾಡಿದರೆ ಅಲ್ಲಿರತಕ್ಕ ಜಿಲ್ಲಾಧಿಕಾರಿಗಳೇ ಇದನ್ನು ಹ್ಯಾಂಡಲ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೂ ಮೊದಲು ನೀವು ಎಲ್ಲೆಲ್ಲಿ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಿಲ್ಲವೋ ಅಂಥಾ ಕಡೆಗಳಲ್ಲಿ ಕೂಡಲೇ ಆದಷ್ಟು ಬೇಗ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಿ. ಇನ್ನು ಮಾಜಿ ಒಕ್ಕಲುದಾರರಿಗೆ ಅವರ ಭೂಮಿಯ ಹಿಂದುಗಡೆಯ ಭಾಗದಲ್ಲಿ ಸರ್ಕಾರಿ ಜಾಗವಿದ್ದರೆ ಅವನು ಕೈ ಮಾಡಬೇಕಾಗಿದ್ದರೆ, ನಮ್ಮ ಕಡೆ ಕೊಂಕಿ ಹಕ್ಕು ಎಂದು ಹೇಳುತ್ತಾರೆ, ಅದನ್ನು ಅವರಿಗೆ ಕೊಡದಿದ್ದರೆ ಖಂಡಿತವಾಗಿಯೂ ಕಷ್ಟವಾಗುತ್ತದೆ, ಅವನು ಕೃಷಿ ವ್ಯವಸಾಯ ಮಾಡುವುದಕ್ಕೆ ಬರುವಂಥಾ ಸಂದರ್ಭ ಇರುವುದರಿಂದ ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಅಂದರೆ ಕಳೆದ ಎರಡು ವರ್ಷಗಳಲ್ಲಿ ಭೂಸುಧಾರಣಾ ಕಾರ್ಯಕ್ರಮದನ್ವಯ ಏನು ಕೇಸುಗಳು ಇತ್ಯರ್ಥವಾಗಿವೆ ಅದರಲ್ಲಿ ಯಾರು 'ನಾವೇ ಈ ಭೂಮಿಯ ಅನುಭವಸ್ಥರು' ಎಂದು ಹೇಳಿದ್ದರೋ ಅಂಥವರ ಪೈಕಿ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರಲ್ಲೇ ಜಗಳ ಪ್ರಾರಂಭವಾಗಿದೆ. ಅಪಲೇಟ್ ಟ್ರಿಬ್ಯುನಲ್‌ಗಳನ್ನು ಮಾಡಿದರೆ ಅದರಿಂದ ಆ ಜಗಳಗಳನ್ನು ತೀರ್ಮಾನ ಮಾಡಲು ಅನುಕೂಲವಾಗುತ್ತದೆ. ಸರಿಯಾದ ಮಾರ್ಗದರ್ಶನ ಇಲ್ಲದಿದ್ದರೆ ಅಥವಾ ಅವಕಾಶ ಇಲ್ಲದಿದ್ದರೆ ಪೋಲೀಸರು ಅವರಿಗೆ ಇಚ್ಛೆ ಬಂದ ರೀತಿಯಲ್ಲಿ ತೊಂದರೆ ಕೊಡತಕ್ಕದ್ದು ಇದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಸರಿಯಾದ ವ್ಯವಸ್ಥೆ ಮಾಡಬೇಕು. ಭೂಸುಧಾರಣಾ ಕಾಯಿದೆ ಅನ್ವಯ 1982ನೇ ಇಸವಿ ಡಿಸೆಂಬರ್ ಅಂತ್ಯದೊಳಗೆ ಏನೇನು ಕೇಸುಗಳು ಇತ್ಯರ್ಥವಾಗಿವೆ ಇವುಗಳ ಬಗ್ಗೆ ನಂತರದ 6–7 ತಿಂಗಳಲ್ಲಿ ನಡೆದ ಘಟನೆಗಳ ಬಗ್ಗೆ ಸದನದಲ್ಲಿ ಬರುವ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ರೈತರಿಗೆ ಏನು ತೊಂದರೆಯಾಗಿದೆ ಅದನ್ನು ತಪ್ಪಿಸಿ ಅವರಿಗೆ ಪರಿಹಾರ ಸಿಕ್ಕುವ ಹಾಗೆ ಮಾಡಬೇಕು. ಮತ್ತು ಈ ವರ್ಷದ ಆಖೈರೊಳಗೆ ಎಲ್ಲ ಕೇಸುಗಳು ತೀರ್ಮಾನವಾಗಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಸ್ಟ್ಯಾಂಪುಗಳು ಮತ್ತು ರಿಜಿಸ್ಟ್ರೇಷನ್–ಇವರ ಬೇಡಿಕೆಯಲ್ಲಿ ಬಂದಂತಹ ಇನ್ನೊಂದು ಅಂಶ. ನಮ್ಮ ಅನುಭವದ ಪ್ರಕಾರ ಹೇಳುವುದಾದರೆ, ಜುಡಿಷಿಯಲ್ ಅಥವಾ ನಾನ್ ಜುಡಿಷಿಯಲ್‌ಗೇ ಆಗಲೀ ಅದಕ್ಕೆ ಬೇಕಾದ ಸ್ಟ್ಯಾಂಪು ಪೇಪರ್‌ಗಳ ಅಭಾವ. ಎಲ್ಲಿ ಹೋಗಿ ಕೇಳಿದರೂ ಸಣ್ಣ ಮೊತ್ತದ ಸ್ಟ್ಯಾಂಪು ಪೇಪರುಗಳ ಲಭ್ಯವಿಲ್ಲ. ಸಣ್ಣ ಮೊತ್ತದ ಸ್ಟ್ಯಾಂಪು ಪೇಪರುಗಳನ್ನು ಪ್ರಿಂಟ್ ಮಾಡಿ ಎಲ್ಲ ಜಿಲ್ಲೆಗಳಿಗೂ ಕೊಡತಕ್ಕ ವ್ಯವಸ್ಥೆ ಮಾಡುವುದಕ್ಕೆ ಆಗದಿದ್ದರೆ ಏತಕ್ಕೆ ಮಾಡುತ್ತೀರಿ ? ಸ್ಟ್ಯಾಂಪು ಪೇಪರುಗಳ ಅಭಾವ ಇರತಕ್ಕ ಅನೇಕ ಜಿಲ್ಲೆಗಳಿವೆ. ಕಳೆದ ವರ್ಷ ನಮ್ಮಲ್ಲಿ ಪ್ರವಾಹ ಬಂದಾಗ ಏನು ಪರಿಸ್ಥಿತಿ ಇತ್ತು ಅದು ಇನ್ನೂ ಬದಲಾಗಿಲ್ಲ. ಐದು ರೂಪಾಯಿಗಳ ಸ್ಟ್ಯಾಂಪು ಪೇಪರ್‌ನಲ್ಲಿ ಬರೆದುಕೊಡಬೇಕಾದುದಕ್ಕೆ 20 ರೂಪಾಯಿಗಳಿಗೆ ಕಡಿಮೆ ಮೊತ್ತದ ಸ್ಟ್ಯಾಂಪು ಪೇಪರ್ ಸಿಕ್ಕಲಿಲ್ಲ. ಆ ಸಂದರ್ಭದಲ್ಲಿ ಮಂಗಳೂರಿಗೆ ಹೋಗಿ ಸ್ಟ್ಯಾಂಪು ಪೇಪರ್‌ಗಳನ್ನು ತರುವಂಥ ಪರಿಸ್ಥಿತಿ ಇತ್ತು. ರಿಜಿಸ್ಟ್ರೇಷನ್ ಇಲಾಖೆಯ ಬಗ್ಗೆ ಹೇಳುವುದಾದರೆ ಬಹಳ ಬೇಸರವಾಗುತ್ತದೆ. ಅಲ್ಲಿ ಲಂಚದ ಹಾವಳಿ ಬಹಳ ಇದೆ. ಸ್ಟ್ಯಾಂಪ್ ರಿಯಾಯಿತಿ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಿದ್ದೀರಿ. ಜನಸಾಮಾನ್ಯರು, ಬಡವರು ತಮ್ಮ ವಾಸಕ್ಕೆ ಬೇಕಾದ ಒಂದು ಮನೆ ಕಟ್ಟಿಕೊಳ್ಳತಕ್ಕ ಸಂದರ್ಭದಲ್ಲಿ ತೆಗೆದುಕೊಳ್ಳುವ ಸಾಲಕ್ಕೆ ಪೂರ್ತಿಯಾಗಿ ಸ್ಟ್ಯಾಂಪ್ ಡ್ಯೂಟಿಯಲ್ಲಿ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಎಲ್.ಐ.ಸಿ.ಯಿಂದ ಮತ್ತು ಬೇರೆ ಬೇರೆ ಹೌಸಿಂಗ್ ಸ್ಕೀಂಗಳಿಂದ 30 ಸಾವಿರ ರೂಪಾಯಿ ಸಾಲ ಪಡೆಯಬೇಕಾದರೆ ಸುಮಾರು 2–3

ಸಾವಿರ ರೂಪಾಯಿಗಳನ್ನು ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗುತ್ತದೆ. ಆದ್ದರಿಂದ, ಬಡವರು ಸ್ವಂತಕ್ಕೆ ಮನೆಗಳನ್ನು ಕಟ್ಟಿಕೊಳ್ಳತಕ್ಕ ಸಂದರ್ಭದಲ್ಲಿ ಅವರಿಗೆ ಪೂರ್ಣವಾಗಿ ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ ಬರಗಾಲದ ಬಗ್ಗೆ ಅನೇಕ ಸ್ನೇಹಿತರು ಸಾಕಷ್ಟು ಹೇಳಿದ್ದಾರೆ. ಅದೇ ರೀತಿ ನೆರೆ ಹಾವಳಿಯಿಂದ ನಮ್ಮಲ್ಲಿ ಅನೇಕ ಕಡೆ ಅನೇಕರು ತುಂಬ ತೊಂದರೆಗೊಳಗಾಗಿದ್ದಾರೆ. ಕಳೆದ ವರ್ಷ ಮತ್ತು ಈ ವರ್ಷ ನೆರೆ ಹಾವಳಿ ಅಗಾಧವಾದ ರೀತಿಯಲ್ಲಿ ಬಂತು. ಆದ್ದರಿಂದ, ಇದಕ್ಕೆ ಒಂದು ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. 16 ಜಿಲ್ಲೆಯ 118 ತಾಲ್ಲೂಕುಗಳಲ್ಲಿ 2.8 ಕೋಟಿ ಜನರಿಗೆ ಬರಗಾಲದ ಬಿಸಿ ತಟ್ಟಿತ್ತು ಎಂದರೆ ಎಷ್ಟು ದೊಡ್ಡ ರೀತಿಯಲ್ಲಿ ಬರಗಾಲ ಈ ರಾಜ್ಯದಲ್ಲಿ ಎಂಬ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇಷ್ಟೊಂದು ಅಗಾಧವಾಗಿರತಕ್ಕ ಬರಗಾಲ ಪರಿಸ್ಥಿತಿಯನ್ನು ನೋಡಿ ಇದಕ್ಕೆ ಯೋಗ್ಯ ಪರಿಹಾರವನ್ನು ಕೇಂದ್ರ ಸರ್ಕಾರದವರು ಕೊಡುವ ಅಗತ್ಯ ಇತ್ತು. ಆ ಬಾಬಿಗೆ ಮಾರ್ಚ್ ತಿಂಗಳಲ್ಲಿ 51 ಕೋಟಿ ರೂಪಾಯಿಗಳ ಬೇಡಿಕೆ ಇದ್ದರೆ ಆಮೇಲೆ 78 ಕೋಟಿ ರೂಪಾಯಿಗಳು ಬೇಕೆಂದು ಕೇಳಲಾಯಿತು. ಮಾರ್ಚ್ ತಿಂಗಳಲ್ಲಿ ಸೆಂಟ್ರಲ್ ಟೀಂನವರು ಬಂದು ಹೋದಮೇಲೆ ಈ ಬಾಬಿಗೆ ಕೇಂದ್ರದಿಂದ 10 ಕೋಟಿ ರೂಪಾಯಿಗಳು ಮಾತ್ರ ಬಂತು ಎಂದು ಹೇಳಿದ್ದಾರೆ. ಏಪ್ರಿಲ್ 14ರಂದು ದೆಹಲಿಗೆ ಹೋದಾಗ ನಾನು ಮತ್ತು ನಮ್ಮ ಪಕ್ಷದ ಅಧ್ಯಕ್ಷರಾದ ವಾಜ್‌ಪೈ ಅವರೊಡನೆ ಕೃಷಿ ಸಚಿವರಾದ ರಾವ್ ಬೀರೇಂದ್ರಸಿಂಗ್ ಅವರನ್ನು ಭೇಟಿಯಾಗಿ ಕರ್ನಾಟಕದ ಪರಿಸ್ಥಿತಿಯ ಬಗ್ಗೆ ನೋಟ್ ಕೊಟ್ಟಿದ್ದೇವೆ. ನೀವು ಇಲ್ಲಿ ಕೊಟ್ಟಿರುವ ಬೇಡಿಕೆ ಮೇಲೆ ನಾವು ಪರಿಶೀಲನೆ ಮಾಡಿದ ನಂತರ 15 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಕೃಷಿ ಸಚಿವರು ಹೇಳಿದರು. ಅಲ್ಲದೆ ಅದರ ಜೊತೆಗೆ ಇನ್ನಷ್ಟು ಧನ ಸಹಾಯವನ್ನು ಆಹಾರ ಧಾನ್ಯಗಳನ್ನು ಕೊಳ್ಳಲು ಕೊಡುತ್ತೇವೆಂದರು. ಆದರೆ ಇಲ್ಲಿಗೆ ಬಂದಮೇಲೆ ಮೇ ತಿಂಗಳ ಪ್ರಥಮ ವಾರದವರೆಗೆ 5 ಕೋಟಿ ರೂಪಾಯಿಗಳು ಸಹ ಬಂದ ಹಾಗೆ ಕಾಣಲಿಲ್ಲ. ಈಗ ಹೇಳುತ್ತೀರಿ 15 ಕೋಟಿ ರೂಪಾಯಿ ಬಂದಿದೆ ಎಂದು. ಅಲ್ಲದೆ, ನಾವು 50 ಕೋಟಿ ರೂಪಾಯಿ ಪರಿಹಾರ ಕೊಟ್ಟಿದ್ದೇವೆಂದು ಸಹ ಹೇಳಿದ್ದೀರಿ. ರಾಜ್ಯ ಸರ್ಕಾರ, ಯಾವ ಯಾವ ಜಿಲ್ಲೆಗಳು ಪರಿಹಾರ ಕಾಮಗಾರಿಕೆಯನ್ನು ಕೈಗೆ ತೆಗೆದುಕೊಂಡಿವೆ ಮತ್ತು ಎಷ್ಟೆಷ್ಟು ಮಾಡಿವೆ ಎಂಬ ವರದಿಯನ್ನು ಸಕಾಲದಲ್ಲಿ ಕೇಂದ್ರಕ್ಕೆ ಸಲ್ಲಿಸದೆ ಇದ್ದುದರಿಂದ ಕೇಂದ್ರ ಸರ್ಕಾರ ಸಹ ಸಹಾಯ ನೀಡುವುದರಲ್ಲಿ ಅನ್ಯಾಯ ಮಾಡಿದೆ. ನಮಗೆ ಬರಬೇಕಾದ ಮೊತ್ತವನ್ನು ಕೊಟ್ಟಿಲ್ಲ. ನಾವು 78 ಕೋಟಿ ರೂಪಾಯಿಗಳನ್ನು ಕೇಳಿದ್ದರೆ ಅವರಿಂದ ಕೇವಲ 15 ಕೋಟಿ ರೂಪಾಯಿ ಮಾತ್ರ ಬಂದಿದೆ. ಅದರ ಮೇಲೆ ಒಂದು ಪ್ರಶ್ನೆ ಬಂತು, ನಾವು ಕೊಟ್ಟಂಥ ಮೊತ್ತವನ್ನು ರಾಜ್ಯ ಸರ್ಕಾರ ಸರಿಯಾಗಿ ಉಪಯೋಗ ಮಾಡುತ್ತಿಲ್ಲವೆಂದು ಅವರು ಹೇಳಿದರು. ಇದಕ್ಕೆ ಕಾರಣವೇನು ? ನಮಗಿಂತ ಕಡಿಮೆ ಜನಸಂಖ್ಯೆ ಇರತಕ್ಕ ರಾಜ್ಯಗಳಿಗೆ 30–40 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕದ್ದನ್ನು ಏಪ್ರಿಲ್ 14ರಂದು ಕೇಂದ್ರದ ಕೃಷಿ ಸಚಿವರು ಓದಿ ಹೇಳುತ್ತಿದ್ದರು. ಆದರೆ ಕರ್ನಾಟಕಕ್ಕೆ ಮುಂಗಡವಾಗಿ ಕೊಟ್ಟಿರತಕ್ಕದ್ದು 10 ಕೋಟಿ ರೂಪಾಯಿಗಳು ಮಾತ್ರ. ಎರಡು ಕೋಟಿ 80 ಲಕ್ಷ ಜನ ಬರಗಾಲದ ಭೀಕರತೆಗೆ ಒಳಗಾಗಿರತಕ್ಕ ರಾಜ್ಯಕ್ಕೆ ಕೇಂದ್ರದ ಸ್ಟಡಿ ಟೀಂನವರು ಬಂದು ಹೋದಮೇಲೂ 15 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಎಂದರೆ ಇದು ತುಂಬ ಬೇಸರದ ಸಂಗತಿ. ಇದರಲ್ಲಿ ರಾಜಕೀಯ ಮಾಡಬಾರದೆಂದು ಹೇಳುವವರೇ ಇವತ್ತು ರಾಜಕೀಯ ಮಾಡುತ್ತಿದ್ದಾರೆ.

ಶ್ರೀ ವಿ.ಎಲ್. ಪಾಟೀಲ್.—ಇದು ಗ್ರಾಂಟ್ ಅಲ್ಲ.

ಡಾ॥ ವಿ.ಎಸ್. ಆಚಾರ್ಯ.—70 ಪರ್ಸೆಂಟ್ ಗ್ರಾಂಟ್ 30 ಪರ್ಸೆಂಟ್ ಸಹಾಯ. ಮೊನ್ನೆ ನಡೆದ 8ನೇ ವಿತ್ತೀಯ ಆಯೋಗದಲ್ಲಿ ಕೂಡ ನಾವು ಇದರ ಬಗ್ಗೆ ಕೇಳಿದ್ದೇವೆ, ನಮಗೆ ಈಗ ಕೊಟ್ಟಿರತಕ್ಕದ್ದು 15 ಕೋಟಿ ರೂಪಾಯಿಗಳು ಮಾತ್ರ. ಅವರು ಕೊಡತಕ್ಕ ಸಹಾಯ 25 ಕೋಟಿ ರೂಪಾಯಿಗಳಿಗೆ ಮೀರಬಾರದೆಂದು ತಿಳಿಸಿದ್ದಾರೆಂದರೆ ಕರ್ನಾಟಕದಲ್ಲಿರುವ ಬರಗಾಲದ ವಾಸ್ತವಿಕತೆಯನ್ನು ಅರಿತುಕೊಳ್ಳದೆ ಕೇಂದ್ರ ವರ್ತಿಸಿದೆ ಅನ್ನದೆ ಬೇರೆ ವಿಧಿಯಿಲ್ಲ. ಬರಗಾಲ ಪರಿಹಾರದ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಏನು ಕೆಲಸ ನಡೆದಿದೆ ಎಂಬುದನ್ನು ನಾಡಿನಾದ್ಯಂತ ನೋಡಿ ಬಂದಾಗ, ಜನತೆ ಅದರ ಬಗ್ಗೆ ಅತೃಪ್ತರಾಗಿದ್ದಾರೆಂದು ತಿಳಿಯಿತು. ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಮತ್ತು ಮೈನರ್ ಇರಿಗೇಷನ್ ಬಗ್ಗೆ ಜಿಲ್ಲಾ ಕೇಂದ್ರಗಳಿಗೆ ಹೋಗಿ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಅದೂ ಕೂಡ ಬಹಳ ನಿರಾಶಾದಾಯಕವಾಗಿದೆ. ಎನ್.ಆರ್.ಇ.ಪಿ. ಕೆಲಸವನ್ನು ಸ್ಕೇರ್ಸಿಟಿ ಕೆಲಸದ ಜೊತೆಯಲ್ಲಿ ಸೇರಿಸುತ್ತೇವೆಂದು ಹೇಳಿದ್ದಿರಿ; ಅದೂ ಕೂಡ ನಿದಾನವಾಗಿದೆ. ಜೂನ್ 30ಕ್ಕೆ ಕೆಲಸವನ್ನು ನಿಲ್ಲಿಸಬೇಕೆಂದು ಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಈ ಬರಗಾಲದ ಕಾಮಗಾರಿಕೆಯನ್ನು ನಿಲ್ಲಿಸಬೇಕೆಂದು ಹೇಳುವುದು ಸರಿಯಲ್ಲ. ಈ ಸಾರಿ ಕೂಡ ಮಳೆ ಬಹಳ ತಡವಾಗಿ ಬಂತು. ಈ ದೃಷ್ಟಿಯಿಂದ ಕೇಂದ್ರದಿಂದ ಬರಗಾಲಕ್ಕೆ ನೆರವನ್ನು ಪಡೆಯುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಮತ್ತು ಕೇಂದ್ರ ಕೂಡ ಸಹಾಯ ನೀಡುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಅವರು ಕೊಟ್ಟಂತಹ ನೆರವಿನ ಜೊತೆಗೆ ರಾಜ್ಯದ ಸಂಪನ್ಮೂಲವನ್ನು ಬಳಸಿ ಬರಗಾಲ ಪರಿಹಾರ ಕಾಮಗಾರಿಗಳಿಗೆ ಖರ್ಚು ಮಾಡುವ ಕಾರ್ಯದಲ್ಲಿ ರಾಜ್ಯ ಸರ್ಕಾರ ಕೂಡ ವಿಫಲವಾಗಿದೆ. ಆದಕಾರಣ, ಬೇಸರದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕಳೆದ ವರ್ಷ ನೆರೆ ಹಾವಳಿ 5 ಜಿಲ್ಲೆಗಳಲ್ಲಿ

ಭೂಮಿ ಹಾಳಾಗಿದೆ, ಈ ಬಗ್ಗೆ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಬಹಳ ಅಗತ್ಯ ಇದೆ ಎಂದು ಸರ್ಕಾರಕ್ಕೆ ಹೇಳಬಯಸುತ್ತೇನೆ. ನೆರೆ ಬರತಕ್ಕ ಪ್ರದೇಶಗಳಲ್ಲಿ ಅನೇಕ ಕಡೆ ಎಸ್ಕೇಪ್ ರಸ್ತೆಗಳನ್ನು ಮಾಡಿಲ್ಲ; ಮಾಡಿದ್ದರೆ ಅದರಿಂದ ಜೀವ ಉಳಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು. ನಾನು ಉಡುಪಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇನೆ. ಅಲ್ಲಿ ಕಳೆದ ವರ್ಷದ ಜೂನ್‌ನಲ್ಲಿ ಬಂದ ಮಳೆಯಲ್ಲಿ 23 ಜನ ತಮ್ಮ ಪ್ರಾಣವನ್ನು ಕಳೆದುಕೊಳ್ಳುವಂಥ ಸ್ಥಿತಿ ಉಂಟಾಯಿತು. ನೆರೆ ಬಂದು ಪ್ರಾಣ ಕಳೆದು ಕೊಳ್ಳುವಂಥ ಪರಿಸ್ಥಿತಿಯಲ್ಲಿ ಪಾರಾಗುವುದಕ್ಕೆ ಒಂದು ರಸ್ತೆ ಇದ್ದಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಎಸ್ಕೇಪ್ ರೋಡಿನ ಅವಶ್ಯಕತೆ ಇದೆ. ನೆರೆ ಬಂದಾಗ ನೀರು ಹೋಗುವುದಕ್ಕೆ ಇರತಕ್ಕ ಅಡೆತಡೆಗಳನ್ನು ಏಪ್ರಿಲ್, ಮೇ, ಜೂನ್ ಒಳಗಡೆ ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ವೆಂಟೆಡ್ ಡ್ಯಾಮ್‌ಗಳ ವೆಂಟ್ಸ್ ಓಪನ್ ಮಾಡಿ ಇಡಬೇಕಾಗುತ್ತದೆ. ಮಳೆ ಬರುವುದಕ್ಕೆ ಮುಂಚೆ ನಮ್ಮ ಜಿಲ್ಲೆ ಮಟ್ಟಿಗೆ ಜಿಲ್ಲಾಧಿಕಾರಿಗಳು ಅತ್ಯಂತ ಒಳ್ಳೆಯ ರೀತಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿರು ವುದರಿಂದ ನಮ್ಮ ಜಿಲ್ಲೆಯಲ್ಲಿ ನೆರೆ ಹಾವಳಿ ತಪ್ಪಿದಂತಾಗಿದೆ. ಆ ಕೆಲಸದಲ್ಲಿ ನಿಮ್ಮ ಇಲಾಖೆಯನ್ನು ಮೆಚ್ಚಬೇಕಾಗುತ್ತದೆ. ನೆರೆ ಹಾವಳಿ ತಡೆಯುವುದಕ್ಕೆ ಪ್ರಿಕಾಷನ್ಸ್ ಮತ್ತು ಪ್ರಿವೆನ್‌ಷನ್ಸ್ ತೆಗೆದು ಕೊಂಡು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಿದ್ದಾರೆ. ಜನರನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಇವಾಕ್ಯುಯೆಟ್ ಮಾಡುವಾಗ

ಅಧ್ಯಕ್ಷರು.—ನಿಮ್ಮ ಟೈಮ್ ಆಯಿತು.

ಶ್ರೀ ವಿ. ಎಸ್. ಆಚಾರ್ಯ.—ಮುಗಿಸಿಬಿಡುತ್ತೇನೆ. ನಮ್ಮಲ್ಲಿ ಬೆಂಗಳೂರಿನಿಂದ ಮಂಗಳೂ ರಿಗೆ ಹೋಗುವ ನ್ಯಾಷನಲ್ ಹೈವೇನಲ್ಲಿ ಬ್ರಮರ ಕೊಟ್ಲು ಎಂಬ ಜಾಗ ಇದೆ. ಅಲ್ಲಿ ಜೋರು ಮಳೆ ಬಂದಾಗ ನೇತ್ರಾವತಿ ನದಿ ಉಕ್ಕಿ ರಸ್ತೆ ಮೇಲೆ ಎರಡು ಮೂರು ಅಡಿಯಷ್ಟು ನೀರು ನಿಂತುಕೊಂಡು ಸಂಚಾರಕ್ಕೆ ಅಡ್ಡಿಯಾಗುತ್ತದೆ. 10 ವರ್ಷಗಳಿಂದಲೂ ಪ್ರತಿ ವರ್ಷ ಮಳೆ ಬಂದಾಗಲೂ ನೀರು ನಿಲ್ಲು ತ್ತದೆ. ರಾಜಕಾರಣಿಗಳು ಬಂದು ಬ್ರಮರ ಕೊಟ್ಲುವಿನಲ್ಲಿ ರಸ್ತೆ ಎತ್ತರ ಮಾಡುತ್ತೇವೆ ಎಂದು ಹೇಳು ತ್ತಾರೆ. ಅದು ಪತ್ರಿಕೆಯಲ್ಲಿ ಅಚ್ಚಾಗುತ್ತದೆ. ಆದರೆ ಕೆಲಸ ಮಾತ್ರ ಇಲ್ಲಿಯವರೆಗೂ ಆಗಿಲ್ಲ. ನ್ಯಾಷ ನಲ್ ಹೈವೇನಲ್ಲಿ ಫ್ಲಡ್ ಬಂದಾಗ ತೊಂದರೆಯಾಗುತ್ತದೆ. ಆದ್ದರಿಂದ ರಸ್ತೆಯನ್ನು ಎತ್ತರ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಬರೆದು ಒತ್ತಾಯ ಹಾಕಿದರೆ ಅವರು ಮಾಡಿಸುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಅಷ್ಟು ಒತ್ತಾಯವನ್ನು ಸರ್ಕಾರ ಮಾಡಿಲ್ಲ. ಆದ್ದರಿಂದ ಬ್ರಮರ ಕೊಟ್ಲಿನಲ್ಲಿ ಒಂದು ಫರ್ಲಾಂಗ್ ಉದ್ದದ ರಸ್ತೆಯನ್ನು ಎತ್ತರ ಮಾಡುವ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳು ತ್ತೇನೆ. ನೆರೆ ನಿಲ್ಲುವಂಥ ಪಾಕೆಟ್ಸ್‌ನಲ್ಲಿ ಸರ್ವೆ ಮಾಡಿ ಫ್ಲಡ್ ಕಂಟ್ರೋಲ್ ಪ್ರೋಗ್ರಾಂನಲ್ಲಿ ಎಸ್ಕೇಪ್ ರೋಡ್ಸ್ ಮಾಡಬೇಕು. ಪ್ರತಿ ಊರಿನಲ್ಲಿ ಸ್ಥಾಯಿ ಸಮಿತಿಯನ್ನು ಮಾಡುವ ವ್ಯವಸ್ಥೆ ಮಾಡಬೇಕು. ಬಾಗಲಕೋಟೆಯಲ್ಲಿ ಇದೇ ರೀತಿ ಸಮಸ್ಯೆ ಬಂದಾಗ ಕ್ರಮ ಕೈಗೊಂಡಂತೆ ಎಲ್ಲೆಲ್ಲಿ ಫ್ಲಡ್ ಬರುವಂಥ ಲೋ ಲೆವೆಲ್ ಏರಿಯಾ ಇದೆ ಅಂಥ ಕಡೆಗಳಲ್ಲಿ ಫ್ಲಡ್ ರಿಲೀಫ್ ಕಮಿಟಿಗಳನ್ನು ಮಾಡಿ ಅವರು ಸಮ ಯಕ್ಕೆ ಸರಿಯಾಗಿ ಎಚ್ಚೆತ್ತು ಜನರಿಗೆ ತಕ್ಷಣ ಬೇಕಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ರೀತಿ ಸ್ಥಾಯಿ ಸಮಿತಿಗಳನ್ನು ಮಾಡಿ ತಕ್ಷಣ ಜನರಿಗೆ ಬೇಕಾದ ಆಹಾರ, ಬಟ್ಟೆ, ವಸತಿ ಸೌಕರ್ಯ ಹಾಗೂ ದನಕರುಗಳಿಗೆ ಮೇವು ಈ ಅವಶ್ಯಕವಾದ ಪರಿಹಾರವನ್ನು ಒದಗಿಸಲು ಸೂಕ್ತ ವ್ಯವಸ್ಥೆ ಮಾಡಬೇಕು. ಈ ಸಮಿತಿಯವರು ಸಕಾಲದಲ್ಲಿ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಇದ್ದರೆ ಸರ್ಕಾರದವರು ಸಕಾಲದಲ್ಲಿ ಹೋಗಿ ಕ್ರಮ ತೆಗೆದುಕೊಳ್ಳಲಿಲ್ಲ ಎಂಬ ಆಪಾದನೆ ತಪ್ಪುತ್ತದೆ. ಆದ್ದರಿಂದ ಎಲ್ಲೆಲ್ಲಿ ಫ್ಲಡ್ ಪ್ರೋನ್ ಏರಿಯಾ ಇದೆ ಅಂಥ ಕಡೆಗಳಲ್ಲಿ ಸ್ಥಾಯಿ ಸಮಿತಿ ಮಾಡಬೇಕು ; ಜಿಲ್ಲಾಧಿಕಾರಿ ಗಳು ಮತ್ತು ಸ್ಥಳೀಯ ಅಧಿಕಾರಿಗಳು ಮಳೆ ಬರುವುದಕ್ಕಿಂತ ಮುಂಚೆ ಅಲ್ಲಿ ಚರ್ಚೆ ಮಾಡಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆ ಮಾಡಬೇಕು. ಎಷ್ಟೋ ಸಾರಿ ನೆರೆ ಹಾವಳಿ ಯಾದಾಗ ಸರ್ಕಾರದವರು ಹೋಗುವ ಮುಂಚೆಯೇ ನೆರೆಮನೆಯವರು 30 ಜನರಿಗೆ ಗಂಜಿ ಹಾಕಿದರು ಎಂದು ಹೇಳುತ್ತಾರೆ. ಅಂಥವರ ಮರ್ಸಿಗೆ ಬೀಳುವ ಬದಲು ಸ್ಥಾಯಿ ಕಮಿಟಿ ಮಾಡುವುದು ಒಳ್ಳೆ ಯದು. ನೆರೆ ಹಾವಳಿಗೆ ತುತ್ತಾಗಲಿ, ಎಲೆಕ್ಟ್ರಿಕ್ ವೈರ್ ತುಂಡಾಗಿ ಮನೆ ಸುಟ್ಟುಹೋಗಲಿ, ಬೆಂಕಿ ಬೀಳಲಿ, ಮರ ಬೀಳಲಿ, ಹೀಗೆ ಯಾವುದೇ ಪ್ರಾಕೃತಿಕ ವಿಕೋಪಕ್ಕೆ ತುತ್ತಾಗಿ ನೊಂದಂಥ ವ್ಯಕ್ತಿಗಳಿಗೆ 24 ಗಂಟೆಗಳಲ್ಲಿ 300 ರಿಂದ 500 ರೂಪಾಯಿಗಳವರೆಗೆ ಎಕ್ಸ್‌ಗ್ರೇಷಿಯಾ ಪೇಮೆಂಟ್ ಮಾಡಬೇಕು. ಮತ್ತು ಮನೆ ಕಳೆದುಕೊಂಡವರಿಗೆ ಮನೆ ಒದಗಿಸಲು ಸರ್ಕಾರಿ ಆಜ್ಞೆಗೆ ಕಾಯದೆ ತಹಸೀಲ್ದಾರರೇ ಜನತಾ ಮನೆಗಳನ್ನು ಮಂಜೂರು ಮಾಡುವ ವ್ಯವಸ್ಥೆ ಮಾಡಬೇಕು. ಫ್ಲಡ್‌ನಿಂದ ಅಥವಾ ಬೇರೆ ಕಾರಣದಿಂದ ಮನೆ ಪೂರ್ತಿ ನಾಷವಾಗಿದೆ ಎಂದರೆ ಪುನಃ ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರ್ ಅವರು ಹೋಗಿ ವಿಚಾರ ಮಾಡುವ ಪ್ರಶ್ನೆ ಬರಬಾರದು. ಮನೆ ಕಳೆದುಕೊಂಡ ತಕ್ಷಣ ಸ್ಥಾಯಿ ವ್ಯವಸ್ಥೆ ಪ್ರಕಾರ

ಜನತಾ ಮನೆಯನ್ನು ಒದಗಿಸುವ ವ್ಯವಸ್ಥೆ ಕೂಡಲೇ ಮಾಡಬೇಕು. ಮಳೆ ಕಡಿಮೆ ಇರುವ ಭಾಗಗಳಲ್ಲಿ ಮೂರುವರೆ ಸಾವಿರ ರೂಪಾಯಿಗಳ ಮನೆಯಿಂದ ಪ್ರಯೋಜನವಾಗಬಹುದು. ಆದರೆ 120-200 ಇಂಚಿನ ಮಳೆ ಬೀಳುವಂಥ ಕಡೆಗಳಲ್ಲಿ ಮೂರೂವರೆ ಸಾವಿರ ರೂಪಾಯಿಯ ಮನೆ ಕಟ್ಟಿದರೆ ತಡೆದುಕೊಳ್ಳುವುದಿಲ್ಲ. ಕೊನೇಪಕ್ಷ ಅಂಥ ಭಾಗಗಳಲ್ಲಿ ಆರೂವರೆ ಸಾವಿರ ರೂಪಾಯಿಗಳನ್ನಾದರೂ ಒದಗಿಸಬೇಕು. ಉಡುಪಿಯಲ್ಲಿ ಹೋದವರ್ಷ ಈ ಬಗ್ಗೆ ಒಂದು ಯೋಜನೆ ಮಾಡಿದ್ದೆವು. ಮೂರುವರೆ ಸಾವಿರ ಜೊತೆಗೆ ಹುಡ್ಕೋ ಸ್ಕೀಮಿನ ಪ್ರಕಾರ ಎರಡು ಸಾವಿರ ರೂಪಾಯಿ, ನೆರೆ ಪರಿಹಾರ ನಿಧಿಯಿಂದ, ಪಾದಯಾತ್ರೆಯಿಂದ, ಮುಖ್ಯಮಂತ್ರಿಗಳ ಮತ್ತು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಸಾವಿರ ರೂಪಾಯಿ ಹೀಗೆ ಎಲ್ಲವನ್ನೂ ಒಟ್ಟು ಮಾಡಿ ಆರೂವರೆ ಸಾವಿರ ರೂಪಾಯಿಯ ಮನೆ ಕಟ್ಟುವ ಯೋಜನೆಯನ್ನು ಹಿಂದೆ ಮಾಡಿದ್ದು ಹಿಂದಿನ ಕಂದಾಯ ಮಂತ್ರಿಗಳು ಅದನ್ನೆಲ್ಲಾ ನೋಡಿದ್ದಾರೆ. ಆರೀತಿ ಆರೂವರೆ ಸಾವಿರ ರೂಪಾಯಿ ಖರ್ಚು ಮಾಡಿ ಕಟ್ಟಿದ ಭದ್ರವಾದ ಮನೆಗಳೇ ಹೆಚ್ಚು ಮಳೆ ಬಂದಾಗ ಹೋಗುವಂಥ ಪರಿಸ್ಥಿತಿ ಇರುವಾಗ ಮೂರೂವರೆ ಸಾವಿರ ರೂಪಾಯಿ ಮನೆಯಿಂದ ಏನು ಪ್ರಯೋಜನವಾಗುತ್ತದೆ ? ಆದ್ದರಿಂದ ಹೆಚ್ಚು ಮಳೆ ಬರುವ ಪ್ರದೇಶದಲ್ಲಿ ಹೆಚ್ಚು ಹಣ ಖರ್ಚು ಮಾಡಿ ಮನೆ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಉಡುಪಿಯಲ್ಲಿ ಈ ಕೆಲಸ ಆಗಿದೆ ಎಂದು ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದರು. ಆದರೆ ಕುಂದಾಪುರದಲ್ಲಿ ಈ ವ್ಯವಸ್ಥೆ ಆಗಿಲ್ಲ. ಅಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಮನೆಗಳು ನಾಶವಾಗಿದ್ದರೂ ಹೊಸದಾಗಿ ಮನೆ ಕಟ್ಟುವ ಕೆಲಸ ಆಗಲಿಲ್ಲ. ಮೊನ್ನೆ ಜೂನ್ ತಿಂಗಳಲ್ಲಿ 8 ಸಾವಿರ ಮೂಟೆ ಸಿಮೆಂಟ್ ಡೈವರ್ಟ್ ಮಾಡಿದರೂ ಅದನ್ನು ಸದುಪಯೋಗ ಮಾಡದೆ ವಾಪಸ್ ಕಳುಹಿಸಿದ್ದಾರೆ. ಸ್ಥಳೀಯ ಜನರಿಗೆ ಸರಿಯಾದ ಮಾರ್ಗದರ್ಶನ ಕೊಡದೇಹೋದರೆ ಪರಿಹಾರ ಕಾರ್ಯದಲ್ಲಿ ಕೇವಲ ಹಣ ಖರ್ಚಾಗುತ್ತದೆ. ಕೆಲಸ ಮಾತ್ರ ಆಗುವುದಿಲ್ಲ. ಫ್ಲಡ್ ರಿಲೀಫ್ ಕಮಿಟಿಯವರು ಜಿಲ್ಲಾಧಿಕಾರಿಗಳು ಮತ್ತು ರೆವಿನ್ಯೂ ಇಲಾಖೆ ಮುಖ್ಯಸ್ಥರೊಡನೆ ಸಂಪರ್ಕವನ್ನಿಟ್ಟುಕೊಂಡು ಈ ಕೆಲಸ ಕಾರ್ಯಗಳನ್ನು ಮಾಡಬೇಕು. ಲ್ಯಾಂಡ್ ಗ್ರಾಂಟ್ ಬಗ್ಗೆ ಹೇಳುತ್ತಾ "all the efforts are made by the Government to see that encroachments are properly regularised." ಎಂದು ಹೇಳಿದ್ದೀರಿ. 1976ನೇ ಇಸವಿಯೊಳಗೆ ಎನ್‌ಕ್ರೋಚ್ ಮಾಡಿ 1979 ರಲ್ಲಿ ಅರ್ಜಿ ಕೊಟ್ಟವರಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಅರ್ಜಿ ಕೊಡಬೇಕೆಂಬುದು ಎಷ್ಟು ಜನರಿಗೆ ಗೊತ್ತಿದೆ ? ಪೇಪರ್ ಯಾರು ಓದುತ್ತಾರೆ ? ಅಥವಾ ರೆವಿನ್ಯೂ ಇಲಾಖೆಯವರು ಜನರಿಗೆ ಹೋಗಿ ಅರ್ಜಿ ಕೊಡಿ ಎಂದು ಹೇಳುತ್ತಾರಾ ? ಎಷ್ಟೋ ಜನರಿಗೆ ಈ ಬಗ್ಗೆ ಗೊತ್ತಾಗದಿರುವುದರಿಂದ ಅರ್ಜಿ ಕೊಡುವ ಸಮಯವನ್ನು ಹೆಚ್ಚುಮಾಡಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರಿ ಅಧಿಕಾರಿಗಳನ್ನು ಕಳುಹಿಸಿ 1978ಕ್ಕಿಂತ ಮುಂಚೆ ಯಾರಿದ್ದಾರೆಂಬುದನ್ನು ತಿಳಿದುಕೊಂಡು ಪಟ್ಟಾ ಹಾಕುವ ಕೆಲಸವನ್ನು ಮಾಡಬೇಕು. 1979ರಲ್ಲಿ ಅರ್ಜಿ ಕೊಡಲಿಲ್ಲ ಎಂಬ ಕಾರಣದಿಂದ ರದ್ದು ಮಾಡುತ್ತೇವೆಂದು ತಾಲ್ಲೂಕ್ ಆಫೀಸಿನಲ್ಲಿ ಹೇಳುತ್ತಾರೆ. ಈ ಸಂದರ್ಭದಲ್ಲಿ ಜನರು ಏನು ಮಾಡಬೇಕು ? ಪ್ರಾಕ್ಟಿಕಲ್ ಡಿಫಿಕಲ್ಟಿ ಏನಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. 10-15 ವರ್ಷಗಳಿಂದ ಇದ್ದವರಿಗೆ ಅರ್ಜಿ ಕೊಡಲಿಲ್ಲ ಎಂದು ಪೀನಲೈಸ್ ಮಾಡಬಾರದು. ಆದ್ದರಿಂದ ಸೂಕ್ತ ತಿದ್ದುಪಡಿ ಮಾಡಿ ಸರ್ಕಾರಿ ಆಜ್ಞೆ ಹೊರಡಿಸಿ ಮೊನ್ನೆ ಜನವರಿ ವರೆಗೆ ಇರುವವರಿಗಾದರೂ ಪಟ್ಟಾ ಕೊಡುವ ವ್ಯವಸ್ಥೆ ಮಾಡಬೇಕು. 1-9-1983ರೊಳಗೆ ಎನ್‌ಕ್ರೋಚ್‌ಮೆಂಟ್ ಆದ ಕಟ್ಟಡ, ಮನೆ ಎಲ್ಲವನ್ನೂ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು ಎಂದು ಬಿಗಿಯಾದ ಸುತ್ತೋಲೆ ಕಳುಹಿಸಿದ್ದಾರಂತೆ. 1-9-1983 ರೊಳಗಡೆ ಎನ್‌ಕ್ರೋಚ್‌ಮೆಂಟ್ ಆದುದನ್ನು ರದ್ದುಪಡಿಸಿ ಸ್ಥಳ ವಾಪಸ್ ತೆಗೆದುಕೊಳ್ಳಬೇಕೆಂದು ಸರ್ಕಾರದ ನೋಟಿಫಿಕೇಷನ್ ಹೊರಟಿದೆ ಎಂದು ತಿಳಿದಿದೆ. ಆ ರೀತಿ ಏನಾದರೂ ಇದ್ದರೆ ಅದನ್ನು ಸ್ಥಗಿತಗೊಳಿಸಬೇಕು. ಯಾರು ಯಾರು ಮೊದಲಿನಿಂದ ಎನ್‌ಕ್ರೋಚ್ ಮಾಡಿಕೊಂಡಿದ್ದರು. ಅವರಿಗೆ ಸ್ಥಳ ಕೊಡಬೇಕು. ತಿಪಟೂರಿನಲ್ಲಿ 1978ರಲ್ಲಿ ಹರಳೇಗೌಡ ಎಂಬ ತಹಸೀಲ್ದಾರರು ಸಣ್ಣಪುಟ್ಟ ರೈತರಿಗೆ ಸ್ಥಳ ಕೊಟ್ಟಿದ್ದರಂತೆ. ಒಂದು ತಿಂಗಳ ಹಿಂದೆ ಮಂಜೂರಾದ ಸ್ಥಳವನ್ನು ರದ್ದುಪಡಿಸಿರುವುದರಿಂದ ಅಲ್ಲಿನ ಜನರು ಕಂಗಾಲಾಗಿದ್ದಾರೆ. ಅದರಲ್ಲಿ ಎಷ್ಟೋ ಜನ ಹರಿಜನ ಮತ್ತು ಹಿಂದುಳಿದವರು ಇದ್ದಾರೆ. ಅವರೆಲ್ಲಾ ತಿಪಟೂರಿನಿಂದ ಪಾದಯಾತ್ರೆಯಲ್ಲಿ ತುಮಕೂರಿಗೆ ಬಂದು ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದ್ದಾರೆ. ಅಲ್ಲಿ ಸಮರ್ಪಕವಾದ ಉತ್ತರ ಬರಲಿಲ್ಲ ಎಂದು ದೊರೆತನಕ ದೂರು ಕೊಡಲು ಬೆಂಗಳೂರಿಗೆ ಬಂದರೆ ಬಸ್‌ಗಳನ್ನೆಲ್ಲಾ ಹಿಡಿದು ಜನರನ್ನು ಅರೆಸ್ಟ್ ಮಾಡಿ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗಿದ್ದಾರೆ. ಮುಖ್ಯಮಂತ್ರಿಗಳು ಆಗ ಸಿಗಲಿಲ್ಲ ಎಂದು ಮಾನ್ಯ ದೇವೇಗೌಡರಿಗೆ ಮನವಿ ಕೊಟ್ಟಿದ್ದಾರೆ. ಏತಕ್ಕೆ ರೈತರಿಗೆ ಈ ರೀತಿ ತೊಂದರೆ ಕೊಡುತ್ತೀರಿ ? ಅವರು ಕೇಳುವುದು ಎರಡು ಎಕರೆ ಮೂರು ಎಕರೆ ಜಾಗ. ಕನಿಷ್ಠ 5 ಎಕರೆ ಭೂಮಿಯನ್ನು ಎಷ್ಟು ಜನರಿಗೆ ಕೊಡಲು ಸಾಧ್ಯವೋ ಅಷ್ಟು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಲ್ಯಾಂಡ್

3-00 P.M.

ಗ್ರಾಂಟ್ ಕಮಿಟಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಕನಿಷ್ಟ 10 ಸೆಂಟ್ಸ್ ಜಾಗವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕಳೆದ ಹತ್ತು ವರ್ಷಗಳಿಂದಲೂ 3 ಸೆಂಟ್ಸ್ 10 ಸೆಂಟ್ಸ್ ಜಾಗವನ್ನು ಮಾತ್ರ ಕೊಟ್ಟುಕೊಂಡು ಬಂದಿರುತ್ತಾರೆ. ಗ್ರಾಮಾಂತರ ಪ್ರದೇಶ ಗಳಲ್ಲಿ ಸಾವಿರಗಟ್ಟಲೆ ಎಕರೆ ಜಮೀನು ಸಿಗುತ್ತದೆ. ಒಳ್ಳೆಯ ರಸ್ತೆಗಳನ್ನು ಮಾಡಿ ; ಸುಂದರವಾದ ಕಾಲೋನಿಗಳನ್ನು ಮಾಡಬೇಕೆಂದು ಹೇಳುತ್ತೇನೆ. ಸರಿಯಾಗಿ ಕಾಲುಚಾಚಿ ಮಲಗಿಕೊಳ್ಳುವುದಕ್ಕೆ ಅನು ಕೂಲವಾಗುವಂತೆ 3-4 ಕೋಣೆಗಳುಳ್ಳ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ಕುಮ್ಕಿಚ ಜಮೀನುಗಳು ಇವೆ. ಇವುಗಳ ಹಕ್ಕುಗಳನ್ನು ಊರ್ಜಿತ ಗೊಳಿಸಬೇಕು. ನಮ್ಮ ಭಾಗದಲ್ಲಿ ಕೃಷಿಯನ್ನು ಅವಲಂಬಿಸಿರುವವರು ಗೊಬ್ಬರ ಮಾಡಿಕೊಳ್ಳುವುದ ಕ್ಕಾಗಿ ಸೊಪ್ಪನ್ನು ಕೂಡಿಡುತ್ತಾರೆ. ಇದನ್ನು ಮಾಡಬೇಕಾದರೆ ಕುಮ್ಕಿ ಹಕ್ಕನ್ನು ಊರ್ಜಿತ ಮಾಡಿ ದರೆ, ಇದರ ಉಪಯೋಗವನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. 1978 ರಲ್ಲಿ ಹರಿಜನ ಗಿರಿಜನರಿಗೆ ಮಂಜೂರು ಮಾಡಿರುವಂಥ ಜಮೀನುಗಳನ್ನು ಕೊಂಡುಕೊಳ್ಳಬಾರದೆಂದು ಕಾನೂನು ಬಂದಿದೆ. ಆದರೂ ಕೆಲವು ಜನರು ಒತ್ತಡ ಬೀರಿ ಹರಿಜನ ಗಿರಿಜನರಿಂದ ಜಮೀನುಗಳನ್ನು ತೆಗೆದುಕೊಂಡಿದ್ದಾರೆ, ಇಂಥ ಪ್ರಕರಣಗಳಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಹರಿಜನರಿಗೆ ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ. ಜಮೀನನ್ನು ಕಬಳಿಸಿರುವಂಥವರಿಗೆ ಭೂಮಿಯನ್ನು ವಾಪಸ್ಸು ಪಡೆಯು ವುದರ ಜೊತೆಗೆ ಶಿಕ್ಷೆಯನ್ನು ಕೊಡ ವಿಧಿಸಬೇಕೆಂದು ಹೇಳುತ್ತೇನೆ. ಹರಿಜನರಿಗೆ ಜಮೀನು ಮಂಜೂರು ಮಾಡಿದ ಇಷ್ಟು ವರ್ಷಗಳ ಕಾಲ ಪರಬಾರೆ ಮಾಡಬಾರದೆಂದು ಇದ್ದರೂ 10-15 ಸೆಂಟ್ಸ್ ಜಾಗವನ್ನು ಹರಿಜನೇತರರಿಗೆ ಮಾರಾಟ ಮಾಡಿಕೊಟ್ಟಿರುವಂಥ ಉದಾಹರಣೆಗಳು ಇವೆ. ಮಾರುಕಟ್ಟೆ ಬೆಲೆ ಕೊಟ್ಟು ಕೊಂಡಿದ್ದೀರಿ; ಕ್ರಯಚೀಟಿ ಕೂಡ ಆಗಿವೆ. ಇತ್ತೀಚಿನ ಕಾನೂನು ಪ್ರಕಾರ ಅನೇಕ ಜನ ತೊಂದರೆಗೆ ಒಳಗಾಗಿದ್ದಾರೆ. ಅದಕ್ಕೋಸ್ಕರ ಸರ್ಕಾರದವರು 50 ಸೆಂಟ್ಸ್ ಒಳಗೆ ಇರತಕ್ಕ ಪ್ರಕರಣಗಳಲ್ಲಿ ವಿನಾ ಯಿತಿ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಗ್ರಾಮಗಳಲ್ಲಿ ಬಹಳ ದೊಡ್ಡ ಗೊಂದಲವುಂಟಾಗುವ ಸಂಭವ ಬರುತ್ತದೆ. ಇದರ ಕಡೆ ಕೂಡ ಸರ್ಕಾರದವರು ಗಮನ ಕೊಡ ಬೇಕೆಂದು ಹೇಳುತ್ತೇನೆ.

ಇನ್ನು ಸರ್ವೆ ಸೆಟ್ಲಮೆಂಟ್ ಇಲಾಖೆಯಲ್ಲಿ ಸಮಯಕ್ಕೆ ಸರಿಯಾಗಿ ಸರ್ವೇಯರಗಗಳು ಸಿಗುತ್ತಿಲ್ಲ. ಅಲ್ಲಿ ಕರಪ್ಷನ್ ಜಾಸ್ತಿಯಾಗಿದೆ. ಇದನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ನಿಗಾ ಕೊಡ ಬೇಕು. ಇವತ್ತು ಕೂಡ ಅಲ್ಲಿ ಒಂದು ಲಕ್ಷ ಅರ್ಜಿಗಳು ಬಾಕಿ ಇವೆ. ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ಹಾಗೂ ಮಹರಾಷ್ಟ್ರ ಗಡಿ ಬಗ್ಗೆ ಯಾವ ರೀತಿ ಚರ್ಚೆ ಮಾಡಿದ್ದಾರೋ; ಅದೇ ರೀತಿ ಕರ್ನಾಟಕ ಹಾಗೂ ಕೇರಳ ಗಡಿಗಳ ಬಗ್ಗೆಯೂ ಚರ್ಚ ಮಾಡಬೇಕೆಂದು ಹೇಳುತ್ತೇನೆ. 1963ನೇ ಇಸವಿಯಲ್ಲಿ ಹಾಲಿ ಶ್ಯಾನುಭೋಗರಾಗಿದ್ದಂಥವರಿಗೂ ಪರಿಹಾರ ಧನವನ್ನು ಕೊಡಬೇಕೆಂದು ಹೇಳು ತ್ತೇನೆ.

ಇನ್ನು ಮುಜರಾಯಿ ಇಲಾಖೆಗಳ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮಲ್ಲಿ 5 ಭಾಗಗಳಲ್ಲಿಯೂ 5 ರೀತಿಯ ನಿಯಮಗಳು ಇವೆ. ಇಷ್ಟು ವರ್ಷಗಳಾದರೂ ಒಂದು ಸರಿಯಾದಂಥ ಕಾನೂನು ತರುವುದಕ್ಕೆ ಸಾಧ್ಯವಾಗಿಲ್ಲ. ಹೈಕೋರ್ಟಿನಲ್ಲಿ ಮೂಲಕಾನೂನನ್ನು ಸಂಪೂರ್ಣವಾಗಿ ಹೊಡೆದುಹಾಕಿದ್ದಾರೆ, ಈ ವಿಚಾರದಲ್ಲಿ ಸರ್ಕಾರದವರು ಸೂಕ್ತ ಏರ್ಪಾಡು ಮಾಡ ಬೇಕೆಂದು ಹೇಳುತ್ತೇನೆ. ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಒಂದು ಮಾತು ಹೇಳುವುದಾದರೆ; ಈ ಈ ಸರ್ಕಾರ ಬಂದಮೇಲೆ ಜನ ಆಡಳಿತದಲ್ಲಿ ಬಹಳಷ್ಟು ಸುಧಾರಣೆಯಾಗುತ್ತದೆಂದು ಬಹಳ ನಿರೀಕ್ಷಣೆ ಮಾಡುತ್ತಿದ್ದಾರೆ. ಭೂಸುಧಾರಣೆ ಕಾನೂನು ಪ್ರಕಾರ ಭೂಮಿ ಕಳೆದುಕೊಂಡವರಿಗೆ ಸಂಪೂರ್ಣವಾಗಿ ಪರಿಹಾರ ಕೊಡುವುದು; ಭೂಮಿ ಪಡೆದಂಥ ಗೇಣಿದಾರನಿಗೆ ಭೂಮಿಯ ಒಡೆತನ ಹಕ್ಕು ಕೊಡು ವಂತಾದ್ದು; ಇವುಗಳನ್ನೆಲ್ಲಾ ಕೂಡಲೇ ಮಾಡಬೇಕು; ಜನತೆ ತಮ್ಮ ಮೇಲೆ ಜವಾಬ್ದಾರಿಯನ್ನು ವಹಿಸಿ ಕೊಟ್ಟಿದ್ದಾರೆ. ಲ್ಯಾಂಡ್ ರೆವಿನ್ಯೂ ಸೆಕ್ಷನ್ 64ರ ಪ್ರಕಾರ ಮತ್ತು 94ರ ಪ್ರಕಾರ ಮೊನ್ನೆ ಇದರ ಬಗ್ಗೆ ತಿದ್ದುಪಡಿಯನ್ನು ಕೂಡ ಮಾಡಲಾಗಿದೆ. ಪೂಂಜಾ ಭೂಮಿಗೆ ವಿನಾಯಿತಿ ಕೊಡಲಾಗಿದೆ. ಅದೇ ರೀತಿ ಒಂದು ಎಕರೆ ತೋಟ ಇರುವ ಭೂಮಿಗೂ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ 48 (ಎ) ಪ್ರಕಾರ ಭೂಸುಧಾರಣ ಕಾನೂನು ಪ್ರಕಾರ ಮಿಕ್ಕಿದಂಥ ಡ್ರೈ ಲ್ಯಾಂಡ್ ಭೂಮಿಗೂ ಕೂಡ ವಿನಾಯಿತಿ ಕೊಡಬೇಕಾಗುತ್ತದೆ. ಕರ್ನಾಟಕ ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಆಕ್ಟ್; ಪ್ರಕಾರ ಇಡೀ ರಾಜ್ಯದಲ್ಲಿ ಒಂದೇ ಸ್ಕೇಲು ಇಡ ಬೇಕು. ಡ್ರೈಲ್ಯಾಂಡಿಗೆ ಒಂದು ಹೆಕ್ಟೇರ್‌ಗೆ 2.2. ತೋಟಕ್ಕೆ 50 ಸೆಂಟ್ಸ್; ಗದ್ದೆಗೆ 75 ಸೆಂಟ್ಸ್ ಎಂದು ಇದೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ತಿದ್ದುಪಡಿ ತರುತ್ತಾರೆಂದು ಗೊತ್ತಾದಮೇಲೆ ಪತ್ರಗಳು ಬರುವುದಕ್ಕೆ ಪ್ರಾರಂಭವಾಗಿದೆ: ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. 1974ರ ಆಕ್ಟ್ ಪ್ರಕಾರ ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡಜಿಲ್ಲೆಯಲ್ಲಿ ಕೊಟ್ಟಿ

ದ್ದಾರೆ, ಈ ಒಂದು ಕಾನೂನು ಪ್ರಕಾರ ವಿನಾಯಿತಿ ಕೊಡುವುದಕ್ಕೆ ಕಾನೂನು ಮಾಡಬೇಕೆಂದು ಹೇಳಿ; ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಎಸ್.ಆರ್. ಲಕ್ಷ್ಮಯ್ಯ (ಬೀರೂರು). ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಕಂದಾಯ ವತಿಯಿಂದ ಮಾನ್ಯ ಮಂತ್ರಿಗಳು ಬೇಡಿಕೆಗಳನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಈ ಎಲ್ಲಾ ಬೇಡಿಕೆಗಳು ಉಪಯುಕ್ತವಾಗಿವೆ ಎಂದು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಅಧ್ಯಕ್ಷರೆ, ಈಗತಾನೆ ಅನೇಕ ಸದಸ್ಯರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಮೊಯಿಲಿಯವರು ಬೆಳಗಾಂ ಜಿಲ್ಲೆಯಲ್ಲಿ ನಡೆದಂಥ ಆಕಸ್ಮಿಕ ಪ್ರವಾಹ ವಿಚಾರದಲ್ಲಿ ಬಹಳ ಸುದೀರ್ಘವಾಗಿ ಹೇಳಿದ್ದಾರೆ. ಸಾಮಾನ್ಯವಾಗಿ ಈ ಪ್ರವಾಹ ಬರತಕ್ಕದ್ದು, ಪ್ರವಾಹದಿಂದ ವಿಕೋಪಕ್ಕೆ ತುತ್ತಾಗತಕ್ಕದ್ದು ಆಕಸಿ ಕ. ಪ್ರಕೃತಿ ವಿಕೋಪ ಆದಾಗ ಈ ತರಹ ತೊಂದರೆಗಳು ಬರುತ್ತವೆ. ಅನೇಕ ವರ್ಷಗಳಿಂದಲೂ, ಎಲ್ಲಾ ಜಿಲ್ಲೆಗಳಲ್ಲೂ, ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಹ ಆಗತಕ್ಕದ್ದು ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೇವೆ. ಅದಕ್ಕೆ ಸರ್ಕಾರ ಯಾವರೀತಿ ಕಾರ್ಯಕ್ರಮ ಕೈಗೊಂಡಿದೆ ಅದು ಮನವರಿಕೆಯಾಗಿದೆ. ಈ ಸಾರಿ ನಮ್ಮ ರೆವಿನ್ಯೂ ಮಂತ್ರಿಗಳು, ಸಕಾಲದಲ್ಲಿ ಸ್ಥಳಕ್ಕೆ ಭೇಟಿ ಕೊಟ್ಟು, ಉಪಯುಕ್ತವಾಗಿ ಪರಿಶೀಲನೆ ಮಾಡಿ, ವ್ಯವಸ್ಥಿತವಾಗಿ ಪರಿಶೀಲನೆ ಮಾಡಿ ಇದನ್ನು ಪರಿಹರಿಸಿದ್ದಾರೆ. ಜನತೆ ಸಂಕಷ್ಟದಲ್ಲಿದ್ದಾಗ, ಸಕಾಲದಲ್ಲಿ ಸಹಾಯ ಒದಗಿಸತಕ್ಕದ್ದನ್ನು ಮಾಡಿದ್ದಾರೆ. ನೀರಿನಿಂದ ಹೊರಗೆ ತಂದುಬಿಡತಕ್ಕದ್ದು ಮಾಡಿದ್ದಾರೆ;

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರ, ಪ್ರವಾಹವನ್ನೇ ನೋಡದೇ ಇದ್ದವರು ಹೇಳಿದರೆ ಹೇಗೆ?

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಉಲ್ಲೇಖ ಮಾಡಿದ್ದರಿಂದ ಹೇಳುತ್ತಿದ್ದೇನೆ. ಈಗ ಏನಾಗಿದೆ ಎಂದರೆ, ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಹೇಳುತ್ತಾರೆ, ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು ಎಂದ ಹಾಗೆ ಆಗಿದೆ. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 7 ತಿಂಗಳು ತುಂಬಿ 8ನೇ ತಿಂಗಳಿಗೆ ಬಿದ್ದಿದೆ. ಇನ್ನೂ 9ನೇ ತಿಂಗಳಿಗೆ ಬಂದಿಲ್ಲ. ಇಷ್ಟು ಕಾಲದಲ್ಲಿ ನಮ್ಮ ಸರ್ಕಾರ ಏನೇನು ಒಳ್ಳೆಯ ಕೆಲಸಗಳನ್ನು ಮಾಡಿದೆ ಅದನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾರೇ ಆಗಲಿ, ಯಾವುದೇ ಒಂದು ಸಂಕಷ್ಟದಲ್ಲಿದ್ದಾಗ, ಅವರನ್ನು ಮುಳುಗಿ ಹೋಗಲಿಕ್ಕೆ ಬಿಡುವುದಿಲ್ಲ. ಅವರನ್ನು ಉಳಿಸುವಂಥ ಕಾಳಜಿ ಇರುತ್ತದೆ. ನಮಗೆ ಹೃದಯ ಇದೆ. ಕಣ್ಣು ಇದೆ, ನಮ್ಮ ನಾಯಕರಾದಂಥ ಹೆಗ್ಗಡೆಯವರು ಸಮರ್ಥರಾಗಿದ್ದಾರೆ. ಬಡವರಿಗೆ ಏನು ಅನುಕೂಲ ಬೇಕೋ ಅದನ್ನು ನಮ್ಮ ಸರ್ಕಾರ ಮಾಡುತ್ತದೆ.

ಇನ್ನು ಬರಗಾಲ ಪ್ರದೇಶದ ಬಗ್ಗೆ ಹೇಳಬೇಕೆಂದರೆ ಎಲ್ಲಾ ಕಡೆಯಿಂದ 20 ಅಂಶದ ಕಾರ್ಯಕ್ರಮದಲ್ಲಿ ಎರಡು ತಿಂಗಳಿಗೆ ಒಂದು ಸಾರಿ ಮೀಟಿಂಗ್ ಕರೆಯುತ್ತಾರೆ. ಆ ಒಂದು ಸಭೆಯಲ್ಲಿ ಪ್ರತಿಯೊಂದು ವಿಚಾರಗಳು ಚರ್ಚೆಯಾಗುತ್ತವೆ 'ರಾಜ್ಯದಲ್ಲಿ ಎಲ್ಲೆಲ್ಲಿ ತೊಂದರೆಯಾಗಿದೆ, ಎಲ್ಲೆಲ್ಲಿ ಬಾವಿಗಳು ಬೇಕು, ಅದರ ಬಗ್ಗೆ ಚರ್ಚೆ ಮಾಡಿ ಉಪಯುಕ್ತವಾದ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಈಗ ಸರ್ಕಾರ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ವಿಫಲವಾಗಿವೆ ಎಂದು ಹೇಳುವಂತಾದ್ದು ಅವರಿಗೆ ರೂಢಿನಾಮವಾಗಿದೆ, ಅದನ್ನು ಅವರು ಬಿಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಂಚಾಯಿತಿಗಳಲ್ಲಿ ಗ್ರಾಮಲೆಕ್ಕಿಗರ ಸಂಖ್ಯೆ ಕಡಿಮೆ ಇದ್ದು ಬಹಳ ತೊಂದರೆಯಾಗಿಧೆ. ಇವರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಖಾತೆಯ ಬಗ್ಗೆ ಜನತೆ ಏನು ಅಲೆದಾಡುತ್ತಿದ್ದಾರೆ ಅದನ್ನು ತಪ್ಪಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಭೂ ಸುಧಾರಣೆಯ ಬಗ್ಗೆ ಹೇಳಬೇಕು ಎಂದರೆ, ಹಿಂದೆ ಕೆಲವು ಕಲಂಗಳನ್ನು ತಂದು ಲ್ಯಾಂಡ್ ಟ್ರಿಬ್ಯುನಲ್ ದರಕಾಸ್ತು ಕಮಿಟಿಗಳನ್ನು ಮಾಡಿದ್ದರು ಆಗ ಆ ಸರ್ಕಾರದಲ್ಲಿ ಯಾರು ಇದ್ದರೋ ಅವರೇ ಇದ್ದರು. ಅನಂತರ ಅವರ ಕಾಲದಲ್ಲಿಯೇ ಆ ಸಮಿತಿ ರದ್ದು ಮಾಡಿದರು. ಇವೊತ್ತು ಉಳುವವನೇ ಭೂಮಿಗೆ ಒಡೆಯ ಎನ್ನತಕ್ಕದ್ದನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ಯಾರು ಭೂಮಿ ಉಳುತ್ತಾರೋ ಅವರಿಗೆ ಇನ್ನೂ ಭೂಮಿಯ ಒಡೆತನವನ್ನು ಕೊಟ್ಟಿಲ್ಲ. ಯಾರದೋ ಜಮೀನು ಯಾರೋ ಅನುಭವಿಸಿಕೊಂಡು ಹೋಗುತ್ತಿದ್ದಾರೆ. ಶೃಂಗೇರಿ ಗೋವಿಂದಗೌಡರ ಕ್ಷೇತ್ರದಲ್ಲಿ ಯಾರದೋ ಫಹಣಿ ಯಾರಿಗೋ ಬರೆದಿರುವಂತಾದ್ದು ಲ್ಯಾಂಡ್‌ಟ್ರಿಬ್ಯುನಲ್‌ನಲ್ಲಿ ಆಯಿತು. ನಮ್ಮ ಕಾಲದಲ್ಲಿ ಆ ಅನ್ಯಾಯ ನಡೆಯಬಾರದು ಎಂದು ಕೇಳಿಕೊಳ್ಳುತ್ತೇನೆ. ಗೇಣಿದಾರರು ನಿಜವಾಗಿ ಯಾರು ಇದ್ದರು ಅವರಿಗೆ ಭೂಮಿ ದೊರೆಯದೆ ಹಿಂದೆ ಅನ್ಯಾಯವಾಗಿದೆ; ನಿಜವಾಗಿ ಭೂಮಿ ಕಳೆದುಕೊಂಡ ರೈತರಿಗೆ ಇನ್ನಾದರೂ ದುಡ್ಡು ಪಾವತಿಯಾಗಿದೆಯೇ ಆ ಬಗ್ಗೆ ವಿಚಾರ ಮಾಡಬೇಕಾಗಿದೆ. ಮಾನ್ಯ ಖರ್ಗೆಯವರು ಮಂತ್ರಿಗಳಾಗಿದ್ದರು. ಈವರೆಗೆ ಪಾವತಿ ಆಗಿಲ್ಲ, ನಾವು ಅವರಿಗೆ ತೀರಿಸಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಮಾನ್ಯ ಸದಸ್ಯರು ರೆವಿನ್ಯೂ ಮಂತ್ರಿಗಳು ಕೊಟ್ಟ ವರದಿಯನ್ನು ಓದುತ್ತಿದ್ದಾರೇನೋ ತಿಳಿಸಬೇಕು.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಯಾವುದೇ ಗೇಣಿದಾರನಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವ ಶಕ್ತಿ, ಸಂಸ್ಕೃತಿ ನಮ್ಮ ಸರ್ಕಾರಕ್ಕೆ ಇದೆ. ಹಿಂದೆ ಆಗಿರುವಂತೆ ಅನ್ಯಾಯವಾಗಲಿಕ್ಕೆ ನಮ್ಮ

ಸರ್ಕಾರ ಅವಕಾಶ ಕೊಡುವುದಿಲ್ಲ. ನಮ್ಮ ಸರ್ಕಾರ ಹೆಚ್ಚಿನ ಕಾಳಜಿ ವಹಿಸಿ ಕೆಲಸ ಮಾಡುತ್ತದೆಂದು ಹೇಳುತ್ತೇನೆ. ಇನ್ನು ಒತ್ತುವರಿ ವಿಚಾರದ ಬಗ್ಗೆ ಹೇಳಬೇಕಾಗುತ್ತದೆ. ರಾಜ್ಯದಲ್ಲಿ ಲಕ್ಷೋಪಲಕ್ಷ ಎಕರೆ ಒತ್ತುವರಿ ಯಾಗುತ್ತದೆ. ಅದಕ್ಕೆ ಜವಾಬ್ದಾರರು ಯಾರು ? ಎಂದು ವಿಮರ್ಶೆ ಮಾಡುತ್ತಾ ಹೋದರೆ ಆ ಜವಾಬ್ದಾರಿಯನ್ನು ಆ ಕಡೆಯವರಿಗೆ ಹೊರಿಸಬೇಕಾಗುತ್ತದೆ. 20 ವರ್ಷಗಳ ಆಡಳಿತ ವ್ಯವಸ್ಥೆಯಲ್ಲಿ ಪ್ರತಿಯೊಂಂ ಒತ್ತುವರಿಯಾಗಿದೆ ಎಂದು ಹೇಳಬೇಕಾಗುತ್ತದೆ. ಇದನ್ನು ನಮ್ಮ ಮಾಜಿ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಚುನಾವಣೆ ಬಂದಾಗ ಸಾಗುವಳಿ ಮಾಡಿ ಮಾಡಿ ಎಂದು ಹೇಳಿ ಕೊಟ್ಟಿದ್ದಾರೆ. ಬೇಕಾದರೆ ಎಮ್ಮೆದೊಡ್ಡಿ ಪ್ರಕರಣದಲ್ಲಿ ಇದನ್ನು ತೋರಿಸಬಹುದು. ಇನ್ನು ಬಗರ್ ಹುಕ್ಕುಂ ಸಾಗುವಳಿಯನ್ನು ಹತ್ತಾರು ವರ್ಷಗಳಿಂದ ಯಾರು ಮಾಡಿಕೊಂಡು ಬಂದಿದ್ದಾರೆ. ಅದರಲ್ಲಿ ನಿಜವಾಗಿ ಬಡವರು ಯಾರು ಇದ್ದಾರೆ ಅವರಿಗೆ ಭೂಮಿ ಒಡೆತನ ಕೊಟ್ಟು ಒಂದು ಉತ್ತಮವಾದಂಥ ಕೆಲಸವನ್ನು ಮಾಡಲಿಕ್ಕೆ ಸ್ಪೆಷಲ್ ಡೆಪ್ಯುಟಿಕಮಿಷನರ್, ಸ್ಪೆಷಲ್ ತಹಶೀಲ್ದಾರ್ ಸ್ಪೆಷಲ್ ಸರ್ವೆಯರ್ ಹಾಕಿ ದಿಟ್ಟ ಹೆಜ್ಜೆಯಲ್ಲಿ ಕೆಲಸ ಮಾಡಬೇಕೆಂದು ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದಿನಿಂದಲೂ ಆಗಿರುವಂಥ ಅನ್ಯಾಯವನ್ನು ಸರಿಪಡಿಸಬೇಕಾಗಿದೆ. ಬಡವರನ್ನು ಜಮೀನಿನಿಂದ ಬಿಟ್ಟು ಕಳುಹಿಸುವುದಕ್ಕೆ ಆಗುವುದಿಲ್ಲ. ನಮ್ಮ ಸರ್ಕಾರ ಹಿಂದೆ ಆಗಿರತಕ್ಕದ್ದನ್ನೆಲ್ಲಾ ಸರಿಪಡಿಸಿ, ಅವರಿಗೆ ಭೂ ಒಡೆತನದ ಹಕ್ಕು ಕೊಟ್ಟು ಇನ್ನುಮುಂದೆ ಈ ತರಹ ಬಗರ್ ಹುಕ್ಕುಂ ಆಗದಂತೆ ಒಂದು ಕಟ್ಟಾಜ್ಞೆಯನ್ನು ಜಾರಿಗೆ ತರಬೇಕು. ಇನ್ನು ಮುಂದೆ ಏನಾದರೂ ಬಗರ್‌ಹುಕ್ಕುಂ ಮಾಡಿದರೆ ಶಿಕ್ಷೆ ವಿಧಿಸತಕ್ಕ ಕಾನೂನು ಜಾರಿಗೆ ತರಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಯ ಮೇಲೆ ನಾನು ನನ್ನ ಅಭಿಪ್ರಾಯಗಳನ್ನು ಹೇಳುತ್ತಿದ್ದೇನೆ. ಅವರು ಮಾತನಾಡುವಾಗ ಏನು ಬೇಕಾದರೂ ಹೇಳಿಕೊಳ್ಳಲಿ.

ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಒಂದೊಂದು ಜಿಲ್ಲೆಗೆ ಒಂದೊಂದು ಮಾಡಬೇಕೆಂದು ಹೇಳಿದರು. ನಾನು ಹೇಳುತ್ತೇನೆ, ಈ ಲ್ಯಾಂಡ್ ಟ್ರಿಬ್ಯೂನಲ್‌ಗಳು ತಾಲೂಕಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಯಲ್ಲಿರುತ್ತವೆ. ಇವತ್ತು ಈ ಟ್ರಿಬ್ಯೂನಲ್‌ಗಳನ್ನು ಮಾಡಿರುವುದರಿಂದ ಸರ್ಕಾರಕ್ಕೆ ಒಂದು ದೊಡ್ಡ ಹೊರೆಯಾಗಿದೆ. ಟ್ರಿಬ್ಯೂನಲ್‌ನಲ್ಲಿ ಆದ ತೀರ್ಮಾನದ ವಿರುದ್ಧ ಕೇವಲ ಶ್ರೀಮಂತರು ಮಾತ್ರ ಕೋರ್ಟಿಗೆ ಹೋಗುತ್ತಾರೆ. ಬಡವರು ಯಾರೂ ಕೂಡಾ ಹೋಗುವುದಿಲ್ಲ. ಬಡವರಿಗೆ 4 ಎಕರೆ ಭೂಮಿ ಹೋದರೂ ಅವರು ಸಮಾಧಾನಚಿತ್ತರಾಗಿರುತ್ತಾರೆ. ಅವರಂತೂ ಕೋರ್ಟಿಗೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಜಿಲ್ಲಾ ಮಟ್ಟದಲ್ಲಿ ಟ್ರಿಬ್ಯೂನಲ್‌ಗಳನ್ನು ಮಾಡಿದ್ದರಿಂದ ಸರ್ಕಾರಕ್ಕೆ ಒಂದು ದೊಡ್ಡ ಹೊರೆ ಆಗಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ ಎನ್.ಆರ್.ಇ.ಪಿ.ಯಲ್ಲಿ ಕೆಲಸ ಸಾಕಷ್ಟು ನಡೆಯುತ್ತಿಲ್ಲವೆಂದು ಹೇಳಿದರು. ಅದಕ್ಕೆ ನಾನು ಹೇಳುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಕಾಮಗಾರಿ ಕೆಲಸ ಚೆನ್ನಾಗಿಯೇ ನಡೆದುಕೊಂಡು ಬರುತ್ತಿದೆ. ಎಲ್ಲಿಯೂ ನಿಲ್ಲಿಸಿಲ್ಲ. ಆ ಸಮಿತಿಯಲ್ಲಿ ನಮ್ಮ ಮಾನ್ಯ ಸದಸ್ಯರೂ ಇದ್ದಾರೆ. ರಿಲೀಫ್ ವರ್ಕ್ಸ್‌ನ್ನು ಯಾವಾಗ ಮಾಡಬೇಕೆಂದರೆ ರೈತರಿಗೆ ಬಿಡುವು ಇರತಕ್ಕ ಕಾಲದಲ್ಲಿ, ಕಾಲಕ್ಕೆ ಸರಿಯಾಗಿ ಮಳೆ ಇಲ್ಲದೆ ಎಲ್ಲಿಯೂ ಕೂಲಿ ಸಿಕ್ಕದಿರುವ ಸಂದರ್ಭದಲ್ಲಿ ಈ ಕೆಲಸವನ್ನು ಮಾಡಿಸ ಬೇಕೆಂದು ಸರ್ಕಾರದ ಅಜ್ಞೆಯೇ ಇದೆ, ಇದರ ಪ್ರಕಾರ ರಾಜ್ಯದಲ್ಲಿ ಸಮರ್ಪಕವಾದ ಕೆಲಸವನ್ನು ಮಾಡಿಸಬೇಕೆಂದು ಸರ್ಕಾರದ ಅಜ್ಞೆಯೇ ಇದೆ. ಇದರ ಪ್ರಕಾರ ರಾಜ್ಯದಲ್ಲಿ ಸಮರ್ಪಕವಾದ ಕೆಲಸವನ್ನು ನಮ್ಮ ಸರ್ಕಾರ ಮಾಡೇತ್ತಾ ಬಂದಿದೆಯೆಂದು ಹೇಳಬಯಸುತ್ತೇನೆ. ಈಗ ರಾಜ್ಯದಲ್ಲಿ ಸಾಕಷ್ಟು ಮಳೆ ಬೀಳುತ್ತಿದೆ. ಜನರಿಗೆ ಕೈತುಂಬಾ ಕೆಲಸವಿದೆ. ಆದ್ದರಿಂದ ಒಂದು ತಿಂಗಳವರೆಗೆ ಈ ರಿಲೀಫ್ ಕಾಮಕಾರಿಗಳನ್ನು ಮುಂದೂಡಬೇಕೆಂದು ಹೇಳಬಯಸುತ್ತೇನೆ. ಎನ್.ಆರ್.ಇ.ಪಿ. ಪ್ರಕಾರ ಪ್ರತಿಯೊಂದು ಗ್ರಾಮಕ್ಕೂ ರಸ್ತೆಕೆಲಸ, ಕಟ್ಟಡಗಳ ಕೆಲಸ ಮುಂತಾದ ಉಪಯುಕ್ತ ಕೆಲಸಗಳನ್ನು ನಮ್ಮ ಸರ್ಕಾರ ಮಾಡಿದೆಯೆಂದು ಹೇಳಬಯಸುತ್ತೇನೆ.

ಇನ್ನು ಲ್ಯಾಂಡ್ ಗ್ರ್ಯಾಂಟ್ ಕಮಿಟಿ ವಿಚಾರದಲ್ಲಿ ಹೇಳುವುದಾದರೆ, ಈ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಮತ್ತು ಲ್ಯಾಂಡ್ ಟ್ರಿಬ್ಯುನಲ್‌ಗಳಿಗೆ ಯಾರು ಯಾರನ್ನು ಹಾಕಿದ್ದೀರಿ ಎಂದು ನಮ್ಮ ಸ್ನೇಹಿತರು ಕೇಳಿದರು. ಇವತ್ತು ಬೆಳಿಗ್ಗೆ ಕೂಡ ಇದರ ಬಗ್ಗೆ ಒಂದು ಪ್ರಶ್ನೆ ಇತ್ತು. ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಹಿಂದಿನ ಸರ್ಕಾರದವರು ಏನು ನೀತಿಯನ್ನು ಅನುಸರಿಸಿಕೊಂಡು ಬಂದಿದ್ದರು ಅದೇ ನೀತಿಯನ್ನೇ ತಾವೂ ಕೂಡ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಯಾರು ಉತ್ತಮ ವ್ಯಕ್ತಿಗಳೆಂದು ಕಂಡುಬರುತ್ತಾರೆ. ಅವರನ್ನು ಈ ಸಮಿತಿಗೆ ನೇಮಕ ಮಾಡುತ್ತಿದ್ದೇವೆ. ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಮತ್ತು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಉತ್ತಮ ಕೆಲಸಗಳನ್ನು ನಮ್ಮ ಸರ್ಕಾರ ಖಂಡಿತವಾಗಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ, ಜನರು ಹೊಂಗೆಯ ಮರದಲ್ಲಿ ಸೊಪ್ಪನ್ನು ಕಡಿಯುತ್ತಾರೆ, ಈ ಸೊಪ್ಪು ಗದ್ದೆಗೆ ಒಳ್ಳೆಯ ಗೊಬ್ಬರವೇನೋ ಹೌದು. ಆದರೆ ಸೊಪ್ಪು ಕಡಿಯುವ ವಿಚಾರವನ್ನು ಕಾರ್ಯಕ್ರಮದಲ್ಲಿ ಅಳವಡಿಸುವುದು ಬಹಳ ಕಷ್ಟ. ಸೊಪ್ಪನ್ನು ಕಡಿಯಲು ಸರ್ಕಾರ ಅವಕಾಶ ಕೊಟ್ಟರೆ ಬೊಕ್ಕಸಕ್ಕೆ ಹೆಚ್ಚಿನ ವರಮಾನ ಬರುತ್ತದೆ. ಹೊಂಗೇಕಾಯಿ, ಅಂಟವಾಳ

ಮುಂತಾದುವನ್ನು ಹರಾಜು ಮಾಡುತ್ತಾರೆ. ಇದರಿಂದ ಕೂಡ ಸರ್ಕಾರಕ್ಕೆ ವರಮಾನ ಬರುತ್ತದೆ. ರೈತರು ಕಾಡಿನಲ್ಲಿ ಸೊಪ್ಪನ್ನು ಕಡಿಯಲು ಅವಕಾಶವನ್ನು ಕೊಡದೆ ಅವರವರ ಹೊಲ, ಗದ್ದೆಗಳ ಬದುವಿನಲ್ಲಿ ಸೊಪ್ಪಿನ ಮರಗಳನ್ನು ಬೆಳೆಸುವಂತ ಸೂಚನೆ ಕೊಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ತಮಗೆ ಒಬ್ಬರಿಗೆ ಮಾತ್ರ ಹರಿಜನ ಗಿರಿಜನರ ಬಗ್ಗೆ ಕಾಳಜಿ ಬಹಳವಾಗಿದೆ, ಬೇರೆಯವರಿಗೆ ಇಲ್ಲ ಎಂದು ಹೇಳಿದರು. ಈಗ ಅವರಿಗೆ ಮಾತನಾಡಲು ಉಳಿದಿರುವ ವಿಷಯ ಎಂದರೆ ಹರಿಜನರ ವಿಚಾರ ಒಂದೇ ಒಂದು. ಏಕೆಂದರೆ, ರಾಜ್ಯದಲ್ಲಿ ಎಲ್ಲ ವಿಷಯಗಳ ಮೇಲೂ ಮಾತನಾಡಿದ್ದು ಆಗಿಹೋಗಿಯಿತು. ಈಗ ಈ ಹರಿಜನರ ಬಗ್ಗೆ ಮಾತನಾಡಿದರೆ ಸಾಕಷ್ಟು ಜನರು ನಮ್ಮ ಮೇಲೆ ಪ್ರೀತಿಯನ್ನು ತೋರಿಸುತ್ತಾರೆ ಎಂದು ಅವರ ಬಗ್ಗೆ ಮಾತನಾಡುತ್ತಾರೆ. ಸ್ವಾಮಿ, ನಾನಾದರೂ ಹೇಳುತ್ತೇನೆ. ನಾನು ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿ 18 ವರ್ಷಗಳ ಕಾಲ ಇದ್ದೆ; ಮತ್ತು ಈಗಲೂ ಅಧ್ಯಕ್ಷನಾಗಿಯೇ ಇದ್ದೇನೆ. ನನಗೆ ಆ ಜನರ ಬಗ್ಗೆ ಹೆಚ್ಚಿನ ಕಾಳಜಿ ಇದೆ. ನಾನು ಆ ಜನರ ಉದ್ಧಾರಕ್ಕಾಗಿ ಇದುವರೆಗೂ ಶ್ರಮಿಸಿದ್ದರಿಂದ ಅವರು ನನ್ನನ್ನು ಇವತ್ತು ಇಲ್ಲಿಗೆ ಚುನಾಯಿಸಿ ಕಳುಹಿಸಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಯಾರನ್ನು ನೋಡಿದರೂ ಕೇವಲ ಹರಿಜನ ಗಿರಿಜನರ ಬಗ್ಗೆಯೇ ಮಾತೆತ್ತಿದರೆ ಮಾತನಾಡುತ್ತಿರುತ್ತಾರೆ. ನಾನು ಅವರಿಗೆ ಇಷ್ಟು ಮಾತ್ರ ಹೇಳುತ್ತೇನೆ. ಹರಿಜನ ಗಿರಿಜನರ ಬಗ್ಗೆ, ಅಲ್ಪಸಂಖ್ಯಾಂತರ ಬಗ್ಗೆ ಹೆಚ್ಚಿನ ಕಾಳಜಿ ಇಟ್ಟುಕೊಂಡಿರುವವರು ಎಂದರೆ ನಮ್ಮ ಸರ್ಕಾರದವರು. ಈ ವರ್ಗದ ಕಲ್ಯಾಣಕ್ಕಾಗಿ ಆಸಕ್ತಿಯನ್ನು ತೋರಿಸಿ ಅವರನ್ನು ಉತ್ತಮ ಸ್ಥಿತಿಗೆ ತರಲು ಶ್ರಮಿಸುತ್ತಾರೆಂದು ಹೇಳಬಯಸುತ್ತೇನೆ.

ಇನ್ನು ಮುಜರಾಯಿ ಇಲಾಖೆಯ ಬಗ್ಗೆ ಹೇಳುವುದಾದರೆ, ಭಾರತೀಯರಾದ ನಾವೆಲ್ಲರೂ ದೇವರಲ್ಲಿ ಭಕ್ತಿ ಮತ್ತು ನಂಬಿಕೆಯನಿಟ್ಟುಕೊಂಡಿದ್ದೇವೆ. ದೇವರನ್ನು ಬಿಟ್ಟರೆ ನಾವಿಲ್ಲ, ನಮ್ಮನ್ನು ಬಿಟ್ಟರೆ ದೇವರಿಲ್ಲ. ಮಾನ್ಯ ಮುಜರಾಯಿ ಖಾತೆ ಸಚಿವರಲ್ಲಿ ನನ್ನ ಒಂದು ಮನವಿ ಏನೆಂದರೆ, ನಮ್ಮ ರಾಜ್ಯದಲ್ಲಿರತಕ್ಕ ಪ್ರಾಚೀನ ದೇವಸ್ಥಾನಗಳನ್ನು ಆದಷ್ಟು ಜೀರ್ಣೋದ್ಧಾರ ಮಾಡಿಸುವುದು, ಮತ್ತು ದೇವಸ್ಥಾನಗಳಲ್ಲಿ ಪೂಜೆಯನ್ನು ಮಾಡತಕ್ಕ ಅರ್ಚಕರುಗಳಿಗೆ ಹಿಂದೆ ಏನು 5 ರೂ. ಸಂಭಾವನೆಯನ್ನು ಕೊಡಲಾಗುತ್ತಿತ್ತು. ಅದನ್ನು ಹೆಚ್ಚು ಮಾಡಿ ಅವರು ಕಾಲಕಾಲಕ್ಕೆ ದೇವಸ್ಥಾನಕ್ಕೆ ಹೋಗಿ ಧೇವರ ಪೂಜೆಯನ್ನು ಮಾಡಲು ಅನುಕೂಲ ಮಾಡಿಕೊಡಬೇಕು. ನಮ್ಮ ರಾಜ್ಯದ ಆದಾಯದಲ್ಲಿ ಎಷ್ಟೋ ಹಣ ಅನಾವಶ್ಯಕವಾಗಿ ಸೋರಿಹೋಗುತ್ತಿರುವುದನ್ನು ತಪ್ಪಿಸಿ ಅದನ್ನು ಮುಜರಾಯಿ ಇಲಾಖೆಗೆ ಒದಗಿಸಿ ಎಲ್ಲೆಲ್ಲಿ ಪ್ರಾಚೀನ ದೇವಾಲಯಗಳಿವೆ ಅವುಗಳನ್ನು ಜೀರ್ಣೋದ್ಧಾರ ಮಾಡಿಸಬೇಕು. ತನ್ಮೂಲಕ ನಮ್ಮ ಹಣವನ್ನು ಇಂಥ ಧರ್ಮಕಾರ್ಯಗಳಿಗೆ ಉಪಯೋಗಿಸಬೇಕೆಂದು ಹೇಳಿ ಇವತ್ತು ಮಾನ್ಯ ಕಂದಾಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆ ಏನಿದೆ ಇದು ಬಹಳ ಉತ್ತಮ ಹಾಗೂ ಸಾಧುವಾಗಿದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಸನ್ಮಾನ್ಯ ಅಧ್ಯಕ್ಷರೆ, ಇಂದಿನ ದಿವಸ ಮಾನ್ಯ ಕಂದಾಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಕೆಲವು ಸಮಸ್ಯೆಗಳನ್ನು ಅವರ ಮುಂದಿಡುತ್ತಿದ್ದೇನೆ. ಈಗಾಗಲೇ 2–3 ಜನ ಮಾನ್ಯ ಸದಸ್ಯರು ಮಾತನಾಡಿ ಹಿಂದಿನ ಸರ್ಕಾರ ಅನೇಕ ಅನಾಹುತಗಳನ್ನು ಮಾಡಿತು, ಅದರಲ್ಲೂ ಮುಖ್ಯವಾಗಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಅನೇಕ ಅನ್ಯಾಯವಾಗಿದೆ, ನಮ್ಮ ಸರ್ಕಾರ ಒಳ್ಳೆಯ ರೀತಿಯಿಂದ ಕೆಲಸಮಾಡುತ್ತಿದೆ ಎಂದು ಹೇಳಿದವರಲ್ಲಿ ಮಾನ್ಯ ಲಕ್ಷ್ಮಯ್ಯನವರೂ ಒಬ್ಬರು. ಇವರು ಎಷ್ಟುಮಟ್ಟಿಗೆ ಕೆಲಸಮಾಡಿದ್ದಾರೆಂದರೆ ಕೆಲವೇ ಕಾಲದಲ್ಲಿ ತಮ್ಮ ಗಮನಕ್ಕೆ ಮತ್ತು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಕಳೆದ 8 ತಿಂಗಳಿಂದಲೂ ಈ ಕಂದಾಯ ಇಲಾಖೆ ಯಾವ ರೀತಿಯಿಂದಲೂ ಕೆಲಸ ಮಾಡುತ್ತಿಲ್ಲ. ಇದು ನಿಂತುಹೋದಂಥ ಇಲಾಖೆ, ಮೊದಲು ಎಲ್ಲಿ ನಿಂತಿತ್ತೊ ಇವತ್ತೂ ಅಲ್ಲೇ ನಿಂತಿದೆ. ಒಂದು ಅಂಗುಲ ಕೂಡ ಮುಂದೆ ಹೋಗಿಲ್ಲ. ಲ್ಯಾಂಡ್ ಗ್ರ್ಯಾಂಟ್ ವಿಚಾರದಲ್ಲಾಗಲಿ, ಲ್ಯಾಂಡ್ ಟ್ರಿಬ್ಯುನಲ್ ವಿಚಾರದಲ್ಲಾಗಲಿ, ಕಟ್ಟಡಗಳ ನಿರ್ಮಾಣದಲ್ಲಾಗಲಿ, ವಿಲೇಜ್ ಅಕೌಂಟೆಂಟ್ಸ್ ಕ್ವಾರ್ಟರ್ಸ್‌ನ ನಿರ್ಮಾಣದ ವಿಚಾರದಲ್ಲಾಗಲಿ, ಅಥವಾ 20 ಅಂಶದ ಕಾರ್ಯಕ್ರಮದಲ್ಲಾಗಲಿ ಒಂದು ಅಂಗುಲ ಕೂಡ ಮುಂದೆ ಹೋಗಿಲ್ಲ; ಒಂದು ಅಂಗುಲ ಭೂಮಿಯನ್ನು ಒಬ್ಬರಿಗೆ ಕೊಟ್ಟಿಲ್ಲ; ಎಂಬುದು ಇವರು ಕೊಟ್ಟಿರತಕ್ಕ ವರದಿಯ ಆಧಾರದಮೇಲೆ ನಾನು ಹೇಳುತ್ತಿದ್ದೇನೆ. ಈ ವರದಿಯನ್ನು ನಾವು ತಯಾರು ಮಾಡಿದ್ದಲ್ಲ. ಇದನ್ನು ಮಾನ್ಯ ಕಂದಾಯ ಸಚಿವರೇ ತಯಾರಿಸಿ ಸಭೆಯ ಮುಂದಿಟ್ಟಿದ್ದಾರೆ 1983ರ ಜನವರಿವರೆಗೆ ಏನೇನೆಲ್ಲ ಕೆಲಸವಾಗಿದೆ, 1983ರ ನಂತರ ಏನೇನು ಕೆಲಸವಾಗಿದೆ ಎಂಬುದನ್ನು ನೋಡಿದರೆ 1983ರಿಂದ ಈಚೆಗೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿಲ್ಲ ಯಾರಿಗೂ ಒಂದು ಅಂಗುಲ ಕೂಡ ಭೂಮಿಯನ್ನು ಕೊಟ್ಟಿಲ್ಲ, ಲ್ಯಾಂಡ್ ಟ್ರಿಬ್ಯುನಲ್‌ನ್ನು ಮಾಡಿಲ್ಲ ಅಂದಮೇಲೆ ಟೆನೆನ್ಸಿ ವಿಷಯವಾಗಲಿ, ಹೆಚ್ಚುವರಿ ಭೂಮಿಯನ್ನು ಹಂಚುವ ಕೆಲಸ ಆಗಲಿ ಆಗಿಲ್ಲ. ಮಾತೆತ್ತಿದರೆ ಹಿಂದಿನ ಸರ್ಕಾರವನ್ನು ದೂರುವುದೇ ಇವರ ಕೆಲಸ. ಲ್ಯಾಂಡ್ ರೀ ಫಾರಂಸ್ ಬಗ್ಗೆ

ಹೇಳುವುದಾದರೆ ನಮ್ಮ ಕಾಂಗ್ರೆಸ್ ಪಕ್ಷ ಪ್ರಗತಿಪರವಾದ ಒಂದು ಕಾನೂನು ಮಾಡಿ ಸುಮಾರು 5 ಲಕ್ಷ ಜನರಿಗೆ ಸಹಾಯ ಮಾಡಿದೆ, ಇದಕ್ಕೆ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸರು ಮತ್ತು ಮಾನ್ಯ ಹುಚ್ಚಮಾಸ್ತಿ ಗೌಡರು ಕಾರಣಕರ್ತರು ಎಂದು ಹೇಳಬಯಸುತ್ತೇನೆ. ಈ ಕಾನೂನನ್ನು ಜಾರಿಗೆ ತರಲು ಅನೇಕ ಸದಸ್ಯರು ಕಾಂಟ್ರಿಬ್ಯೂಟ್ ಮಾಡಿದ್ದಾರೆ. ಅದಕ್ಕಾಗಿ ಅವರಿನ್ನು ತಾವು ಇಂದು ವಂದಿಸಬೇಕಾಗಿದೆ. ನಿಜವಾಗಿ ಹೇಳುವುದಾದರೆ ಈ ಜನತಾ ಸರ್ಕಾರದಿಂದ ಜನರಿಗೆ ಯಾವುದೇ ಸಹಾಯ ಕೂಡ ಸಿಕ್ಕಿಲ್ಲ. ಹಿಂದೆ ಏನಾದರೂ ಒಂದು ಕಿಂಚಿತ್ ಕೆಲಸ ಆಗಿದೆ ಎಂದರೆ ಇಂದಿನ ಸ್ವತಂತ್ರ ಅಭ್ಯರ್ಥಿಯಾದ ಶ್ರೀಮಾನ್ ಹುಚ್ಚಮಾಸ್ತಿಗೌಡರ ಕಾಲದಲ್ಲಿ, ಮತ್ತು ದೇವರಾಜ ಅರಸರ ಕಾಲದಲ್ಲಿ, ಎಂದು ನಾನು ಹೇಳಬಯಸುತ್ತೇನೆ.

3-30 P.M.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಖಾರ್ಗೆಯವರು ರೆವಿನ್ಯೂ ಸಚಿವರಾಗಿದ್ದವರು ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ನುರಿತವರು. ಏನಾದರೂ ಹೊಸದಾಗಿ ಕೇಳಿದವರಿಗೆ ಹೇಳುತ್ತಾರೆ. ಮಾಹಿತಿಯನ್ನು ಕೊಡುತ್ತಾರೆಂದು ನಾವು ಭಾವಿಸಿದ್ದೆವು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಖಾರ್ಗೆಯವರು ಚರ್ಚೆಯಲ್ಲಿ ಭಾಗವಹಿಸಿ ಹೇಳಿದ್ದಾರೆ. ಈವತ್ತು ಜನತಾ ಪಾರ್ಟಿಯಲ್ಲಿ ಇರತಕ್ಕಂಥವರು, ಸರ್ಕಾರದಲ್ಲಿ ಇರತಕ್ಕಂಥ ಜನರು ಈವತ್ತು ದೇವರಾಜ ಅರಸ್‌ರವರ ಕಾಲದಲ್ಲಿ ಮಾಡಿರತಕ್ಕಂಥ ಪ್ರಗತಿಪರವಾದ ಕಾರ್ಯಕ್ರಮ ಏನು ಇದೆ ಅದಕ್ಕೆ ಯಾವರೀತಿ ಸಹಕಾರ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಖಾರ್ಗೆಯರಿವಗೆ ತಮ್ಮ ಮೂಲಕ ವಿವರಣೆಯನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. 1971ನೇ ಇಸವಿಯಲ್ಲಿ ಸನ್‌ಮಾನ್ಯ ದೇವೇಗೌಡರು ವಿರೋಧಪಕ್ಷದ ನಾಯಕರಾಗಿದ್ದರು. ಆಗ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದರು. ಸನ್‌ಮಾನ್ಯ ದೇವೇಗೌಡರು ಅವರ ಜೊತೆಯಲ್ಲಿ 22 ಜನರ ವಿರೋಧಪಕ್ಷದ ಸದಸ್ಯರು ಇದ್ದರು. ಅವರು ಯಾವ ರೀತಿ ಪ್ರಗತಿಪರವಾದ ಕಾರ್ಯಕ್ರಮವನ್ನು ಕಾರ್ಯಾಚರಣೆಗೆ ತರಲು ಅಡ್ಡಿ ಮಾಡಿದ್ದಾರೆ ಎನ್ನುವ ಬಗ್ಗೆ ದಯವಿಟ್ಟು ಹೇಳಬೇಕು. ತದನಂತರ ಮಾನ್ಯ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದುಕೊಂಡು ಜೈಲಿಗೆ ಹೋಗಿದ್ದಾರೆ. ಅದಾದನಂತರ ಮಾನ್ಯ ಬೊಮ್ಮಾಯಿಯವರು ವಿರೋಧಪಕ್ಷದ ನಾಯಕರಾದರು. ಅವರು ಯಾವರೀತಿ ಅಡಚಣೆಯನ್ನು ತಂದರು ಎಂಬುದಕ್ಕೆ ವಿವರಣೆಯನ್ನು ಕೊಡಬೇಕು. ಮಾನ್ಯ ಖಾರ್ಗೆಯವರು ಜನತಾಪಾರ್ಟಿಯ ಸರ್ಕಾರ ಎಂದು ಹೇಳಿದರು. ಮಾನ್ಯ ಬೊಮ್ಮಾಯಿಯವರು ಮತ್ತು ಚಂದ್ರಪ್ರಭ ಅರಸುರವರೂ ಕೂಡ ಇರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಅಧಿಕಾರಕ್ಕೆ ಬಂದಮೇಲೆ ಎಷ್ಟರಮಟ್ಟಿಗೆ ಪ್ರಯತ್ನ ಪಟ್ಟಿದ್ದೀರಿ ಎಂಬುದರ ಬಗ್ಗೆ ಹೇಳಿದೆ. ಲ್ಯಾಂಡ್ ಕಮಿಟಿಗಳನ್ನು ಮಾಡಿ ಎಷ್ಟು ಇತ್ಯರ್ಥ ಮಾಡಿದ್ದೀರಿ ಎಷ್ಟು ಜನರಿಗೆ ಹಣವನ್ನು ಕೊಟ್ಟಿದ್ದೀರಿ ಎನ್ನತಕ್ಕಂಥ ಪ್ರಶ್ನೆ ಮಾಡಿದಾಗ ಹಿಂದೆ ಇದ್ದವರನ್ನು, ಮುಂದೆ ಇದ್ದವರನ್ನು ಹೇಳುತ್ತಾ ಹೋದರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪ್ರಗತಿಪರವಾದ ಕಾನೂನನ್ನು ರಾಜ್ಯದಲ್ಲಿ ಕಾರ್ಯಗತ ಮಾಡಲಿಕ್ಕೆ ಈವತ್ತು ಜನತಾ ಪಾರ್ಟಿಯಲ್ಲಿರತಕ್ಕಂಥ ಹುಚ್ಚಮಾಸ್ತಿಗೌಡರೊಬ್ಬರನ್ನು ಹೇಳಿದಿರಿ. ಅದು ಹೆಮ್ಮೆ ಪಡತಕ್ಕಂಥ ವಿಷಯ. ಉಳಿದಿರತಕ್ಕಂಥವರು ಯಾವರೀತಿ ಅಡಚಣೆಯನ್ನು ಮಾಡಿದರು ಎಂದು ದಯವಿಟ್ಟು ವಿವರಣೆಯನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವತ್ತೇ ಹೇಳಿದ್ದೇನೆ. ಪುನಃ ಪುನಃ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೇಳುವುದಕ್ಕೆ ಆಗುವುದಿಲ್ಲ. ಹಿಂದೆ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಇದ್ದಂಥ ಮೆಂಬರ್ಸ್ ಯಾವ ರೀತಿ ಜಮೀನನ್ನು ಹಂಚಿದ್ದಾರೆಂಬುದು ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈರೀತಿ ಮಾತನಾಡಿದರೆ ನಾವು ಸಹಿಸಿಕೊಳ್ಳಲಾಗುವುದಿಲ್ಲ.

(ಗೊಂದಲ)

ನಾವು ಏನಾದರೂ ಪ್ರಯತ್ನ ಮಾಡಿದ್ದೇವೆ. ನೀವು ಏನು ಮಾಡಿದ್ದೀರಿ ? ಕಾನೂನಿಗೆ ಮೋಸ ಮಾಡಿದ್ದೀರಿ, ದ್ರೋಹ ಮಾಡಿದ್ದೀರಿ. ಈವತ್ತು ಮೋಸ ಮಾಡಿದಂಥ ಜನ ಸರ್ಕಾರದಲ್ಲಿ ಇದ್ದಾರೆ. ಯಾರಮೇಲೆ ಕೇಸ್ ಇತ್ತೋ ಯಾರಮೇಲೆ ಹೈಕೋರ್ಟ್ ಕೇಸ್ ಇತ್ತೋ ಅವರೇ ನಿಮ್ಮ ಸರ್ಕಾರದಲ್ಲಿ ಮಂತ್ರಿಗಳ ಸ್ಥಾನದಲ್ಲಿ ಇದ್ದಾರೆ. ಎನ್‌ಕ್ವಯರಿ ಮಾಡಿ, ರೆವಿನ್ಯೂ ಅಧಿಕಾರಿಗಳು ಇದ್ದಾರೆ. ಅದನ್ನು ಬಿಟ್ಟು ನೀವು ಏನು ಮಾಡಿದ್ದು ಎನ್ನುವುದು ನಮಗೆ ಗೊತ್ತು ಎಂದು ಕೈ ಆಡಿಸಿಕೊಂಡು ಹೇಳಿದರೆ ನಾವು ಅದನ್ನು ಕೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೇ ಈವತ್ತು ಅವರೇ ಕೊಟ್ಟಿರತಕ್ಕಂಥ ವರದಿಯ ಮೇಲೆ ನಾನು ಹೇಳುತ್ತಾ ಇದ್ದೇನೆ. ಇದರಲ್ಲಿ ಸುಮಾರು ಎಂಟು ಲಕ್ಷ ಹದಿಮೂರು ಸಾವಿರ ಗೇಣಿದಾರರು ಕರ್ನಾಟಕ ರಾಜ್ಯದಲ್ಲಿ ಇದ್ದಾರೆ. ಇದರಲ್ಲಿ ಸುಮಾರು 8 ಲಕ್ಷ 11 ಸಾವಿರ ಗೇಣಿದಾರರ ಇತ್ಯರ್ಥ ಮಾರ್ಚ್ 1973ರಲ್ಲಿ ಆಗಿದೆ ಎಂಬುದನ್ನು ವರದಿಯಲ್ಲಿ ಹೇಳಿದ್ದಾರೆ. ಉಳಿದಂಥ 1 ಸಾವಿರದ 568 ಗೇಣಿದಾರರು ಮಾತ್ರ. ಅಂದರೆ 1 ಸಾವಿರದ 568 ಗೇಣಿದಾರರ ಬಗ್ಗೆ ಯಾವ ಕಾರ್ಯಕ್ರಮ

ವನ್ನು ಹಾಕಿಕೊಂಡಿಲ್ಲ ಈ ಏಳು ತಿಂಗಳಲ್ಲಿ. ಏತಕ್ಕೆಂದರೆ ಇದನ್ನು ಅವರು ಇತ್ಯರ್ಥ ಮಾಡಬೇಕೆಂಬ ಮನಸ್ಸು ಮಾಡಲಿಲ್ಲ. ಕಾನೂನನ್ನು ಜಾರಿಗೆ ತರಬೇಕೆಂಬ ಮನಸ್ಸು ಮಾಡಿದ್ದರೆ, ಕಾನೂನನ್ನು ಆಚರಣೆಗೆ ತರಬೇಕೆಂಬ ಮನಸ್ಸು ಮಾಡಿದ್ದರೆ ತಕ್ಷಣ ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳನ್ನು ಮತ್ತು ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಅಲ್ಲಿರತಕ್ಕಂಥ ಗೇಣಿದಾರರಿಗೆ ರಕ್ಷಣೆಯನ್ನು ಕೊಡಬೇಕಾಗಿತ್ತು. ಈವತ್ತು ಈಗಾಗಲೇ ಡಾ. ಆಚಾರ್ಯರವರು ಮಾತನಾಡುತ್ತಾ ಹೇಳಿದರು. ಅವರ ಜಿಲ್ಲೆಯಲ್ಲಿ ಸುಮಾರು 19.491 ಅರ್ಜಿಗಳು ಬಂದಿದ್ದವು ಎಂದು ಹೇಳಿದರು. ಇದರಲ್ಲಿ ಮಾರ್ಚ್ ವರೆಗೆ ಇತ್ಯರ್ಥವಾದಂಥದ್ದು 5,967 ಉಳಿದಂಥ 3,751 ಅದರಲ್ಲಿ ಎಷ್ಟು ಇತ್ಯರ್ಥ ಮಾಡಿದ್ದೀರಿ ಅದರ ಬಗ್ಗೆ ಅಂಕಿಅಂಶಗಳನ್ನು ಕೊಡಲಿ. ನಾವು ಅವರು ಹೇಳಿದಂತೆ ಸೌತ್ ಕೆನರಾದಲ್ಲಿ ನಾರ್ತ್ ಕೆನರಾದಲ್ಲಿ, ಶಿವಮೊಗ್ಗದಲ್ಲಿ ಇರತಕ್ಕಂಥ ಅಪ್ಲಿಕೇಷನ್ ಎಷ್ಟು ಇತ್ಯರ್ಥ ಮಾಡಿದ್ದೀರಿ ಎಂಬುದರ ಬಗ್ಗೆ ಹೇಳಲಿ. ಸುಮಾರು 2,16,323 ಜನರಿಗೆ ಆಕ್ಯುಪೆನ್ಸಿ ರೈಟ್ಸನ್ನು ನಾವು ಕೊಟ್ಟಿದ್ದೇವೆ. ಸುಮಾರು 4,84,646 ರಲ್ಲಿ 2,16,323 ಗೇಣಿದಾರರಿಗೆ ಅಕ್ಯುಪೆನ್ಸಿ ರೈಟ್ಸ್‌ನ್ನು ಗ್ರ್ಯಾಂಟ್ ಮಾಡಿದ್ದೇವೆ. ತಾವು ಇಲ್ಲಿಯವರೆವಿಗೂ ಒಬ್ಬ ಹೊಸಬರಿಗೆ ಯಾರಿಗೂ ಆಕ್ಯುಪೆನ್ಸಿ ರೈಟ್ಸ್ ಕೊಟ್ಟಿಲ್ಲ. ಟ್ರಿಬ್ಯುನಲ್‌ಗಳನ್ನು ಮಾಡದೆ ಇರುವುದರಿಂದ ಕಾಂಪನ್‌ಸೇಷನ್ ಕೊಡುವುದಕ್ಕೆ ಆಗ್ತುತ್ತಿಲ್ಲ. ಅವರು ಸರ್ಕಾರ ಕೊಟ್ಟಂಥ ವರದಿ ಮಾನ್ಯ ಮಂತ್ರಿಗಳು ಈ ಸದನಕ್ಕೆ ಒಪ್ಪಿಸಿದಂಥ ವರದಿ, ಆ ವರದಿಯಲ್ಲಿಯೇ ಹೇಳಿದ್ದಾರೆ. ಏಳು ತಿಂಗಳು ಏನು ಮಾಡಿದ್ದಾರೆ ಅದಕ್ಕೆ ಉತ್ತರ ಅವರು ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಯಾವುದೇ ಟ್ರಿಬ್ಯುನಲ್ ನಡೆಯಬೇಕಾದರೂ, ಲ್ಯಾಂಡ್ ಗ್ರ್ಯಾಂಟ್ ವರ್ಕ್ ನಡೆಯಬೇಕಾದರೂ, ಕಾಂಪನ್‌ಸೇಷನ್ ಕೊಡಬೇಕಾದರೂ ಕಾನೂನು ಬದ್ಧವಾಗಿ ಕೊಡಬೇಕಾದರೆ ಕಾನೂನು ಪ್ರಕಾರ ಕಮಿಟಿಗಳನ್ನು ಮಾಡಲಿಲ್ಲವೆಂದರೆ ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ, ಅದನ್ನು ತಾವು ಒಪ್ಪಿಕೊಳ್ಳಬೇಕು. ಇದರಲ್ಲಿ ಪ್ರೆಸ್ಟೀಜ್ ಇಷ್ಯೂ ಮಾಡಿಕೊಂಡು ಈ ಹಿನ್ನೆಲೆಯಲ್ಲಿ ಮಾಡಿದ್ದೇವೆಂದು ಹೇಳಿದರೆ ಅದು ಸಮಂಜಸವಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ ಮಾನ್ಯ ಅಧ್ಯಕ್ಷರೇ ಸೀಲಿಂಗನಲ್ಲಿ ಸುಮಾರು 1,40,907 ಡಿಕ್ಲರೇಷನ್ ಕಾನೂನು ಪ್ರಕಾರ ತೀರ್ಮಾನ ಮಾಡಿದ್ದಾರೆ. ಇದರಲ್ಲಿ 1,04,713 ಎಕರೆ ಜಮೀನನ್ನು ಬಡವರಿಗೆ ಹಂಚಿದ್ದೇವೆ. ಸುಮಾರು 56 ಸಾವಿರ ಎಕರೆ ಹಿಂದಿನ ಸರ್ಕಾರವೇ ಹಂಚಿತ್ತು. ಈಗ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಎಕರೆ ಜಮೀನನ್ನು ಬಡವರಿಗೆ ಹಂಚಿದ್ದೀರಿ? ಅದೇ ರೀತಿಯಲ್ಲಿ ಇತರರಿಗೆ ಸುಮಾರು 45,795 ಎಕರೆಗಳಷ್ಟು ಜಮೀನನ್ನು ಹಂಚಿದ್ದೇವೆ. ಉಳಿದಂಥ ವೀಕರ್ ಸೆಕ್ಷನ್‌ನಲ್ಲಿ ಬಡವರು ಯಾರು ಇದ್ದಾರೆ, ದೀನದಲಿತರು ಯಾರು ಇದ್ದಾರೆ ಅವರಿಗೆ ಎಷ್ಟು ಎಕರೆ ಜಮೀನನ್ನು ಹಂಚಿದ್ದೀರಿ. ಎಷ್ಟು ಸರ್‌ಪ್ಲಸ್ ಲ್ಯಾಂಡನ್ನು ಹಂಚಿದ್ದೀರಿ ಎಂದು ಕೇಳಬೇಕಾಗಿದೆ. 2,96,044 acres have been determined as surplus lan1 out of which 1,48,341 acres have been taken possession of. About one la-h four thousand acres have been distributed. Still 48,000 acres have to be distributed. 1,48,000 ಎಕರೆ ಜಮೀನನ್ನು ಹಂಚಲಿಕ್ಕೆ ಟೈಮ್‌ಬಾಂಡ್ ಪ್ರೋಗ್ರಾಮ್ ಮಾಡಬೇಕು. ಹಿಂದಿನ ಟ್ರಿಬ್ಯುನಲ್‌ಗಳು ತಪ್ಪು ಮಾಡಿರಬಹುದು. ಅದು ಮಾಡಿದ್ದೆಲ್ಲ ಸರಿ ಎಂದು ಹೇಳುತ್ತಿಲ್ಲ. ಟೈಮ್ ಬಾಂಡ್ ಪ್ರೋಗ್ರಾಮ್ ಇಟ್ಟುಕೊಂಡು 304 ಟ್ರಿಬ್ಯುನಲ್‌ಗಳನ್ನು ಮಾಡಿ ಗೇಣಿದಾರರಿಗೆ ನ್ಯಾಯವನ್ನು ಕೊಡತಕ್ಕಂಥ ಕೆಲಸವನ್ನು ಹಿಂದಿನ ಸರ್ಕಾರ ಮಾಡಿತ್ತು. ಈ ಹೆಚ್ಚುವರಿ ಜಮೀನನ್ನು ಹಂಚಲು ಟ್ರಿಬುನಲ್ ರಚನೆ ಮಾಡಲು ತಮಗೆ ಇನ್ನು ಎಷ್ಟು ದಿವಸಗಳು ಬೇಕು ? ಇದನ್ನು ಕೇಳಿದರೆ ತಿರುಗಿ ಮುರುಗಿ ನಿಮ್ಮ ಸರ್ಕಾರ ಏನು ಮಾಡಿದ್ದು ಎಂದು ಕೇಳುತ್ತಾರೆ ? ಈಗ ಸರ್ಕಾರದ ವಶದಲ್ಲಿ 40 ಸಾವಿರ ಎಕರೆ ಜಮೀನಿದೆ. ಇದನ್ನು ತಾವು ಇಲ್ಲಿಯವರೆಗೆ ಏತಕ್ಕೆ ಹಂಚಿಕೆ ಮಾಡಲಿಲ್ಲ ?

ಇನ್ನೊಂದು ಮುಖ್ಯವಾದ ವಿಚಾರವೆಂದರೆ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ನೇಗಿಲಭಾಗ್ಯ ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಯಿತು. ಯಾರು ಬಡಗೇಣಿದಾರರಿದ್ದಾರೆ, ಯಾರಿಗೆ ಸರ್ಕಾರದ ಜಮೀನು ಗ್ರ್ಯಾಂಟ್ ಆಗಿದೆ, ಅಂತಹವರಿಗೆ ಈ ಒಂದು ಯೋಜನೆ ಕೆಳಗೆ ಸಾವಿರ ಅಥವಾ ಎರಡು ಸಾವಿರ ರೂಪಾಯಿಗಳ ಸಹಾಯ ಮಾಡಬೇಕೆಂಬ ಗುರಿ ಇತ್ತು. ಆದರೆ ಈ ಸರ್ಕಾರ ಇಂತಹವರಿಗೆ ಯಾವ ರೀತಿಯಿಂದಲೂ ಸಹಾಯ ಮಾಡುತ್ತಿಲ್ಲ. ಈ ಯೋಜನೆ ಮೊದಲು ಎಲ್ಲಿತ್ತೋ ಅಲ್ಲಿಯೇ ನಿಂತಿದೆ.

ಇನ್ನು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಹಂಚಿದಂಥ ಭೂಮಿಯ ವಿವರಗಳನ್ನು ಸರ್ಕಾರದವರೇ ಕೊಟ್ಟ ಅಂಕಿ ಅಂಶಗಳ ಪ್ರಕಾರ ಹೇಳುತ್ತೇನೆ. 1982-83ನೇ ಸಾಲಿನಲ್ಲಿ ಸುಮಾರು 46,830 ಎಕರೆ ಹಾಗೂ 17 ಗುಂಟೆ ಜಮೀನನ್ನು ಸುಮಾರು 18,331 ಜನ ಭೂರಹಿತರಿಗೆ ಕೊಟ್ಟಿದ್ದಾರೆ. ಈ 48 ಸಾವಿರ ಎಕರೆಯಲ್ಲಿ 32 ಸಾವಿರ ಎಕರೆಯನ್ನು ಹರಿಜನ ಮತ್ತು ಗಿರಿಜನರಿಗೆ ಕೊಟ್ಟಿದ್ದಾರೆ. ಇನ್ನುಳಿದ ಜಮೀನನ್ನು ಆರ್ಥಿಕವಾಗಿ ಹಿಂದುಳಿದ ಜನರಿಗೆ ಹಂಚಿದ್ದಾರೆ. ಇದನ್ನು ಬಿಟ್ಟು ಸರ್ಕಾರದ

ವಶದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇನ್ನೂ ಇದೆ. ಆದ್ದರಿಂದ ನೀವು ಅಧಿಕಾರಕ್ಕೆ ಬಂದ ಮೇಲೆ ಇಂತಹ ಜಮೀನನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ. ಹರಿಜನ ಮತ್ತು ಗಿರಿಜನ ಹಾಗೂ ಇತರೇ ಹಿಂದುಳಿದ ಎಷ್ಟು ಜನರು ಇದರ ಪ್ರಯೋಜನ ಪಡೆದಿದ್ದಾರೆಂಬುದನ್ನು ತಾವು ಹೇಳಬೇಕಾಗುತ್ತದೆ. ನಮ್ಮ ಕಾಲದಲ್ಲಿ ಒಂದು ವಿಶೇಷವಾದಂಥ ಆಜ್ಞೆಯನ್ನು ಜಾರಿಯಲ್ಲಿ ತಂದಿದ್ದೆವು. ತಾ॥ 27-3-1982ರಲ್ಲಿ ಹರಿಜನ ಮತ್ತು ಗಿರಿಜನರು ಯಾರಾದರು ಒಂದು ವರ್ಷ ಕಾಲ ವ್ಯವಸಾಯ ಮಾಡಿದ್ದರೆ, ಅಂತಹವರಿಗೆ ಅದೇ ಜಮೀನನ್ನ ರೆಗ್ಯುಲರೈಜ್ ಮಾಡುವುದರ ಮೂಲಕ ಸಹಾಯ ಮಾಡಬೇಕೆಂದು ಈ ಆಜ್ಞೆಯನ್ನು ಹೊರಡಿಸಲಾಯಿತು. ಇದರ ಪ್ರಕಾರ ಒಂದು ವರ್ಷದಲ್ಲಿ ಸುಮಾರು 41,202 ಜನರಿಗೆ 48,280 ಎಕರೆಗಳಷ್ಟು ಜಮೀನನ್ನು ರೆಗ್ಯುಲರೈಜ್ ಮಾಡಲಾಯಿತು. ಇದರ ಜೊತೆಗೆ ನಮ್ಮ ಕಾಲದಲ್ಲಿ 1,04,000 ಎಕರೆಗಳಷ್ಟು ಜಮೀನನ್ನು ಸರ್‌ಪ್ಲಸ್ ಸೀಲಿಂಗ್‌ನಲ್ಲಿ ಕೊಟ್ಟಿದ್ದೇವೆ. 32,707 ಎಕರೆಗಳಷ್ಟು ಜಮೀನನ್ನು ಗ್ರಾಂಟ್ ಮಾಡಿದ್ದೇವೆ. ಹೀಗೆ ನಮ್ಮ ಕಾಲದಲ್ಲಿ ಲಕ್ಷಾಂತರ ಎಕರೆಗಳಷ್ಟು ಜಮೀನನ್ನು ಕೇವಲ ಒಂದೇ ವರ್ಷದಲ್ಲಿ ಹಂಚಿದ್ದೇವೆ. ಈ ಅಂಕಿಅಂಶಗಳನ್ನು ತಾವೇ ನಮಗೆ ಒದಗಿಸಿದ್ದೀರಿ. ಇದೇ ರೀತಿಯಲ್ಲಿ ತಾವು ಅಧಿಕಾರಕ್ಕೆ ಬಂದಮೇಲೆ ಮತ್ತು ಈ ಖಾತೆಯನ್ನು ತಾವು ವಹಿಸಿಕೊಂಡಮೇಲೆ ಈ ಜನಾಂಗದವರಿಗೆ ಎಷ್ಟರಮಟ್ಟಿಗೆ ಸಹಾಯ ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ತಾವು ಈ ಖಾತೆ ವಹಿಸಿಕೊಂಡ ಮೇಲೆ ಬಡವರ ಬಗ್ಗೆ ಬಹಳ ಕಳಕಳಿ ಇರುವಂತಹ ಮತ್ತು ಬಡವರ ಬಗ್ಗೆ ಕೆಲಸ ಮಾಡುವಂತಹ ಒಬ್ಬ ವ್ಯಕ್ತಿ ಈ ಖಾತೆಗೆ ಬಂದಿದ್ದಾರೆಂದು ನಾನು ಭಾವಿಸಿದ್ದೆ ಮತ್ತು ತಮ್ಮಿಂದ ಬಹಳ ನಿರೀಕ್ಷೆ ಮಾಡಿದ್ದೆ. ಹಿಂದುಳಿದ ಜನಾಂಗದಿಂದ ಬಂದಿರುವ ತಾವು ಬಡವರಿಗೆ ಸಹಾಯ ಮಾಡುತ್ತೀರೆಂಬ ಕಾರಣದಿಂದ ಈ ಖಾತೆಯನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ತಮಗೆ ವಹಿಸಿರಬಹುದೆಂದು ಮತ್ತು ನಮ್ಮ ಕಾಲದಲ್ಲಿ ಜಾರಿಗೆ ತಂದಂಥ ಪ್ರಗತಿಪರವಾದಂಥ ಕಾನೂನುಗಳನ್ನು ತಾವು ಮುಂದುವರೆಸಿಕೊಂಡು ಹೋಗುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಜನವರಿ ತಿಂಗಳಿನಿಂದ ಇಲ್ಲಿಯವರೆಗೆ ತಾವು ಒಂದು ಇಂಚ್ ಭೂಮಿಯನ್ನು ಸಹ ಹಂಚಿಕೆ ಮಾಡಿಲ್ಲ. ಇದಕ್ಕೆ ಕಾರಣವೆಂದರೆ ತಾವು ಇಲ್ಲಿಯವರೆಗೆ ಲ್ಯಾಂಡ್‌ಗ್ರಾಂಟ್ ಕಮಿಟಿಗಳನ್ನಾಗಲೀ ಲ್ಯಾಂಟ್-ಟ್ರಿಬ್ಯುನಲ್‌ಗಳನ್ನಾಗಲೀ ರಚನೆ ಮಾಡಿಲ್ಲ. ಇದರಿಂದ ಯಾವುದು ಎಲ್ಲಿತ್ತೋ ಅಲ್ಲಿಯೇ ಇದೆ.

ಇನ್ನು ಮೂರು ವರ್ಷಗಳ ಕಾಲ ಸತತವಾಗಿ ಯಾರು ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ, ಅಂತಹವರಿಗೆ ಆ ಜಮೀನನ್ನು ಖಾಯಂ ಮಾಡುವ ಬಗ್ಗೆ 1977ರಲ್ಲಿ ಒಂದು ಆರ್ಡರನ್ನು ಸರ್ಕಾರದವರು ಹೊರಡಿಸಿದ್ದರು. ಈ ಸಂದರ್ಭದಲ್ಲಿ ಕೆಲವರು ಪಹಣಿಯನ್ನು ತಪ್ಪಾಗಿ ಎಂಟ್ರಿ ಮಾಡಿಸಿಕೊಂಡು ಅಂದರೆ 3 ವರ್ಷಗಳಿಂದ ವ್ಯವಸಾಯ ಮಾಡುತ್ತಿರುವುದಾಗಿ ಬರೆಸಿಕೊಂಡು ಜಮೀನನ್ನು ಖಾಯಂ ಮಾಡಿಸಿಕೊಂಡರು, ಇದರಿಂದ ಬೇರೆಯವರಿಗೆ ತೊಂದರೆಯಾಯಿತು, ಅತಿ ಬಡವರಾದಂಥವರಿಗೆ ಕಡಿಮೆ ಭೂಮಿ ಸಿಕ್ಕಿತು, ಇಂತಹ ಸುಮಾರು 17,591 ಎಕರೆ ಜಮೀನಿನ ಪೈಕಿ ಹರಿಜನ ಮತ್ತು ಗಿರಿಜನರಿಗೆ ಹಾಗೂ ಇತರೇ ಅಲ್ಪಸಂಖ್ಯಾತರಿಗೆ 8,587 ಎಕರೆಗಳಷ್ಟು ಜಮೀನು ಮಾತ್ರ ಸಿಕ್ಕಿತು. ಅಂದರೆ 50 ಪರ್ಸೆಂಟಿಗಿಂತ ಕಡಿಮೆ ಸಿಕ್ಕಿತು. ಹರಿಜನ ಮತ್ತು ಗಿರಿಜನರಿಗೆ 50 ಪರ್ಸೆಂಟ್ ಜಮೀನನ್ನು ಹಂಚಬೇಕೆಂದು ನಿಯಮವಿದೆ. ಈ ಕಾರಣದಿಂದ 1977ರ ಆರ್ಡರ್‌ನಲ್ಲಿ ಸ್ವಲ್ಪ ಅನಾಹುತವಾಗಿದೆ ಎಂದು ತಿಳಿದುಕೊಂಡು 1981ರಲ್ಲಿ ಹೊಸ ಆರ್ಡರನ್ನು ಹೊರಡಿಸಲಾಯಿತು. ಇದರ ಪ್ರಕಾರ ಬಹಳ ಬಡವರಾದಂಥವರು ಒಂದು ವರ್ಷದಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದರೆ ಅಂತಹವರ ಹೆಸರುಗಳು ಪಹಣಿಯಲ್ಲಿ ಇಲ್ಲದಿದ್ದರೂ ಸಹ ಅವರವರ ಹೆಸರಿಗೆ ಖಾಯಂ ಮಾಡುವುದು. ಒಳ್ಳೆಯದು, ಬೇರೆಯವರ ಹೆದರಿಕೆಗೆ ಮಣಿಯದೆ ತಾವು ಈ 1981ರ ಆರ್ಡರನ್ನು ಜಾರಿಯಲ್ಲಿ ತರಬೇಕು ಮತ್ತು ಇಂತಹ ಜನರಿಗೆ ಹೆಚ್ಚಿನ ರೀತಿಯಲ್ಲಿ ಈ ಜಮೀನನ್ನು ಹಂಚಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿಯವರೆಗೆ ಇಂತಹ ಜನರಿಗೆ ತಾವೇನಾದರೂ ಸಹಾಯ ಮಾಡಿದ್ದರೆ ಅದರ ವಿವರಗಳನ್ನು ತಾವು ಕೊಡಬೇಕು.

ಇನ್ನು ನಾನು ಕಂದಾಯ ಮಂತ್ರಿಯಾಗಿದ್ದಾಗ 5 ಜಿಲ್ಲೆಗಳಲ್ಲಿ .ಡಿಸ್ಟ್ರಿಕ್ಟ್ ಆಫೀಸ್ ಕಾಂಪ್ಲೆಕ್ಸ್ ನಿರ್ಮಾಣ ಮಾಡಲು ಹಣ ಮಂಜೂರು ಮಾಡಲಾಯಿತು. ಇದನ್ನು ಬಡ್ಜೆಟ್‌ನಲ್ಲಿ ಕೂಡ ಸೇರಿಸಲಾಯಿತು. ಬಡ್ಜೆಟ್‌ನಲ್ಲಿ ಗುಲ್ಬರ್ಗ ಜಿಲ್ಲೆಗೆ 40 ಲಕ್ಷ ರೂಪಾಯಿಗಳಷ್ಟು ಪ್ರಾವಿಜನ್ ಇದೆ. ಬೆಂಗಳೂರು, ಮಂಗಳೂರು, ಶಿವಮೊಗ್ಗ, ತುಮಕೂರು ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಹಂತಹಂತವಾಗಿ ಈ ಕೆಲಸ ತೆಗೆದುಕೊಳ್ಳಬೇಕೆಂದು ಪ್ಲಾನ್ ಅಂಡ್ ಎಸ್ಟಿಮೇಟ್‌ಗಳನ್ನು ತಯಾರಿಸಿ ಒಂದೊಂದು ಜಿಲ್ಲೆಗೆ 40-50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆವು. ಆದರೆ ಮಾನ್ಯ ದೇವೇಗೌಡರು ಯಾವ ಆಫೀಸ್ ಕಟ್ಟಡಗಳನ್ನೂ ಕಟ್ಟಿಸುವುದಕ್ಕೆ ಸಾಧ್ಯವಿಲ್ಲ, ಇದೆಲ್ಲಾ ಅನ್-ಪ್ರೊಡಕ್ಟೀವ್, ಈ ಎಲ್ಲ ಹಣವನ್ನು ಪ್ರೊಡಕ್ಟೀವ್ ವರ್ಕ್‌ಗೆ ಡೈವರ್ಟ್ ಮಾಡುತ್ತೇವೆಂದು ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಮೊನ್ನೆ ಹೇಳಿದ್ದಾರೆ. ಆದರೆ ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಈಗ ಪ್ರತಿ ಜಿಲ್ಲೆಗಳಲ್ಲಿಯೂ ಸರ್ಕಾರದ ಅನೇಕ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಕಮರ್ಷಿಯಲ್ ಟ್ಯಾಕ್ಸ್ ಆಫೀಸ್, ಸ್ಪೆಷಲ್ ಡಿ.ಸಿ. ಆಫೀಸ್, ಅಸಿಸ್ಟೆಂಟ್ ಕಮಿಷನರ್ ಆಫೀಸ್, ಸ್ಪೆಷಲ್ ತಹಶೀಲ್‌ದಾರರ ಆಫೀಸ್

ಹೀಗೆ ಅನೇಕ ಆಫೀಸ್‌ಗಳು ಬಾಡಿಗೆ ಮನೆಗಳಲ್ಲಿ ನಡೆಯುತ್ತಿವೆ. ನೀವು ಹಂತ ಹಂತವಾಗಿ 5 ಜಿಲ್ಲೆಗಳಲ್ಲಾದರೂ ಕಟ್ಟಿಸತಕ್ಕಂತಹ ಯೋಜನೆ ಮಾಡಿ. ಕ್ಯಾಬಿನೆಟ್ ಮಂಜೂರಾತಿ ಮಾಡಿಕೊಂಡು ಬಡ್ಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಳ್ಳಿ. ನಾವು ಹೋದ ವರ್ಷ ಮಾಡಿದ್ದನ್ನು ಕಾರಣಾಂತರಗಳಿಂದ ಮುಂದೂಡಲಾಯಿತು. ಈ ವರ್ಷ ಬಡ್ಜೆಟ್ ಪ್ರಾವಿಜನ್ ಇದೆ. ಮಾರ್ಚಿ ಆದಮೇಲೆ 4 ತಿಂಗಳುಗಳಿಂದ ಕೆಲಸ ಪ್ರಾರಂಭಮಾಡಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಡೈರೆಕ್ಷನ್ ಕೊಟ್ಟು ಈ ಕೆಲಸ ಮಾಡಲು ಪ್ರಯತ್ನ ಮಾಡಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನೇನು ಬಿದ್ದುಹೋಗುತ್ತದೆ. ತುಮಕೂರಿನಲ್ಲಿ ಅರ್ಧ ಬಿದ್ದಿದೆ ಉಳಿದ ಅರ್ಧ ಯಾವಾಗ ಬೀಳುತ್ತದೋ ಗೊತ್ತಿಲ್ಲ. ಹಣ ಇದ್ದರೂ ಕೂಡ ಉಪಯೋಗ ಆಗುತ್ತಿಲ್ಲ, ಮಾನ್ಯ ದೇವೇಗೌಡರಿಗೆ ಹೇಳಿ ಅವರ ಇಲಾಖೆಯಪರು ತೆಗೆದುಕೊಳ್ಳುವಂತೆ ಮಾಡಿ. ಮಾನ್ಯ ದೇವೇಗೌಡರು ಆಫೀಸ್ ಕಾಂಪ್ಲೆಕ್ಸ್ ನಿಲ್ಲಿಸಬೇಕು ಎನ್ನುವುದನ್ನು ಯಾವ ಬ್ಯಾಕ್‌ಗ್ರೌಂಡ್‌ನಲ್ಲಿ ಹೇಳಿದ್ದಾರೆ ಎನ್ನುವುದನ್ನು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಲೋಕೋಪಯೋಗಿ ಸಚಿವರು ಅದಕ್ಕೆ ವಿರುದ್ಧವಾಗಿ ಹೇಳಿಲ್ಲ, ಬೇರೆ ಅರ್ಥದಲ್ಲಿ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ದೇವೇಗೌಡರು ಒಂದು ಸಮರ್ಥನೆ ಮಾಡಿಕೊಳ್ಳಲಿ. ಬಡ್ಜೆಟ್‌ನಲ್ಲಿ ಹಣ ಇದೆ ಕೆಲಸ ಪ್ರಾರಂಭ ಮಾಡಿದರೆ ತಪ್ಪೇನು ಆಗುತ್ತದೆ ? 5 ಸಾವಿರ ವಿಲೇಜ್ ಅಕೌಂಟೆಂಟ್ ಕ್ವಾಟರ್ಸ್ ಕಟ್ಟಬೇಕು ಎನ್ನುವ ಯೋಜನೆ ಇತ್ತು. ವಿಲೇಜ್ ಅಕೌಂಟೆಂಟ್ ಕ್ವಾರ್ಟಸ್ ಕಟ್ಟಲಿಕ್ಕೆ ಎನ್. ಆರ್. ಇ. ಪಿ. ಸ್ಕೀಮ್‌ನಿಂದ ಹಣ ಬಂತು, ಹುಡ್ಕೋ ಸ್ಕೀಮ್‌ನಿಂದ ಹಣ ಬಂತು ಕೆಲವಕ್ಕೆ ಬರಲಿಲ್ಲ. 5 ಸಾವಿರ ಮನೆಗಳನ್ನು ಕಟ್ಟಿದರೆ ಅವರ ಸಮಸ್ಯೆ ಬಗೆಹರಿಯುವುದಿಲ್ಲ. ಸಾವಿರಾರು ಮನೆಗಳನ್ನು ಕಟ್ಟಿಸಬೇಕಾಗುತ್ತದೆ, ಹಾಗೆ ಮಾಡದಿದ್ದರೆ ಗ್ರಾಮಲೆಕ್ಕಿಗರು ಹಳ್ಳಿಗಳಲ್ಲಿ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಹಳ್ಳಿಯಲ್ಲಿ ಗ್ರಾಮ ಲೆಕ್ಕಿಗರು ಇರಲಿಕ್ಕೆ ಸಾಧ್ಯವಿಲ್ಲ. ಅವರಿಗೆ ನೌಕರಿ ಸಿಕ್ಕರೂ ಕೂಡ ಅವರಿಗೆ ಹಳ್ಳಿಗಳಲ್ಲಿ ಮನೆ ಸಿಗುವುದಿಲ್ಲ.

(ಮಾನ್ಯ ಉಪಾಧ್ಯಕ್ಷರು ಪೀಠಕ್ಕೆ ಬಂದರು)

ಹಳ್ಳಿಗಳಲ್ಲಿ ಮನೆ ಕೊಡಬೇಕಾದರೆ ಮೊದಲು ಯಾವ ಜಾತಿ ಎಂದು ಕೇಳುತ್ತಾರೆ. ಜಾತಿ ಕೇಳಿಕೊಂಡು ಆಮೇಲೆ ಮನೆ ಕೊಡುತ್ತಾರೆ. ಅದರ ಕಡೆಗೆ ಮಂತ್ರಿಗಳು ಗಮನ ಕೊಡಬೇಕು. ಇವತ್ತು ಹಳ್ಳಿಗಳಲ್ಲಿ ಯಾವ ಗ್ರಾಮಲೆಕ್ಕಿಗರು ಇರುವುದಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಜಾತಿ ಸಮಸ್ಯೆಯನ್ನು ಹುಟ್ಟಿಸಿದವರೇ ನೀವು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸ್ವಾತಂತ್ರ್ಯ ಸಿಕ್ಕಿದ ಮೇಲೆ ಇಷ್ಟಾದರೂ ಬಂದಿದೆ, ಎಷ್ಟರ ಮಟ್ಟಿಗೆ ಆಸಕ್ತಿ ಇದೆ ಎನ್ನುವುದು ನಮಗೆ ಗೊತ್ತಿದೆ. ಇವತ್ತು 5 ಸಾವಿರ ಮನೆಗಳು ಸಾಕಾಗುವುದಿಲ್ಲ. ಎಲ್ಲಾ ಯೋಜನೆಗಳಿಂದ ಹಣ ತೆಗೆದುಕೊಂಡು ಕನಿಷ್ಟಪಕ್ಷ 10 ಸಾವಿರ ಮನೆಗಳನ್ನು ಹಂತ ಹಂತವಾಗಿ ಕಟ್ಟತಕ್ಕಂತಹ ವ್ಯವಸ್ಥೆಯಾಗಬೇಕು. ನೀವು ಗ್ರಾಮಲೆಕ್ಕಿಗರಿಗೆ ಮನೆಗಳನ್ನು ಕಟ್ಟದಿದ್ದರೆ ಸಮಸ್ಯೆ ಬಗೆಹರಿಯುವುದಿಲ್ಲ ತೊಂದರೆ ಕೂಡ ಆಗುತ್ತದೆ.

ಇನ್ನು ಫ್ಲಡ್ ಮತ್ತು ಸ್ಕೇರ್‌ಸಿಟಿ ಬಗ್ಗೆ ಒಂದು ಯೋಜನೆ ತಯಾರು ಮಾಡಬೇಕು ಎನ್ನುವುದು ಸರ್ಕಾರದ ಗಮನದಲ್ಲಿತ್ತು. ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಯಾವ ರೀತಿಯ ಯೋಜನೆ ಹಾಕಿಕೊಂಡಿದ್ದಾರೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಾರೆ ಏನು ಕಾನೂನು ಮಾಡಿದ್ದಾರೆ. ಅದೇ ಪ್ರಕಾರ ನಮ್ಮಲ್ಲೂ ಮಾಡಬೇಕೆಂದು ಲಾ ಡಿಪಾರ್ಟ್‌ಮೆಂಟ್‌ನವರಿಗೆ ಹೇಳಲಾಗಿತ್ತು. ಅದು ಏನಾಯಿತೊ ಗೊತ್ತಾಗಲಿಲ್ಲ, ಅಲ್ಲಿಂದ ವರದಿ ತರಿಸಿಕೊಂಡು ಬರಗಾಲ ಮತ್ತು ನೆರೆಹಾವಳಿ ಬಂದಾಗ ಯಾವರೀತಿ ಮಾಡಬೇಕೆನ್ನುವ ಒಂದು ಕಾನೂನು ಮಾಡಿ ಆ ಮುಖಾಂತರ ರಿಲೀಫ್ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮಾತು ಮಾತಿಗೂ ನಿಮ್ಮ ಕಡೆಯವರು ನಿಮ್ಮ ಸರ್ಕಾರ ಏನು ಮಾಡಿತ್ತು ; ಎಂದು ಪದೇ ಪದೇ ಹೇಳುತ್ತಾರೆ. ಆ ರೀತಿ ಹೇಳುವುದನ್ನು ಬಿಟ್ಟು ಕೆಲಸ ಮಾಡಿ ತೋರಿಸಿ. ಅನೇಕ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್‌ಗಳು ಎಕ್ಸಿಕ್ಯುಟಿವ್ ಪೋಸ್ಟ್‌ಗಳಲ್ಲಿರತಕ್ಕವರು ಅವರಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ದುರ್ಬಲವರ್ಗದವರಿಗೆ ಅನುಕೂಲವಾಗತಕ್ಕತಂಹ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ತಾಲ್ಲೂಕುಮಟ್ಟದಲ್ಲಿ ಮತ್ತು ವಿಭಾಗಮಟ್ಟಗಳಲ್ಲಿ ಅವರುಗಳನ್ನು ಪೋಸ್ಟಿಂಗ್ ಮಾಡಿದ್ದೆವು. ನಾನು ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ ನೀವು ಅಧಿಕಾರ ವಹಿಸಿಕೊಂಡಮೇಲೆ ಬಡಜನರ ಮತ್ತು ದುರ್ಬಲವರ್ಗದವರ ರಕ್ಷಣೆಗೆ ಇದ್ದಂತಹ ಅಧಿಕಾರಿಗಳನ್ನು ತೆಗೆದುಹಾಕಿ ನಿಮಗೆ ಬೇಕಾದವರನ್ನು ಪೋಸ್ಟಿಂಗ್ ಮಾಡಿದ್ದೀರಿ. ಬಡವರಿಗಾಗಿ ಹಾಕಿದಂತಹ ಎಲ್ಲಾ ಕಾರ್ಯಕ್ರಮಗಳನ್ನು ವಿಫಲಗೊಳಿಸುತ್ತಿದ್ದೀರಿ, ನಾನು ಆ ಪಟ್ಟಿಯನ್ನು ಇಟ್ಟಿದ್ದೇನೆ. It is an administrative order. I want to see how many people belonging to weaker section you have kept in very important posts, and how many people you have transferred. ಎಷ್ಟು ಜನ ವೀಕರ್‌ಸಕ್ಷನ್ ಅಧಿಕಾರಿಗಳನ್ನು ಎಕ್ಸಿಕ್ಯೂಟೀವ್ ಪೋಸ್ಟ್‌ಗಳಿಗೆ ಹಾಕಿದ್ದೀರಿ ? ಹಾಗೆ ಅವರನ್ನು ತೆಗೆದುಕೊಳ್ಳದಿದ್ದರೆ ಕಾರಣವೇನು ? ಹಾಕಿದ್ದವರನ್ನು ಯಾವ

ಕಾರಣದಿಂದ ತೆಗೆದಿದ್ದೀರಿ ? ಯಾರೋ ಎಂ.ಎಲ್.ಎ. ಗಳು, ಬೇಕಾದವರು ಹೇಳಿದರು ಎಂದು ವರ್ಗಾವಣೆ ಮಾಡುವುದು ಅಲ್ಲಾ. ಅಡ್ಮಿನಿಸ್ಟ್ರೆಷನ್ ವಿಷಯದಲ್ಲಿ ಬಡವರಿಗೆ ದುರ್ಬಲವರ್ಗದವರಿಗೆ ಅನುಕೂಲ ಮಾಡದಿದ್ದರೆ ತಾವು ಹಾಕಿದಂತಹ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಹೇಗೆ ? ನೀವು ಹಾಕಿರತಕ್ಕ ಕಾರ್ಯಕ್ರಮಗಳು ಬಡವರಿಗೆ ಮುಟ್ಟಬೇಕಾದರೆ ಅವರ ಬಗ್ಗೆ ಆಸಕ್ತಿ ಇರತಕ್ಕ ಅಧಿಕಾರಿಗಳು ಇರುವುದು ಬಹಳ ಮುಖ್ಯ, ಅಧಿಕಾರಕ್ಕೆ ಯಾರೇ ಬರಬಹುದು ಯಾವುದೇ ಸರ್ಕಾರವಿರಬಹುದು. ಆದರೆ ಕಾನೂನುಗಳನ್ನು ಆಚರಣೆ ಮಾಡತಕ್ಕಂತಹ ಅಧಿಕಾರಿಗಳು ಒಳ್ಳೆಯ ಮನಸ್ಸಿನವರು ಇರಬೇಕು. ಅವರು ಯಾರೇ ಆಗಲಿ ಜಿಲ್ಲಾಧಿಕಾರಿಗಳಾಗಲಿ, ಅಸಿಸ್ಟೆಂಟ್ ಕಮಿಷನರ್ ಆಗಲಿ, ತಹಶೀಲ್ದಾರ್ ಆಗಲಿ. ಯಾರೇ ಆಗಲಿ ಸಂಬಂಧಪಟ್ಟ ಅಧಿಕಾರಿಗಳು ಬಡವರ ಬಗ್ಗೆ ಎಷ್ಟರಮಟ್ಟಿಗೆ ಕೆಲಸ ಮಾಡು ತ್ತಾರೆ ಎನ್ನುವುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ನಿಮಗೆ ಬೇಕಾದವರನ್ನು ಹಾಕಿ ಅವರು ಯಾವ ಮಟ್ಟದವರು ಎನ್ನುವುದನ್ನು ತಿಳಿದುಕೊಂಡು ಹಾಕಿ. ಇವತ್ತು ಏನು ಮಾಡಿದ್ದೀರಿ ಅಂದರೆ ತಮ್ಮ ಮನಸ್ಸು ಬಂದಹಾಗೆ ವೆಸ್ಟೆಂಡ್ ಇಂಟರೆಸ್ಟ್ ಇರತಕ್ಕವರನ್ನು ಹಾಕಿದ್ದೀರಿ. ಇವತ್ತು ಸರ್ಟಿಫಿಕೇಟ್ ಕೊಡುವುದಾಗಲಿ, ಲ್ಯಾಂಡ್‌ಗ್ರಾಂಟ್ ಮಾಡುವುದಾಗಲಿ, ವೃದ್ಧಾಪ್ಯವೇತನ ಕೊಡುವುದಾಗಲಿ, 20 ಅಂಶಗಳ ಕಾರ್ಯಕ್ರಮದಲ್ಲಿ ಅನೇಕ ಯೋಜನೆಗಳು ಬರುತ್ತವೆ. ಜೊತೆಗೆ ತಾವು 'ಅಂತ್ಯೋದಯ' ಯೋಜನೆಯನ್ನು ಜಾರಿಗೆ ತರುವುದರಲ್ಲಾಗಲಿ ಎಂತಹ ಅಧಿಕಾರಿಗಳನ್ನು ಹಾಕಬೇಕು ಎಂಬುದನ್ನು ಗಮನದಲ್ಲಿಟ್ಟು ಮಾಡಬೇಕು. ಇಲ್ಲದಿದ್ದರೆ ಖಂಡಿತವಾಗಿಯೂ ಅನ್ಯಾಯವಾಗುತ್ತದೆ. ನೀವು ಎಷ್ಟೇ ಹೇಳಿಕೊಂಡರು ಅದರ ಫಲ ಬಡವರಿಗೆ ಮುಟ್ಟುವುದಿಲ್ಲ, ವರ್ಗಾವಣೆಯಲ್ಲೂ ಕೂಡ ಕೈಹಾಕಿ ಅನೇಕ ದುರ್ಬಲವರ್ಗದವರಿಗೆ ತೊಂದರೆ ಮಾಡಿದ್ದೀರಿ. ಮಾನ್ಯ ಪಾಟೀಲರು ಕೂಡ ಬಡವರ ಬಗ್ಗೆ ಅನುಕಂಪವುಳ್ಳವರು. ಅವರು ಹಿಂದೆ ಹಿಂದುಳಿದವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದವರು. ಅವರ ಕೈಯಲ್ಲಿ ಈ ಇಲಾಖೆಗಳು ಇದ್ದವು.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಖರ್ಗೆಯಂತಹವರು ಹೇಳಿದರೆ ಕೆಲವೊಂದು ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—145 ಡಿವಿಜನ್‌ಗಳಲ್ಲಿಎಷ್ಟು ಜನ ವೀಕರ್ ಸೆಕ್ಷನ್ ಅಸಿಸ್ಟೆಂಟ್ ಕಮಿಷನರ್‌ಗಳನ್ನು ಹಾಕಿದ್ದೀರಿ.

ಶ್ರೀ ಎಂ. ಆರ್. ಲಕ್ಷ್ಮಯ್ಯ.—ಈ ಪ್ರಶ್ನೆ ಇಲ್ಲಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದು ಅಡ್ಮಿನಿಸ್ಟ್ರೇಷನ್ ಪ್ರಶ್ನೆ. ಇದುವರೆಗೂ ನೀವು ಎಷ್ಟು ಜನ ವೀಕರ್ ಸೆಕ್ಷನ್‌ರವರನ್ನು ನೋಟಿಫೈ ಮಾಡಿದ್ದೀರಿ. ತಾವು ಯಾವ ರೀತಿಯಲ್ಲಿ ಈ ಹಿಂದುಳಿದ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುತ್ತಿದ್ದೀರಿ ಎನ್ನುವುದನ್ನು ನಾನು ಕೇಳುತ್ತಿದ್ದೇನೆ. ತಾವು ಸುಮ್ಮನೆ ಮಾತಿನಲ್ಲಿ ಹೇಳಿದರೆ ಇದರಿಂದ ಆ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ. ಈ ದೇಶದಲ್ಲಿರತಕ್ಕಂಥ ಶ್ರೀ ಸಾಮಾನ್ಯ ಜನರ ಬಗ್ಗೆ ತಮ್ಮ ಚಿಂತನೆಯನ್ನು ಹರಿಸಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

4 P.M.

ಇನ್ನು ಬರಗಾಲ ಪೀಡಿತ ಪ್ರದೇಶಗಳಿಗೆ ಸರ್ಕಾರದವರು ಸುಮಾರು 67 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೇ 1982–83ನೇ ಸಾಲಿನಲ್ಲಿ ಇವರು ಖರ್ಚು ಮಾಡಿರುವ ಲೆಕ್ಕಾಚಾರವನ್ನು ತೆಗೆದುಕೊಂಡರೆ ಸುಮಾರು ಒಟ್ಟು 47ಕೋಟಿ ರೂಪಾಯಿಗಳು ಬರುತ್ತದೆ. ಮೊನ್ನೆ ಮಾನ್ಯ ಮಂತ್ರಿಗಳು ಸದನದಲ್ಲಿ ಉತ್ತರ ಕೊಡುತ್ತಾ ಹೇಳಿದರು. ಆ ಅಂಕಿಅಂಶಗಳನ್ನು ನೋಡಿದರೆ ಸುಮಾರು 7–8 ಕೋಟಿ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದಾರೆ. ತಾವು ಎನ್.ಆರ್.ಇ.ಪಿ. ಪ್ರೋಗ್ರಾಂನಲ್ಲಿ ಮತ್ತು ಇತರೇ ಕಾಮಗಾರಿ ಕೆಲಸಗಳಲ್ಲಿ ಹಣ ಖರ್ಚು ಮಾಡಿರಬಹುದು. ಆದರೆ ಆ ಎಲ್ಲಾ ಹಣವನ್ನು ಇದರಲ್ಲಿ ಸೇರಿಸುವುದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯಸದಸ್ಯರು ಬೇಗೆ ತಮ್ಮ ಭಾಷಣವನ್ನು ಮುಗಿಸಿದರೆ ಒಳ್ಳೆಯದು. ತಾವು ಈಗಾಗಲೇ ಸುಮಾರು ಅರ್ಧ ಗಂಟೆ ತೆಗೆದುಕೊಂಡಿದ್ದೀರಿ.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ನಾನು ಮುಗಿಸುತ್ತೇನೆ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ತಾವು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ.? ಆ ಬಗ್ಗೆ ತಾವು ಎಲ್ಲಾ ಜಿಲ್ಲೆಗಳ ಜಿಲ್ಲಾವಾರು ಅಂಕಿಅಂಶಗಳನ್ನು ಕೊಟ್ಟರೆ ಆಗ ತಾವು ಎಷ್ಟು ಕೆಲಸ ಮಾಡಿದ್ದೀರಿ ಎನ್ನುವ ಬಗ್ಗೆ ಗೊತ್ತಾಗುತ್ತದೆ; ಮತ್ತೆ ಗುಲ್ಬರ್ಗ ಜಿಲ್ಲೆಯಲ್ಲಿ ತಾವು ತಾಲ್ಲೂಕು ಪ್ರಕಾರ ಅಂಕಿಅಂಶಗಳನ್ನು ಕೊಟ್ಟರೆ ಒಂದು ತಾಲ್ಲೂಕಿನಲ್ಲಿ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ ಎನ್ನುವುದು ಗೊತ್ತಾಗುತ್ತದೆ ಮತ್ತೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ಮಾತ್ರವಲ್ಲದೆ ಅಲ್ಲಿ ಎಷ್ಟು ಜನ ನಿರುದ್ಯೋಗಿಗಳು ಇದ್ದರು ಎನ್ನುವುದೂ ಗೊತ್ತಾಗುತ್ತದೆ. ಆ ಬಗ್ಗೆ ಮಾನ್ಯಮಂತ್ರಿಗಳು

ಉತ್ತರ ಕೊಡುವಾಗ ವಿವರ ಕೊಟ್ಟರೆ ಒಳ್ಳೆಯದು. ಒಂದು ತಾಲ್ಲೂಕಿನಲ್ಲಿ ಸುಮಾರು 10 ಸಾವಿರ ಜನರಿಗೆ ತಾವು ಉದ್ಯೋಗ ಕೊಟ್ಟಿದ್ದರೆ ಸುಮಾರು ನನ್ನ ಜಿಲ್ಲೆಯಲ್ಲಿ ಒಂದು ಲಕ್ಷ ಜನರಿಗೆ ಉದ್ಯೋಗ ಕೊಟ್ಟಂತೆ ಆಗುತ್ತದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ಮುಗಿಸಿದರೆ ಒಳ್ಳೆಯದು. ತಾವು ಈಗಾಗಲೇ ಬೇಕಾದಷ್ಟು ಸಮಯ ತೆಗೆದುಕೊಂಡಿದ್ದೀರಿ. ಇನ್ನು ಬೇರೆ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ.—ತಾವು ಒಂದು ತಾಲ್ಲೂಕಿನಲ್ಲಿ 10,000 ಜನರಿಗೆ ಉದ್ಯೋಗವನ್ನು ಕೊಟ್ಟು ಅವರಿಗೆ ಒಂದು ದಿವಸಕ್ಕೆ 7 ರೂಪಾಯಿಗಳ ಕೂಲಿ ಕೊಟ್ಟರೆ ಸುಮಾರು 7 ಲಕ್ಷ ರೂಪಾಯಿಗಳಾಗುತ್ತದೆ.

ಶ್ರೀ ವಿ. ಎಲ್. ಪಾಟೀಲ್.—7 ರೂಪಾಯಿಗಳ ಕೂಲಿ ಕೊಡುತ್ತಿಲ್ಲ. ಅವರಿಗೆ ನಾವು ಕೊಡುತ್ತಿರುವುದು 6-50 ರೂಪಾಯಿಗಳು.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಪ್ರಕಾರ ತೆಗೆದುಕೊಂಡರೂ ಸುಮಾರು 6,50,000 ರೂಪಾಯಿಗಳು ಒಂದು ತಾಲ್ಲೂಕಿಗೆ ಆಗುತ್ತದೆ. ಒಟ್ಟಿನಲ್ಲಿ ಎಲ್ಲಾ ಜಿಲ್ಲೆಗಳನ್ನು ತೆಗೆದುಕೊಂಡರೂ ಕೂಡ ಒಂದು ತಿಂಗಳಿಗೆ 4 ಕೋಟಿ ರೂಪಾಯಿಗಳು ಆಗುತ್ತದೆ. ಆದರೆ ತಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಆ ಬಗ್ಗೆ ನನಗೆ ತಾವು ಉತ್ತರ ಕೊಡಬೇಕು.

ಮತ್ತೆ ಮಾನ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಒಂದು ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ ಅದು ಏನೆಂದರೆ ನಾವು ಅಧಿಕಾರದಲ್ಲಿದ್ದಾಗ ಒಂದು ಆಜ್ಞೆಯನ್ನು ಹೊರಡಿಸಿದ್ದೆವು. ಅದು ಏನೆಂದರೆ ತೋಟಿ ಮತ್ತು ತಳವಾರರು ಯಾರು ಇರುತ್ತಾರೋ ಅಂಥವರಿಗೆ ತಿಂಗಳಿಗೆ 75 ರೂಪಾಯಿಗಳು ಕೊಡಬೇಕೆಂದು. ಆ ಆಜ್ಞೆ ಜಾರಿಯಲ್ಲಿ ಇದೆ. ಆದರೆ ಕೆಲವು ಕಡೆ ಜಾರಿಯಲ್ಲಿ ಇಲ್ಲ. ಆ ಆಜ್ಞೆ ಜಾರಿಯಲ್ಲಿ ಇಲ್ಲದೆ ಇರುವುದಕ್ಕೆ ಕಾರಣವೇನೆಂದರೆ ತಾವು ಬಜೆಟ್ ಮಂಜೂರಾತಿಯನ್ನು ಕೊಟ್ಟಿಲ್ಲ. ಆದ್ದರಿಂದ ಕೂಡಲೇ ತಾವು ಬಜೆಟ್ ಮಂಜೂರಾತಿ ಕೊಡಬೇಕು. ಮತ್ತು ಅವರಿಗೆ ಹೆಚ್ಚಿನ ಹಣ ಒದಗಿಸಿಕೊಡಬೇಕು. ತಾವು ಒಂದು ಟೈಮ್ ಬಾಂಡ್ ಪ್ರೋಗ್ರಾಮ್ ಹಾಕಿಕೊಂಡು ಎಲ್ಲಾ ತೋಟಿ ಮತ್ತು ತಳವಾರರಿಗೆ ಹಣ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಆ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಡೈರೆಕ್ಷನ್ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ತಾವು ಮಾಡಿದ ಕೆಲಸ ಪ್ರಯೋಜನವಾಗುವುದಿಲ್ಲ. ಚಿಕ್ಕಮಗಳೂರು ಮತ್ತು ಕೊಡಗು ಹಾಗೂ ಹಾಸನ, ಸಕಲೇಶಪುರ ಮುಂತಾದ ಪ್ರದೇಶಗಳಲ್ಲಿ ಈ ವೀಕರ್ ಸೆಕ್ಷನ್ ಜನರು ಇದ್ದಾರೆ. ಅವರಿಗೆ ಒಂದು ಎಕರೆಗೆ 100 ರೂಪಾಯಿಗಳು ಕೊಡಬೇಕೆಂದು ಒಂದು ಆಜ್ಞೆಯನ್ನು ಕೊಟ್ಟಿದ್ದೆವು, ಅದನ್ನು ನಾವು ಜಾರಿಗೊಳಿಸಿದ್ದೆವೆ. ಆ ಆಜ್ಞೆಯನ್ನು ತಾವು ಜಾರಿಗೊಳಿಸಿ ಯಾರಿಗೆ ಡ್ರೈಲ್ಯಾಂಡ್ ಇರುತ್ತದೆಯೋ ಅಂಥವರಿಗೆ 100 ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆ ಮಾಡಿ. ಇಷ್ಟು ಸಲಹೆಗಳನ್ನು ನಾನು ಕೊಟ್ಟಿದ್ದೇನೆ ನನ್ನ ಎಲ್ಲಾ ಸಲಹೆಗಳನ್ನು ಮಾನ್ಯ ಮಂತ್ರಿಗಳು ಗಮನಿಸಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಆರ್.ಎನ್. ನಾಯಕ್ (ಭಟ್ಕಳ್).—ಸನ್ಮಾನ್ಯ ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಇಟ್ಟಿರುವ ಬೇಡಿಕೆಯ ಮೇಲೆ ಮಾತನಾಡುವಾಗ ನಾನು ಎಲ್ಲಾ ವಿಚಾರಗಳ ಬಗ್ಗೆಯೂ ಮಾತನಾಡುವುದಿಲ್ಲ, ಭೂಸುಧಾರಣೆ, ಸಣ್ಣ ಹಿಡುವಳಿ ಮತ್ತು ಅವುಗಳ ಸಂಬಂಧದ ಬಗ್ಗೆ ಮಾತ್ರ ಕೆಲವು ಮಾತುಗಳನ್ನು ಆಡಲಿಕ್ಕೆ ಇಚ್ಛಿಪಡುತ್ತೇನೆ. ನಾನು ಮಾತನಾಡುವಾಗ ನಾನು ಹೊಸ ಸದಸ್ಯನೆಂಬುದನ್ನು ಜನತಾ ಪಕ್ಷದ ಶಾಸಕರು ಅರಿತುಕೊಂಡು ಶಾಂತ ರೀತಿಯಿಂದ ಕುಳಿತು ನನಗೆ ಮಾತನಾಡಲು ಅವಕಾಶ ಕೊಡುತ್ತಾರೆಂದು ಭಾವಿಸಿಕೊಂಡು ನನ್ನ ಮಾತನ್ನು ಪ್ರಾರಂಭಿಸುತ್ತೇನೆ.

ಮುಖ್ಯವಾಗಿ ಭೂಸುಧಾರಣೆ ಬಗ್ಗೆ ಹೇಳುವುದಾದರೆ, ಈ ರೆವಿನ್ಯೂ ಡಿಪಾರ್ಟ್‌ಮೆಂಟಿನ ವಾರ್ಷಿಕ ವರದಿಯನ್ನು ಮಾನ್ಯ ಮಂತ್ರಿಗಳು ನಮ್ಮ ಕೈಗೆ ಕೊಟ್ಟಿದ್ದಾರೆ. ನಾನು ವಿರೋಧಪಕ್ಷದಲ್ಲಿರುವುದರಿಂದ ಈ ವರದಿಯ ವಿರುದ್ಧವಾಗಿ ಮಾತನಾಡುವುದು ಸಹಜ. ಆದರೆ ಹಾಗೆ ನಾನು ಮಾತನಾಡುವಾಗ ಅದನ್ನು ಟೀಕೆಯೆಂದು ತಿಳಿದುಕೊಳ್ಳಬಾರದು. ಮುಖ್ಯವಾಗಿ ಹೇಳುವುದಾದರೆ ನನಗೆ ರೆವಿನ್ಯೂ ಮಿನಿಸ್ಟರ್ ಅವರ ಖಾತೆಯ ಮೇಲೆ ಟೀಕೆ ಮಾಡಲಿಕ್ಕೆ ಹುಡುಕಿದರೂ ಸಹ ಏನೂ ಸಿಕ್ಕುತ್ತಿಲ್ಲ, ಹೇಗೆಂದರೆ ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಕೆಲಸ ಏನಾದರೂ ಆಗಿದ್ದರೆ, ಅದರಲ್ಲಿನ ಲೋಪದೋಷಗಳನ್ನು ಹುಡುಕಿ ಏನಾದರೂ ಟೀಕೆ ಮಾಡಬಹುದು. ಆದರೆ, ಯಾವ ಕೆಲಸವೂ ಈ ಇಲಾಖೆಯಲ್ಲಿ ಆಗಿಲ್ಲ. ನಾವು ಚುನಾವಣೆಯಲ್ಲಿ ಆರಿಸಿ ಬಂದಮೇಲೆ, ಜನತಾಪಕ್ಷದ ಸರ್ಕಾರ ರಚನೆಯಾದ ಮೇಲೆ ಭೂನ್ಯಾಯ ಮಂಡಳಿಯಲ್ಲಿ ಏನು ಕೆಲಸ ಆಗಿದೆಯೆಂಬುದು ನನಗೆ ಗೊತ್ತಿಲ್ಲ. ಆಡಳಿತ ಪಕ್ಷದ ಸದಸ್ಯರಿಗೆ ಇದೇನಾದರೂ ಗೊತ್ತಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ, ಕೆಲವು

ಭೂನ್ಯಾಯ ಮಂಡಳಿಗಳನ್ನು ರಚಿಸಿದ್ದಾರೆಂದೂ, ಅದರಲ್ಲಿ ಕೆಲವೊಂದು ಹೆಸರುಗಳು ಇರುವುದಾಗಿ ಕೇಳಿದ್ದೇನೆ. ಹಿಂದಿನ ಸರ್ಕಾರದಲ್ಲಿ ಭೂನ್ಯಾಯ ಮಂಡಳಿಗಳಲ್ಲಿ ಏನು ತಪ್ಪುಗಳು ಆಗಿಹೋಗಿವೆ ಎಂದು ಜನತಾಪಕ್ಷದ ಪ್ರಿಯ ಸದಸ್ಯರು ಹೇಳಿದ್ದಾರೆ. ಇದು ಎಷ್ಟರಮಟ್ಟಿಗೆ ಸಂಪೂರ್ಣ ಸತ್ಯ ಅಥವಾ ಸಂಪೂರ್ಣ ಅಸತ್ಯವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ರಚಿಸಲ್ಪಟ್ಟಿರುವ ಭೂನ್ಯಾಯ ಮಂಡಳಿಗಳಲ್ಲಿ ಕೆಲವು ಸದಸ್ಯರ ಹೆಸರುಗಳನ್ನು ನಾನು ತಿಳಿದುಕೊಂಡಿದ್ದೇನೆ. ಸದಸ್ಯರುಗಳು ಭೂನ್ಯಾಯ ಮಂಡಳಿಗಳಲ್ಲಿ ಇರುವುದನ್ನು ನೋಡಿದರೆ, ರೈತರಿಗೆ ಇನ್ನು ಎಂಥ ಪರಿಸ್ಥಿತಿ ಬಂದೀತು ಎಂದು ಯೋಚಿಸಿದರೆ, ಒಂದು ಚಿಕ್ಕ ಗಾಯವಾದರೆ ಅದನ್ನು ಶುಶ್ರೂಷೆ ಮಾಡಲು ಒಬ್ಬ ಕಟುಕನನ್ನೇ ಹುಡುಕಿ ಹುಡುಕಿ ಕರೆದುಕೊಂಡು ಬಂದು ಶಸ್ತ್ರ ಚಿಕಿತ್ಸೆ ಮಾಡಿದರೆ ಏನು ಸ್ಥಿತಿ ಒದಗಬಹುದೋ, ಅದೇ ಸ್ಥಿತಿ ರಾಜ್ಯದ ಭೂನ್ಯಾಯ ಮಂಡಳಿಗಳಲ್ಲಿ ಈ ಸದಸ್ಯರು ಸೇರಿಕೊಂಡು ಇವುಗಳನ್ನು ನಡೆಸಿದರೆ, ಆಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಭೂಸುಧಾರಣೆ ಬಗ್ಗೆ ಕಳಕಳಿ ಇರತಕ್ಕವರನ್ನು, ವಿದ್ಯಾವಂತ ರೈತರ ಮಕ್ಕಳನ್ನು ಭೂನ್ಯಾಯ ಮಂಡಳಿಗೆ ಸದಸ್ಯರನ್ನಾಗಿ ನೇಮಕ ಮಾಡಬೇಕು. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನೇಮಿಸಲ್ಪಟ್ಟಿರುವ ಭೂನ್ಯಾಯ ಮಂಡಳಿಯ ಸದಸ್ಯರಲ್ಲಿ ಸುಮಾರು ನೂರಕ್ಕೆ ಎಂಬತ್ತರಿಂದ ತೊಂಬತ್ತರಷ್ಟು ಶುದ್ಧ ಭೂಮಾಲೀಕರು ಇದ್ದಾರೆ. ಇದಕ್ಕಾಗಿ ಬಹುಶಃ ನಾವೆಲ್ಲರೂ ವಿರೋಧಿಸಬೇಕಾಗುತ್ತದೆ. ನನ್ನ ಭಾವನೆ ಹೇಗಿತ್ತು ಎಂದರೆ, ನಮ್ಮ ರೆವಿನ್ಯೂ ಮಂತ್ರಿಗಳು ಹಿಂದುಳಿದ ವರ್ಗಕ್ಕೆ ಸೇರಿದವರು, ಭೂಸುಧಾರಣೆಯಲ್ಲಿ ಕಳಕಳಿ ಇರತಕ್ಕಂಥವರು. ರೈತರ ಮಕ್ಕಳು ವಿದ್ಯಾವಂತರು ಇದ್ದರೆ ಶಾಸಕರನ್ನು ಕೇಳಿ ಅವರನ್ನು ನೇಮಿಸಬಹುದು ಎಂದು ನಾನು ತಿಳಿದುಕೊಂಡಿದ್ದೇ. ಆದರೆ, ಅವರು ಯಾವ ಒತ್ತಡಕ್ಕೆ ಒಳಗಾಗಿದ್ದಾರೋ, ಅಥವಾ ಯಾವ ಭಾವನೆಗೆ ಒಳಗಾಗಿದ್ದಾರೋ ಗೊತ್ತಿಲ್ಲ. ಹೀಗೆ ಜಮೀನ್ದಾರರನ್ನು ಈ ಭೂನ್ಯಾಯ ಮಂಡಳಿಗಳಲ್ಲಿ ನೇಮಿಸಿರುವುದರಿಂದ, ರೈತರನ್ನು ಯಾವ ಪರಿಸ್ಥಿತಿಗೆ ತಂದೊಡ್ಡಬಹುದೋ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವಿಚಾರವನ್ನು ತುಂಬಾ ಆಳವಾಗಿ ಯೋಚನೆ ಮಾಡಬೇಕು. ಭೂಸುಧಾರಣೆ ಕಾಯ್ದೆ ಬಡವರ ಕಾನೂನು. ಅತ್ಯಂತ ಅವಶ್ಯಕವಾದ ಕಾನೂನು. ರೆವಿನ್ಯೂ ಮಂತ್ರಿಗಳಿಗೆ ಈ ಕಾಯಿದೆ ಮೇಲೆ ತಮ್ಮ ಹಿಡಿತ ಇದೆ. ಈ ಕಾಯಿದೆಯನ್ನು ಸರಿಯಾಗಿ ಬಳಸಬೇಕಾದರೆ ರೈತ ಮಕ್ಕಳನ್ನು ಭೂನ್ಯಾಯ ಮಂಡಳಿಗೆ ಸದಸ್ಯರನ್ನಾಗಿ ನೇಮಿಸುವ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು, ಎರಡನೆಯದಾಗಿ ಹೇಳುವುದಾದರೆ ಹೇಳುವುದಕ್ಕೆ ಬಹಳ ಇದೆ. ಇನ್ನೊಂದು ಎರಡು ನಿಮಿಷಗಳಲ್ಲಿ ಅಧ್ಯಕ್ಷರು ಗಂಟೆ ಹೊಡೆದರೂ ಹೊಡೆಯಬಹುದು. ಭೂಸುಧಾರಣೆ ಕಾಯ್ದೆ ಬಗ್ಗೆ ಹೇಳುವುದಾದರೆ ತಾಸುಗಟ್ಟಲೆ ಮಾತನಾಡಬಹುದು. ಇಲ್ಲಿ ಕೊಟ್ಟಿರುವ ತಿಳುವಳಿಕೆ ಪ್ರಕಾರ, 48 ಎ ಸೆಕ್ಷನ್ ಪ್ರಕಾರ ಬಂದ ಅರ್ಜಿಗಳಲ್ಲಿ ನಿಖಾಲಿಯಾದದ್ದು, 8, 11, 700 ಮಾತ್ರ. ಈ ಅರ್ಜಿಗಳಲ್ಲಿ 44, 84, 664 ಅರ್ಜಿಗಳು ರೈತರ ಪರವಾಗಿ ಆಗಿವೆ; ಉಳಿದವುಗಳು ತಿರಸ್ಕೃತವಾಗಿವೆ ಎಂದು ಲೆಕ್ಕ ಕೊಟ್ಟಿದ್ದಾರೆ. ಈ ಲೆಕ್ಕವನ್ನು ತೆಗೆದುಕೊಂಡರೆ ಭೂಸುಧಾರಣೆ ಕಾಯಿದೆಯಲ್ಲಿ ಬಹುಶಃ ಹೆಚ್ಚು ಕಡಿಮೆ ನೂರಕ್ಕೆ ಐವತ್ತು ಭಾಗದಷ್ಟು ಮಾತ್ರ ರೈತರಿಗೆ ಜಮೀನು ಸಿಕ್ಕಿದೆ. ಉಳಿದ ರೈತರಿಗೆ ಸ್ವಲ್ಪವಾಗಿ ಜಮೀನು ಸಿಕ್ಕಿರಬಹುದು ಎನ್ನುವ ಭಾವನೆ ಉಂಟಾಗುತ್ತದೆ. ಇದಕ್ಕೆ ಕಾರಣ ಏನು ? ನಾನು ಹಿಂದಿನ ಸರ್ಕಾರವನ್ನು ಸಂಪೂರ್ಣವಾಗಿ ಟೀಕಿಸುವುದಕ್ಕೆ ಹೋಗುವುದಿಲ್ಲ, ಭೂಮಾಲೀಕರು ಯಾವ ಯಾವ ರೀತಿಯಿಂದ, ಎಷ್ಟು ವಿಧವಿಧವಾದ ಹಂತಗಳಲ್ಲಿ ಈ ಕಾನೂನಿನ ಕಕ್ಷೆಯೊಳಗೆ ಸೇರಿಕೊಂಡು ಎಲ್ಲಿ ಅವಕಾಶ ಇದೆಯೋ ಅಲ್ಲಿ ಉಪಯೋಗಿಸಿಕೊಂಡು ಈ ರೀತಿಯಾಗಿ ರೈತರ ಅರ್ಜಿಗಳು ಹೆಚ್ಚಿನ ರೀತಿಯಲ್ಲಿ ತಿರಸ್ಕರಿಸಲಿಕ್ಕೆ ಪ್ರಯತ್ನಿಸಿದ್ದಾರೆ. ನನ್ನ ಅನುಭವದಿಂದ ಹೇಳುವುದಾದರೆ ಇದಕ್ಕೆ ನಾನೊಂದು ಉದಾಹರಣೆಯನ್ನು ಕೊಡಬಲ್ಲೆ. ಲೀಗಲ್ ಏಡ್ ಕಾಯಿದೆಯಲ್ಲಿ ರೈತರಿಗೆ ಕಾನೂನಿನ ನೆರವು ನೀಡಬೇಕು, ರೈತರ ಪರವಾಗಿ ರಿಟ್ ದಾಖಲು ಆಗಬೇಕು ಎಂದು ಇದೆ. ಹಿಂದಿನ ಸರ್ಕಾರದವರು ಇದನ್ನು ಬಹಳ ಒಳ್ಳೆಯ ರೀತಿಯಿಂದ ನಡೆಸಿಕೊಂಡು ಬಂದಿದ್ದರು. ಇಲ್ಲಿಯವರೆಗೆ 1993 ಜನರಿಗೆ ಕಾನೂನಿನ ನೆರವು ಸಿಕ್ಕಿದೆಯೆಂದು ನಮೂದಿಸಿದ್ದಾರೆ. ಆದರೆ, ರೈತರಿಂದ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ 4,84,664. ಅಂದರೆ, ಅವರಿಗೆ ಸಿಕ್ಕಂಥ ಕಾನೂನು ನೆರವು ಮತ್ತು ತಿರಸ್ಕೃತವಾದ ಅರ್ಜಿಗಳ ಸಂಖ್ಯೆಯನ್ನು ಹೊಂದಿಸಿ ನೋಡಿದರೆ ಈ ಲೀಗಲ್ ಏಡ್‌ನ ಕೆಲಸ ಏನೇನೂ ಆಗಿಲ್ಲವೆಂದು ಗೋಚರವಾಗುತ್ತದೆ. ಎನ್ನುವ ವಿಚಾರವನ್ನು ನಾನು ರೆವಿನ್ಯೂ ಮಂತ್ರಿಗಳ ಮುಂದೆ ಇಡುತ್ತಿದ್ದೇನೆ. ರೆವಿನ್ಯೂ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಬಹುದು. ಈ ಲೀಗಲ್ ಏಡ್‌ನಲ್ಲಿ ಹೆಚ್ಚಿನ ಹಣವನ್ನು ಹಾಕಿ, ಹೆಚ್ಚಿನ ಲಕ್ಷ್ಯವನ್ನು ಕೊಟ್ಟು ಹಿಂದುಳಿದ ವರ್ಗಗಳಿಗೆ ಸೇರಿದ ರೈತರ ಮಕ್ಕಳು ವಕೀಲರಾಗಿದ್ದಾರೆ ಅವರನ್ನು ಇದಕ್ಕಾಗಿ ನೇಮಿಸಿಕೊಂಡು ಹೆಚ್ಚಿನ ರೀತಿಯಲ್ಲಿ ರೈತರ ರಿಟ್‌ಗಳು ದಾಖಲು ಆಗುವ ಹಾಗೆ, ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವ ಹಾಗೆ ಒಂದು ವ್ಯವಸ್ಥೆಯನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡುತ್ತಾರೆಂದು ನಾನು ಆಸೆ ಇಟ್ಟುಕೊಂಡಿದ್ದೇನೆ. ಇದು, ನನ್ನ ಸೂಚನೆಯಷ್ಟೆ. ನಾನು ಇದನ್ನು ಟೀಕೆಯಾಗಿ ಹೇಳುತ್ತಿಲ್ಲ. ಈ ರೀತಿಯಾಗಿ ರೈತರಿಗೆ ಸಂಬಂಧಪಟ್ಟ ಹಾಗೆ ಎಷ್ಟೆಷ್ಟೋ ತೊಂದರೆಗಳಿವೆ.

ಜಮೀನ್ದಾರರ ಬಗ್ಗೆ ನನಗೆ ಯಾವ ದ್ವೇಷವೂ ಇಲ್ಲ. ಇವತ್ತು ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ಬೇಗನೆ ಸಿಕ್ಕಿಲ್ಲ. ಇದನ್ನು ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಕೆಲವು ಭೂನ್ಯಾಯ ಮಂಡಲಿಗಳಲ್ಲಿ ಒಂದು ಸಾವಿರದ, ಐದುನೂರು ರೂಪಾಯಿಗಳ ಪರಿಹಾರ ಕೇಳುವುದಕ್ಕೆ ಬಡ ಭೂಮಾಲಿಕರು ಹೋದರೆ ಅವರಿಗೆ ಪರಿಹಾರ ಸಿಕ್ಕಿದ ಯಾವ ದಾಖಲೆಗಳೂ ಇಲ್ಲ. ಇನ್ನೂ ಲಕ್ಷಾಂತರ ರೂಪಾಯಿಗಳ ಪರಿಹಾರ ಭೂ ಮಾಲೀಕರಿಗೆ ಬರಬೇಕಾಗಿದೆ. ದೊಡ್ಡ ದೊಡ್ಡ ಭೂ ಮಾಲೀಕರು ಹೇಗೋ ಮಾಡಿ ತಮಗೆ ಬರಬೇಕಾದಂತಹ ಪರಿಹಾರವನ್ನು ತೆಗೆದುಕೊಂಡಿದ್ದಾರೆ. ಆದರೆ ಬಡ ಭೂಮಾಲೀಕರಿಗೆ ತೊಂದರೆಯಾಗಿದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ತಮ್ಮ ಲಕ್ಷ್ಯ ವಹಿಸಿ, ಸುಧಾರಣೆ ಮಾಡಬೇಕೆಂದು ಕಳಕಳಿಯಿಂದ ಹೇಳುತ್ತೇನೆ. ಮತ್ತೆ ಹೆಚ್ಚುವರಿ ಭೂಮಿ ಹಂಚುವ ವಿಚಾರದಲ್ಲಿ ಈಗಾಗಲೇ ಶ್ರೀಮಾನ್ ಖಾರ್ಗೆಯವರು ಹೇಳಿದರು. ಈ 7 ತಿಂಗಳು ಎಷ್ಟು ಹೆಚ್ಚುವರಿ ಜಮೀನನ್ನು ಯಾರಿಗೆ ಹಂಚಿದ್ದೀರಿ ? ಈ ರೀತಿಯಾದ ವಿಳಂಬ ನೀತಿಯನ್ನು ಏಕೆ ಅನುಸರಿಸುತ್ತಿದ್ದೀರಿ? ಇದನ್ನು ತಪ್ಪಿಸಿ ಎಂಬುದಾಗಿ ಸರ್ಕಾರಕ್ಕೆ ಸಲಹೆ ಕೊಡಬಯಸುತ್ತೇನೆ. ಇನ್ನೂ ಕೆಲವು ಭೂನ್ಯಾಯ ಮಂಡಲಿಗಳ ಆಫೀಸ್‌ಗಳು ಇವೆ. ಆ ಆಫೀಸ್ ಯಾವ ಕೆಲಸ ಮಾಡುತ್ತಿದೆ ಎಂಬುದಾಗಿ ಹೇಳುವುದಕ್ಕೂ ನಾಚಿಕೆಯಾಗುತ್ತದೆ. ಬಹುಶಃ ಶಾಸಕನಾಗಿ ಅಲ್ಲಿಗೆ ಹೋಗಿ ಸರ್ಟಿಫೈಡ್ ಕಾಪಿ ಬೇಕೆಂದು ಒಂದು ಅರ್ಜಿಯನ್ನು ಕೊಟ್ಟರೆ ತಿಂಗಳುಗಟ್ಟಲೆಯಾದರೂ ಕೂಡ ಆ ಸರ್ಟಿಫೈಡ್ ಕಾಪಿ ಸಿಕ್ಕುವುದು ಬಹಳ ತೊಂದರೆಯಾಗಿದೆ. ಆ ರೀತಿಯಾಗಿ ಅಲ್ಲಿರತಕ್ಕಂತಹ ಕಂದಾಯ ಇಲಾಖೆಯ ಅಧಿಕಾರಿಗಳು ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಬಡವರು ಏತಕ್ಕಾಗಿ ಅಲ್ಲಿಗೆ ಹೋಗುತ್ತಾರೆಂದರೆ, ಬ್ಯಾಂಕಿನಿಂದ ಯಾವುದಕಾರೂ ಸಾಲವನ್ನು ತೆಗೆದುಕೊಳ್ಳಬೇಕಾದರೆ ಜಮೀನಿನ ದಾಖಲೆಗಳು ಬೇಕಾಗಿರುತ್ತವೆ. ಅದಕ್ಕಾಗಿ ಅಲ್ಲಿಗೆ ಹೋಗುತ್ತಾನೆ. ಆದ್ದರಿಂದ ಅರ್ಜಿಯನ್ನು ಕೊಟ್ಟ 8 ದಿವಸಗಳಲ್ಲಿ ಸರ್ಟಿಫೈಡ್ ಕಾಪಿಗಳನ್ನು ಅರ್ಜಿದಾರನಿಗೆ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡ ವಂತ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಸುತ್ತೋಲೆಗಳ ಮೂಲಕವಾದರೂ ತಿಳಿಸಿ, ಈ ಒಂದು ವ್ಯವಸ್ಥೆಯನ್ನು ಮಾಡಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

48 (ಎ) ಪ್ರಕಾರ ರೈತರ ವಿರುದ್ಧವಾಗಿರುವಂತಹ ಕೇಸುಗಳನ್ನು ಪತ್ತೆಹಚ್ಚಿ, ಸರ್ಕಾರ ಅದರ ಬಗ್ಗೆ ಸಲಹೆ ಕೊಡಬೇಕು ಎನ್ನುವ ಉದ್ದೇಶದಿಂದ ಈ ಒಂದು ಹೊಸ ಪ್ರಯೋಗವನ್ನು ಹಿಂದೆ ಇದ್ದಂತಹ ಸರ್ಕಾರವೇ ನಡೆಸಿತ್ತು. ಇಲ್ಲಿ ಕೊಟ್ಟಿರುವ ವರದಿ ಪ್ರಕಾರ 30 ಸಾವಿರ ಅಂತ ಕಾಣುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಕೇಸುಗಳು ಉಳಿದಿವೆ. ರೈತರು ಕೊಟ್ಟಂತಹ ಅರ್ಜಿಗಳನ್ನು ರಿಜೆಕ್ಟ್ ಮಾಡುತ್ತಾರೆಯೇ ಹೊರತು ಸರ್ಕಾರಕ್ಕೆ ರೆಕಮಂಡೇಷನ್ ಮಾಡಿ ಕಳುಹಿಸುವಂತಹ ಅಧಿಕಾರಿಗಳು ಇಲ್ಲ. ಇದರಿಂದ ಬಹಳಷ್ಟು ಜನರಿಗೆ ಅನ್ಯಾಯವಾಗಿದೆ. ರೈತರಿಗೆ ಪರಿಹಾರ ಸಿಕ್ಕುವ ಹಾಗೆ ಪ್ರಯತ್ನಗಳನ್ನು ಮಾಡಬೇಕು. ಇದು ಬಹಳ ದಿವಸಗಳ ಬೇಡಿಕೆ. ಇದು ಕೂಡಲೇ ಆಗಬೇಕು. ರೈತರಿಂದ ಬಂದಂತಹ ಒಟ್ಟು ಅರ್ಜಿಗಳು 24,670. ರಿಜೆಕ್ಟ್ ಆದಂತಹ ಕೇಸುಗಳು ಕೇವಲ 530. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಕೊನೆಯದಾಗಿ ರೈತನಿಗೆ ಅನುಕೂಲ ಸಿಗುವಂತೆ ಈ ಸರ್ಕಾರ ಪ್ರಯತ್ನ ಮಾಡಬೇಕು. ಅನುಕೂಲ ಮಾಡುತ್ತೇವೆಂದು ಈಗಾಗಲೇ 7–8 ತಿಂಗಳು ಮುಗಿದು ಹೋಯಿತು. ರೈತರ ಅನುಕೂಲಕ್ಕಾಗಿ, ಈ ಕಡೆ ಕುಳಿತಿರುವಂತಹ ಸದಸ್ಯರು ಕೆಲಸ ಮಾಡಬೇಕು. ಮಂತ್ರಿಗಳೂ ಕೆಲಸ ಮಾಡಬೇಕು. ರೈತ ಈ ರಾಜ್ಯದ ಬೆನ್ನೆಲುಬು. ರೈತನಿಗೆ ಅನ್ಯಾಯವಾಗಬಾರದೆಂದು ಕಳಕಳಿಯಿಂದ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತೇನೆ.

ಫ್ಲಡ್ ಬಗ್ಗೆ ಹೇಳಬೇಕೆಂದಿದ್ದೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನನ್ನ ಅನುಭವದ ಪ್ರಕಾರ 1980ರಲ್ಲಿ ನೆರೆಹಾವಳಿ ಬಂದಿತ್ತು. ಆ ಕಾಲಕ್ಕೆ ಶ್ರೀಮಾನ್ ಬಂಗಾರಪ್ಪನವರು ಕಂದಾಯ ಸಚಿವರಾಗಿದ್ದರು. ಜೋಗ್‌ಫಾಲ್ಸ್‌ನ ಅಣೆಕಟ್ಟೆಯಾದ ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ನೀರು ಜಾಸ್ತಿ ಬಂದಿದ್ದರ ಪ್ರಯುಕ್ತ, ನದಿಯಲ್ಲಿ ಜಾಸ್ತಿ ನೀರನ್ನು ಬಿಟ್ಟಿದ್ದರ ಪರಿಣಾಮವಾಗಿ ನೆರೆಹಾವಳಿ ಬಂತು. ಆಗ ಸಚಿವರಾಗಿದ್ದಂತಹ ಶ್ರೀಮಾನ್ ಬಂಗಾರಪ್ಪನವರು ತಕ್ಷಣ ಸ್ಥಳಕ್ಕೆ ಹೋಗಿ ತಕ್ಕಮಟ್ಟಿಗೆ ಪರಿಹಾರವನ್ನು ಒದಗಿಸಿಕೊಟ್ಟರು. ಕೆಲವು ರಾಜಕೀಯ ಕಾರಣದ ಮೇಲೆ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಮೇಲೆ ಆ ಭಾಗದಲ್ಲಿ ನೆರೆಹಾವಳಿಯಿಂದ ನೊಂದಂತಹವರಿಗೆ ಯಾವುದೇ ರೀತಿಯ ಪರಿಹಾರ ಕ್ರಮ ಆಗಲಿಲ್ಲ. ಇದನ್ನು ಈಗಿನ ನಮ್ಮ ಕಂದಾಯ ಸಚಿವರು ಗಮನಿಸಬೇಕು. ಶರಾವತಿ ಎಡದಂಡೆಯ ಬದಿಯಲ್ಲಿರತಕ್ಕಂತಹ ಹೈಸ್ಕೂಲು ಸಂಪೂರ್ಣವಾಗಿ ನೆರೆಹಾವಳಿಯಿಂದ ತೊಳೆದುಹೋಯಿತು. ಆಗ ಸಚಿವರಾಗಿದ್ದಂತಹ ಶ್ರೀಮಾನ್ ಬಂಗಾರಪ್ಪನವರು ಹೈಸ್ಕೂಲಿನ ಪುನರುಜ್ಜೀವನಕ್ಕಾಗಿ ಸಚಿವ ಸಂಪುಟದಲ್ಲಿ 60 ಸಾವಿರ ರೂಪಾಯಿಗಳನ್ನೂ ಕೂಡ ಮಂಜೂರು ಮಾಡಿಸಿದ್ದರು. ಆದರೆ ಕುಳಿತುಕೊಳ್ಳುವುದಕ್ಕೆ ಅಲ್ಲಿ ಫರ್ನಿಚರ್ ಇಲ್ಲ. ಆ ಹೊಸ್ಕೂಲನ್ನು ಸರ್ಕಾರ ತೆಗೆದುಕೊಂಡು ಮುಂದುವರಿಸಬೇಕು. ಆ ಹೈಸ್ಕೂಲ್‌ನವರು ಸರ್ಕಾರದಿಂದ ಯಾವುದೇ ರೀತಿಯ ಪರಿಹಾರವನ್ನೂ ಕೇಳುತ್ತಿಲ್ಲ. ಆ ಮ್ಯಾನೇಜ್‌ಮೆಂಟ್‌ನವರು ಯಾವುದೇ ರೀತಿಯ ಪರಿಹಾರವನ್ನು ಕೇಳದೆ ಇರುವುದರಿಂದ, ಆ ಹೈಸ್ಕೂಲನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದು ದೊಡ್ಡ ಕೆಲಸವೇನಲ್ಲ. ಆ ಭಾಗದಲ್ಲಿ

ಯಾವುದೇ ರಸ್ತೆ ಸೌಕರ್ಯಗಳು ಇಲ್ಲ. ಬೆಂಗಳೂರು ಹೊನ್ನಾವರ ರಸ್ತೆಗೆ 20 ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಗೆ ಒಂದು ರಸ್ತೆಯನ್ನು ಮಾಡಿ ಸಂಪರ್ಕವನ್ನು ಏರ್ಪಡಿಸಿದರೆ ನೆರೆ ಹಾವಳಿ ಬಂದಾಗ ಸುಲಭವಾಗಿ ಪರಿಹಾರವನ್ನು ಪಡೆದುಕೊಳ್ಳಬಹುದು. ರೀಹ್ಯಾಬಿಲಿಟೇಷನ್ ಬಗ್ಗೆ ಹೇಳುತ್ತಿದ್ದೇನೆ. 1980ನೇ ಇಸವಿಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಯಿತು. ಇದರ ಬಗ್ಗೆ ನಾನು ಸದನದಲ್ಲಿ ಪ್ರಶ್ನೆ ಹಾಕಿದಾಗ ಆ ಭಾಗದಲ್ಲಿ ರಸ್ತೆ ಮಾಡಬೇಕೆಂದಿದ್ದೇವೆಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ರಸ್ತೆ ಮಾಡಬೇಕೆಂದು ಒಪ್ಪಿಕೊಳ್ಳುವುದು ನಿಜ. ಇದರ ಬಗ್ಗೆ ಶ್ರೀಮಾನ್ ದೇವೇಗೌಡರೂ ಕೂಡ ಉತ್ತರ ವನ್ನು ಕಳುಹಿಸಿದ್ದಾರೆ. ಇದಕ್ಕೆ ಒಟ್ಟು 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಿದ್ದು ಈಗಾ ಗಲೇ 1.8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನುಳಿದ ಹಣವನ್ನು ಖರ್ಚು ಮಾಡಿ ಆ ರಸ್ತೆಯಲ್ಲಿ 5 ಬ್ರಿಡ್ಜ್‌ಗಳನ್ನು ಮಾಡಿದ್ರೆ ಆದರೆ, ನೆರೆ ಹಾವಳಿಯಿಂದ ತಪ್ಪಿಸಿಕೊಳ್ಳಲು ಅನುಕೂಲ ವಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಡಗಾನ್ ಎಂಬ ಹೊಳೆ ಇದೆ. ಆ ಹೊಳೆಗೆ ಸಣ್ಣ ಕಾಸ್ವೆ ಯನ್ನು ಬ್ರಿಟಿಷ್ ಕಾಲದಲ್ಲಿ ಕಟ್ಟಿದಂತಹದ್ದು ಬಹಳ ಚೆನ್ನಾಗಿ ಇದೆ. ಹಾಗೂ ಭದ್ರವಾಗಿದೆ. ಆದರೆ ಆ ಭಾಗದಲ್ಲಿ ನೆರೆ ಹಾವಳಿ ಬಂದಾಗ ಆ ಕಾಸ್ವೆ ಮೇಲೆ 3 ರಿಂದ 5 ಅಡಿಗಳವರೆಗೆ ನೀರು ನಿಲ್ಲುತ್ತದೆ. 1982ರಲ್ಲಿ ನೆರೆಹಾವಳಿ ಬಂದು ಆ ಬ್ರಿಡ್ಜ್‌ನ ಮೇಲೆ ನೀರು ನಿಂತಿದ್ದ ಸಮಯದಲ್ಲಿ ನಮ್ಮ ಕಣ್ಣೆದುರಿಗೇ 3–4 ಲಾರಿಗಳು ದಾರಿತಪ್ಪಿ ಸಂಪೂರ್ಣವಾಗಿ ಡ್ಯಾಮೇಜ್ ಆಯಿತು. ಈ ರೀತಿಯ ಪರಿಸ್ಥಿತಿಯನ್ನು ಸ್ಥಳೀಯ ಅಧಿಕಾರಿಗಳೂ ಗಮನಿಸಿದ್ದಾರೆ. ತಾವು ಕಂಡಂತಹ ವಿಷಯವನ್ನು ಆ ಅಧಿಕಾರಿಗಳು ಸರ್ಕಾರಕ್ಕೆ ಏಕೆ ತಿಳಿಸಿಲ್ಲ ? ಅಲ್ಲೇ ಬ್ರಿಡ್ಜನ್ನು ಕೂಡಲೇ ನಿರ್ಮಾಣ ಮಾಡಬೇಕು. ಇದರ ಬಗ್ಗೆ ಅಧಿಕಾರಿಗಳು ವರದಿಯನ್ನು ಇದುವರೆವಿಗೂ ಸರ್ಕಾರಕ್ಕೆ ಕಳುಹಿಸದಿದ್ದರೆ, ತಕ್ಷಣ ತರಿಸಿಕೊಂಡು ಆ ಕೆಲಸವನ್ನು ಮಾಡಬೇಕು. ಇನ್ನೂ ಕೆಲವು ವಿಚಾರಗಳು ಹೇಳುವಂತಹವು ಇವೆ. ಇನ್ನು ಒಂದೆರಡು ನಿಮಿಷಗಳಲ್ಲೇ ಮುಗಿಸುತ್ತೇನೆ. ಶ್ರೀಮಾನ್ ಲಕ್ಷ್ಮಯ್ಯನವರು ಮಾತನಾಡುವಾಗ ನಾನು ಎದ್ದು ಎದ್ದು ನಿಲ್ಲುತ್ತಿದ್ದೆ. ಆದರೆ ನಾನು ಮಾತನಾಡುವಾಗ ಅವರು ಬಹಳ ಸಹಕಾರ ಕೊಟ್ಟಿದ್ದಾರೆ. ಇನ್ನೂ ಅನೇಕ ಜನ ಹಿರಿಯ ಸದಸ್ಯರು ಮಾತನಾಡುವವರಿದ್ದಾರೆ. ಕಿರಿಯ ಸದಸ್ಯನಾದ ನನಗೆ ಸದನದ ಎಲ್ಲ ಸದಸ್ಯರೂ ಸಹಕಾರ ಕೊಟ್ಟಿದ್ದಾರೆ. ಇಷ್ಟು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

4-30 p.m.

* Sri R. S. Mane (Belgaum).––Mr. Speaker Sir, these days the burning topic is the plight of the agriculturists in our State. In the month of June, on 27th there was a heavy rainfall in our Belgaum district which caused damage to the crop, soil, houses and cattle of the agriculturists. The Hon. Minister for Revenue paid a visit to the affected area and has personally witnessed the extent of loss occurred. According to us, the loss sustained by the agriculturists was to the tune of Rs. two crores or so. The Revenue Department concerned in the District has also estimated the loss to the tune of Rs. 90 lakhs. We lodged a claim request to the Hon. Chief Minister on 6th July, 1983 and we were informed that the matter was being considered on top priority. But, very strangely nothing has been done so far in that behalf. The agriculturists who are on the point of perishing have not been given any help except a paltry hum of Rs. 500/- or so. Their demand still stands unsettled.

There is a Nala known as 'Bellary Nala' which passes through the City of Belgaum. It has not been repaired since long. There are two sub-nalas joining this main Bellary Nala, namely (i) Lendi-nala and (ii) Jakkalhondanala and they require construction in cement. Only cement plastering has been done to these two sub-nalas. The flood that is there in Bellary Nala will not be avoided. Every year, it is causing heavy loss to the farmers.

Then coming to the Land Grants to the agriculturists by way of occupancy rights before the Tenancy Tribunals, it has been

stated in the report that a major portion of the applications under section 48 of the Karnataka Land Reforms Act has been disposed of. I was told that still 37,000 writ Petitions are pending at the High Court level. Sir, there is no time limit within which they can be disposed of. Therfore, I would like to suggest to the concerned Minister to establish or give powers to the District Courts at the district level, as appellate courts for disposiug of these petitions. I would request the government to take a decision in this behalf and forthwith transfer these writ petitions to District Judges who are many in number. It is likely that they would dispose of these writ petitions very speedily. Unless this is done, the present position cannot be improved.

Then Sir, the Revenue Department is incurring huge expenditure on Karnataka Revenue Appellate Tribunals. These Tribunals sit every month. There are three branches of these Karnataka Revenue Appellate Tribunal i,e., (i) Co-operative Branch, (ii) Revenue Branch and (iii) Commercial Tax Branch. These Branches sit every month in Belgaum district every month for North region. Enormous expenditure is being incurred towards the travelling allowance and dearness allowance of the Judges and the concerned staff of these Tribunals. Therefore, I suggest the Government that a permanent Bench be established at a Central place in the North region. A centrally located place should be chosen so that no inconvenience could be caused to the litigants.

Then it is stated here in the Report about the Compensation being given to the land owners who have lost their lands because of the Provisions of the Karnataka Land Reforms Act. This compensation is not being speedily paid up in our part. This work is entrusted to the concerned Tahsildars. But, my experience is that that the claimants are being sent home on flimsy grounds. When a party has an Order in his possession, legitimately he is entitled to receive the compensation amount. It is not fair on the part of the officers concerned to ask the party to produce Record of Rights again. This is a very funny position. Similar is the situation in case of payment of compensation under the Land Acquisition Act. Years after, when the claimant goes to the authority, they ask the party to produce record of rights every now and then. It is unnecessary to ask the parties to produce record of rights when an official order has been passed. I request the Hon. Minister to see that the persons who have lost their lands by virtue of law should be paid compensation expeditiously without any loss of time.

As regards the Survey, I have to say that particularly in Belgaum, there are no survey maps. When asked for certified copy of the map, persons are receiving letters from the Department stating that the copy cannot be supplied for want of Survey Maps This is a very serious matter. A Revenue Unit without Survey Maps is not a Revenue Unit at all. I request the Government to see that the Survey Maps are prepared, if they are not found there

in the office and survey the areas which have not been surveyed.

Coming to the Demands of the Revenue Ministry, as regards Stamp and Registration charges etc. on the Heads, I am to say that in Democracy justice has to be administered at the doors of the litigant. Therefore, there is a practice in other States to establish Circuit Courts so that one Court can go from Taluka or sub-divisions of taluka to taluka to administer justice there. At the same time, justice should be made available at less price. But, our State is the costliest State so far as the administration of justice is concerned. A Poor man who has to get a decree for Rs. 100/- has to spend more then Rs. 30/- since the Court fee rate is fixed at 10%. According to me it is very heavy. There is no concession in court fee, if the claim is higher. Our State originally adopted Bombay Court Fees Act had a practice to fix the court fee at a maximum after a particular claim. In Maharashtra, the court fee is leviable at 10% so far as the lower claims are concerned but there is a slab. Therefore, court fee of 10% fixed long back deserves to be reviewed and suitable changes made therein and a maximum court fee of Rs. 50/- should be levied irrespective of the claim involved in the litigation. Otherwise, for a suit of Rs. 10 lakhs, the Government are recovering Rs. one lakh towards court fees and this directly hits the agriculturists. My experiance is that about 60% of the suits filed in Civil courts involve money claims by the nationalised banks and co-operative banks and other scheduled banks against the agriculrurists, because the agriculturists fail to re-pay the loans and therefore the banks file suits against the agriculturists. The court fees in these civil suits fall on the heads of litigant agriculturists and therefore my suggestion is that the rate of court fee should be reduced considerably.

As regards the Stamp duty, there is an exemption in case of co-operative banks or co-operative societies to the extent of Rs. 5,000/- If a loan upto Rs. 5,000/- is raised then that document is not subjected to stamp duty at all. This should be changed. There has been a persistent demand in this behalf. Exemption shonld be extended upto Rs. 15,000/- because the limit of Rs. 5,000/- fixed for exemption of the Stamp duty was introduced long back and there is devaluation of Rupee. Therefore my suggestion is that the limit for exemption of Stamp duty should be enhanced upto Rs. 15,000/- atleast, under the Co-operative Societies Act. Also under the same Act, court fee is recoverable on Succession certificates is also very important because stamp duty at the flat rate of 5% is levied on Succession certificates. This is unjust and deserves to be reduced. Why I am saying this is because I have come across a case where some person had kept Rs. 30,000/- in the Bank in the hope of getting some money by way of interest. Unfortuntely he died after six months and his legal representatives had to pay Rs. 1450/- towards Stamp duty, they had to pay court fees, typing charges, miscellaneous charges and thus the legal representatives were subjected to heavy

expenditure for getting the succession certificate. So, I request the Hon'ble Minister for Revenue to consider this point very seriously and ensure that the Succession certificates are exempted from the Stamp duty under the Co-operative societies Act. Also there is a provision that if the debt or security is to the tune of Rs. 500/- then the Succession certificate should not be insisted upon by the Co-operative societies. This also needs to be changed. The limit of Rs. 500/- should be increased to Rs. 5,000/- and succession certificate should not be insisted upon and the concerned Managing Committee of the societies should be given power to transfer the deposit to the legal representatives of the deceased. Otherwise, this would cause great hardship to the legal representatives of the deceased.

Coming to the question of the Karnataka rent Control Act, there is an opportunity to the Government to lavy more court fee and check the frivolous applications by the landlords for possession of their houses from the tenants. The landlords are just paying Rs. 10/- towards court fee and going to the courts seeking possession of the houses from the tenants. This court fee should be enhanced to Rs. 100/- in order to check frivolous applicarions by the landlords for possession of the house from the tenants. I therefore suggest to the Hon'ble Minister for Revenue that this court liable on Petitions for possession of the houses under the Karnataka Rant Control Act must be increased to Rs. 100/-. Similarly Stamp duty payable on partition deeds and gift deeds also requires to have a review. Gifts and partitions are transfers between the families and generally no money passes to the donee from the donor. So far as the partition is concerned, no money transaction takes place. Only family properties, I do not understand as to way these gift deeds and stamp deeds should be levied with Stamp duty. To avoid the Stamp duty, concerned persons create a document known as Memorandum of Partition and under law the Memorandum of Partition is exempted from the Stamp duty and therefore false documents are created in order to avoid Stamp duty. This should be avoided by excmpting the parition deeds and gift deeds from the payment of stamp duty. I would therefore, suggest to the Government that the deeds like gift deeds, partition deeds etc., should be exempted fromt he Stamp duty.

The other points have been covered by my hon'ble friends. One suggestion was made by my *collegue Dr. V. S. Acharya, to establish Flood Relief Committees. I duly endorse his views and suggest to the Government to establish such Flood Relief Committees so that the people affected by floods be given relief.

With this I conclude my speech and thank the Chair, for having given me an opportunity to speak.

---

* Indicates that remarks of speeches have not been revised by the member concerned.

4-40 p.m.

ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಐದು ಬೇಡಿಕೆಗಳನ್ನು ಇಟ್ಟಿದ್ದಾರೆ. ನಮ್ಮ ಪಕ್ಷದ ವತಿಯಿಂದ ಕೆಲವು ಅಂಶಗಳನ್ನು ಕೆಲವು ಸದಸ್ಯರು ಹೇಳಿದ್ದಾರೆ. ನಾನೂ ಸಹ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಭೂಸುಧಾರಣೆಯ ಬಗ್ಗೆ ಇಲ್ಲಿ ಒಂದು ಮಾತನ್ನು ಇವರು ಹೇಳಿದ್ದಾರೆ. "The implementation of land reforms continued with vigour" ಆದರೆ ನನ್ನ ಅಭಿಪ್ರಾಯದಲ್ಲಿ 'ವಿಗರ್' ಎನ್ನುವುದು ಕಂಪ್ಲೀಟ್ ಆಗಿ ಹೋಗಿದೆ. 'ವಿಗರ್' ಎನ್ನುವುದು ಇಲ್ಲವೇ ಇಲ್ಲ, ಇಲ್ಲಿ ಒಂದು ಭಾವನೆ ಏನು ಬರುತ್ತದೆ ಎಂದರೆ ಇಂಪ್ಲಿಮೆಂಟ್ ಆಫ್ ಲ್ಯಾಂಪ್ ರಿಫಾರಂಸ್ ಮಟ್ಟಿಗೆ ಏನು ಮಾಡಬೇಕೋ ಅದೆಲ್ಲವನ್ನು ಸರ್ಕಾರ ಮಾಡಬೇಕಾಗಿತ್ತು ಇನ್ನು ಏನೂ ಮಾಡಲಿಕ್ಕೆ ಏನೂ ಇಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಇದು ತೀರಾ ವಸ್ತುಸ್ಥಿತಿಗೆ ವಿರುದ್ಧವಾಗಿದೆ. ಹೈಕೋರ್ಟಿನಲ್ಲಿ ಕೇಸುಗಳು ಎಷ್ಟು ಬಾಕಿ ಇವೆ ಎಂದು ನೋಡಿದರೆ ಇಲ್ಲಿ ಸರ್ಕಾರದವರೇ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಇಷ್ಟು ಕೇಸಸ್ ಹೈಕೋರ್ಟಿನಲ್ಲಿರುವಾಗ ಈ ಕೇಸುಗಳು ಹಿಂದೆ ಬಂದರೆ ಅಂದರೆ ರಿಮ್ಯಾಂಡ್ ಆದರೆ ಹೇಗೆ. ಕೆಲವು ಕಡೆಗಳಲ್ಲಿ ಟ್ರಿಬ್ಯುನಲ್ಸ್ ಇಲ್ಲ. ಮಾತ್ರವಲ್ಲ, ಟ್ರಿಬ್ಯುನಲ್ಸ್ ಇದ್ದ ಆಫೀಸುಗಳಿಗೆ ಹೋಗಿ ಹಿಂದಿನ ಟ್ರಿಬ್ಯುನಲ್ ಅವಾರ್ಡ್ ಕಾಪಿ ಕೊಡಿ ಅಂದರೆ ಆ ಕಾಪಿ ಕೊಡುವುದಕ್ಕೆ ಯಾರೂ ಆಫೀಸರು ಇಲ್ಲ, ಯಾರೂ ಇಲ್ಲ. ಇದಕ್ಕೆ ಕಾರಣವೇನೆಂದರೆ, ಭೂಸುಧಾರಣೆ ಬಗ್ಗೆ ಎಲ್ಲಾ ಮುಗಿಸಿದ್ದೇವೆ ಎಂಬ ಭಾವನೆ ಇದೆ, ಈ ಒಂದು ಭಾವನೆ ಸರ್ಕಾರದ ತಲೆಯಲ್ಲಿ ಇರುವುದು ಸರಿಯಲ್ಲ. ಇದರಲ್ಲಿ ನನ್ನ ಅಭಿಪ್ರಾಯ ಏನೆಂದರೆ, ಆಕ್ಯುಪೆನ್ಸಿ ರೈಟ್ ಮತ್ತು 16–16 ಕಂತುಗಳಲ್ಲಿ ಪರಿಹಾರ ಕೊಡಬೇಕು ಎಂದು ಹಿಂದಿನ ಲ್ಯಾಂಡ್ ರಿಫಾರ್ಮ್ಸ್‌ನಲ್ಲಿತ್ತು. ಉದಾಹರಣೆಗೆ ಹೇಳುವುದಾದರೆ, ನನ್ನ ಹೆಸರಿನಲ್ಲಿ ಭೂಮಿ ಆಗಿದೆ, ಅವಾರ್ಡ್ ಸಿಕ್ಕಿದೆ, ಅದಕ್ಕೆ ನಾನು ಒಂದೇ ಸಲ ಕಾಂಪನ್ಸೇಷನ್ ಕೊಡುತ್ತೇನೆ, ಕೊಟ್ಟಕೂಡಲೇ ನನಗೆ ಅದರ ಹಕ್ಕುಪತ್ರ ಕೊಡಬೇಕೋಬೇಡವೋ. ಆದರೆ ಈಗ ಇರುವುದು ಏನು ? ಆಕ್ಯುಪೆನ್ಸಿ ರೈಟ್ ನಿನಗೆ ಇದೆ ಎಂದು ಹೇಳುತ್ತಾರೆ. ಆದರೆ ನನಗೆ ಓನರ್‌ಶಿಪ್ ಇವತ್ತಿಗೂ ಕೂಡ ಇಲ್ಲ. ಇದರ ಬಗ್ಗೆ ಸರ್ಕಾರ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಮತ್ತೆ ಸೀಲಿಂಗ್‌ನಲ್ಲಿ 2 ಲಕ್ಷದ 96 ಸಾವಿರದ 44 ಎಕರೆ ರಿಕವರಿ ಮಾಡಿದ್ದೇವೆ, 1 ಲಕ್ಷದ 4 ಸಾವಿರದ 361 ಏಕರೆ ಅಕ್ವೈರ್ ಮಾಡಿದ್ದೇವೆಂದು ಹೇಳಿದ್ದಾರೆ. ಅಂದರೆ ಈ ಸೀಲಿಂಗ್ ಮಾಡಿರುವುದನ್ನು ನಾನು ಒಪ್ಪುವುದಿಲ್ಲ. ಬೇನಾಮಿಯಾಗಿ ಲಕ್ಷಾಂತರ ಎಕರೆ ಇದೆ. ಸಮಗ್ರ ಭೂಸುಧಾರಣೆ ಆದರ್ಶಮಯವಾದ ಭೂಸುಧಾರಣೆ ಎಂದು ಹೇಳುತ್ತಾರೆ. ಕರ್ನಾಟಕದಲ್ಲಿ ಭೂಸುಧಾರಣೆಯಿಂದ ಸಾಮಾನ್ಯವಾಗಿ ಭೂಮಿ ಇಲ್ಲದವರಿಗೆ ಭೂಮಿ ಸಿಗುತ್ತದೆ ಎನ್ನುವ ಅಭಿಪ್ರಾಯ ಇತ್ತು. 2 ಲಕ್ಷದ 96 ಸಾವಿರ ಎಕರೆ ಮಾತ್ರ ಇದೆ, ಆದರಲ್ಲಿ 50 ಪರ್ಸೆಂಟ್ ಮಾತ್ರ ಸರ್ಕಾರ ಅಕ್ವೈರ್ ಮಾಡಿದ್ದು, ಅದರಲ್ಲಿ ಒಂದು ಲಕ್ಷ ಚಿಲ್ಲರೆ ಕೊಟ್ಟಿದ್ದು ಅಂದರೆ, ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಿದಹಾಗೆ ಇಲ್ಲ ಎಂದು ಹೇಳುತ್ತೇನೆ. ಭೂಸುಧಾರಣಾ ಕಾನೂನಿನ ಇಂಪ್ಲಿಮೆಂಟೇಷನ್ ಅಂದರೆ, ಟ್ರಿಬ್ಯುನಲ್ ಕೆಲಸ ಮುಗಿಯಿತು ಅಂದರೆ ಇವತ್ತು ಎಲ್ಲಾ ಆಫೀಸರ್ಸ್ ಒಪ್ಪುತ್ತಾರೆ, ನಾನೂ ಒಪ್ಪುತ್ತೇನೆ. ಹಿಂದಿನ ಸರ್ಕಾರದ್ದು ಒಂದು ಆರ್ಡರ್ ಬಂತು. ಏನೆಂದರೆ, ಡಿಸೆಂಬರ್ 82 ರೊಳಗೆ ಎಲ್ಲಾ ಟ್ರಿಬ್ಯುನಲ್ಸ್ ಚುಕ್ತಾ ಮಾಡಬೇಕು ಎಂದು. ಈಗ ಎಲ್ಲಾ ಫೈಸಲ್ ಮಾಡಿಬಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಇದೆಲ್ಲಾ ಬಹಳ ದೊಡ್ಡದಾಗಿ ನಡೆಯಿತು. ಒಂದು ಟ್ರಿಬ್ಯುನಲ್ ಒಂದು ದಿವಸದಲ್ಲಿ 26–27 ಕೇಸುಗಳನ್ನು ಡಿಸ್ಪೋಸ್ ಆಫ್ ಮಾಡಿದೆ ಅಂದರೆ ಎಷ್ಟರಮಟ್ಟಿಗೆ ಆಗಿದೆ ಎಂದು ತಿಳಿದುಕೊಳ್ಳಿ. ವಾದಿ ಪ್ರತಿವಾದಿಯ ವಿಚಾರಣೆ ಮಾಡಲಿಲ್ಲ, ತನಿಖೆ ಮಾಡಲಿಲ್ಲ, ಎಲ್ಲಾ ಡಿಸ್ಪೋಸ್ ಆಫ್ ಮಾಡಿದೆ. ಇದೆಲ್ಲಾ ಡಿಸ್ಪೋಸ್ ಆಫ್ ಆದದ್ದು ಬರೀ ಹಣದ ವ್ಯವಹಾರದಲ್ಲಿ. ನಾನು ಏಕೆ ಹೇಳುತ್ತಿದ್ದೇನೆಂದರೆ, ಜನರು ಸರ್ಕಾರವನ್ನು ಬದಲಾವಣೆ ಮಾಡಿದ್ದಾರೆ, ಬದಲಾವಣೆ ಮಾಡುವಾಗ ಲಕ್ಷಾಂತರ ಜನರು ತಮಗೆ ಆದಂಥ ಅನ್ಯಾಯವನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಆ ಆಜ್ಞೆಯನ್ನು ಸರಿಪಡಿಸಬೇಕು ಎಂದು ಇದ್ದರೆ, ಲ್ಯಾಂಡ್ ರಿಫಾರ್ಮ್ಸ್ ಇಂಪ್ಲಿಮೆಂಟೇಷನ್ ಇನ್ನೇನೂ ಇಲ್ಲ ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಬಹಳ ದ್ರೋಹವಾದೀತು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಹೈಕೋರ್ಟ್ ಪಿಟಿಷನ್ ಬಗ್ಗೆ ಒಂದು ಸೆಲ್ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಆ ಸೆಲ್ ಏನು ಕೆಲಸ ಮಾಡುತ್ತದೋ ಕಾಣುವುದಿಲ್ಲ. ಆದುದರಿಂದ ಈ ಬಗ್ಗೆ ಹೆಚ್ಚು ತೀವ್ರವಾದ ಕೆಲಸ ಮಾಡಬೇಕು. ಇನ್ನು ನಮ್ಮ ರಾಜ್ಯದಲ್ಲಿ ಕೆಲವು ಆರ್ಡರ್ಸನ್ನು ಕೊಟ್ಟಿದ್ದಾರೆ. ಈಗ ದರಖಾಸ್ತು ಭೂಮಿ ಎಂದು ಇದೆ, ಅದು ಸರ್ಕಾರದ ಭೂಮಿ. 1978ರ ಮೊದಲು 1958ರಿಂದ ಅಂದರೆ 20 ವರ್ಷಗಳಿಂದ ಲಕ್ಷಾಂತರ ಜನರು ಈ ಸರ್ಕಾರಿ ಭೂಮಿಯಲ್ಲಿ ಕೃಷಿ ಮಾಡುತ್ತಾ ಇದ್ದಾರೆ. ಅವರಿಗೆ ಅಂದರೆ 1978ರಿಂದ ಆಕ್ಯುಪೇಷನಲ್ಲಿದ್ದವರಿಗೇ ಗ್ರಾಂಟ್ ಮಾಡಬೇಕು, ಆ ಡೇಟಿನಿಂದ ಹಕ್ಕುಪತ್ರ ಕೊಡಬೇಕು ಎಂದು ಸರ್ಕಾರದಿಂದ ಸರ್ಕ್ಯುಲರ್ ಬಂದಿತ್ತು. ಆದರೆ ಇವತ್ತು ನಾವು ಅಲ್ಲಿನ ತಾಲ್ಲೂಕು ಆಫೀಸುಗಳಿಗೆ ಹೋದರೆ ನಮ್ಮ ರಿಕಾರ್ಡ್ಸ್‌ನಲ್ಲಿ ಅಂತಹ ಲ್ಯಾಂಡ್‌ನಲ್ಲಿ ಯಾರೂ

ಇಲ್ಲ ವಿಂದು ಹೇಳುತ್ತಾರೆ. ಆಗ ನಾವು ಒಂದು ಡೆಮಾನ್‌ಸ್ಟ್ರೇಷನ್ ತೆಗೆದೆವು ; ದಾಖಲೆ ತೋರಿಸಿದೆವು. ಪುತ್ತೂರು, ಬೆಳ್ತಂಗಡಿ ಮತ್ತು ಸುಳ್ಯ–ಈ ಮೂರು ತಾಲ್ಲೂಕುಗಳಲ್ಲಿ ಸಾವಿರಾರು ಮಂದಿ 10–15–20 ವರ್ಷಗಳಿಂದ ಕೃಷಿ ಮಾಡುತ್ತಾ ಇದ್ದಾರೆ, ಹಳೇ ರಿಕಾರ್ಡ್ಸ್‌ನಲ್ಲಿ ಸರ್ಕಾರಕ್ಕೆ ಫೈನ್ ಕೊಟ್ಟದ್ದು ಇದೆ ಎಂದು ಬೇರೆ ಬೇರೆ ರೀತಿಯಲ್ಲಿ ಪ್ರೂಫ್‌ಮಾಡಿ ತೋರಿಸಿ ಈ ಭೂಮಿ ನಮ್ಮ ವಶದಲ್ಲಿದೆ ಎಂದು ತೋರಿಸಿದರೂ ಇದರ ಬಗ್ಗೆ ತಾಲ್ಲೂಕಾಫೀಸಿನ ರಿಕಾರ್ಡ್‌ನಲ್ಲಿ ಏನೂ ಇಲ್ಲದೇ ಇರುವುದರಿಂದ ಅವರು ಯಾರಿಗೂ ಕ್ಲೈಂ ಇಲ್ಲ ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ಆಚಾರ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು 1983 ಜನವರಿ 9 ರಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಯಾವಾಗ ಚಾರ್ಜ್ ತೆಗೆದು ಕೊಂಡು ಆ ತಾರೀಖಿನವರೆಗೆ ಯಾರು ಆಕ್ಯುಪೇಷನ್ ಮಾಡಿಕೊಂಡು ಕೃಷಿ ಮಾಡುತ್ತಿದ್ದರು ಅವರಿಗೆಲ್ಲಾ ನೋಟೀಸ್ ಕೊಡಬೇಕು ಅಥವಾ 1980ರ ಮೊದಲು ಯಾರು ಕೃಷಿ ಮಾಡುತ್ತಿದ್ದರೋ ಅವರಿಗೆ ನೂರಕ್ಕೆ 99 ರಷ್ಟು ಮಂದಿ ಅಂದರೆ ಯಾರು ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಎಂದು ಹೇಳುತ್ತೇವೋ, ಯಾರನ್ನು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳುತ್ತೇವೋ ಅಂತಹ ಆಕ್ಯುಪೈ ಮಾಡಿದ ಜನರಿಗೆ ಹಕ್ಕುಪತ್ರ ಕೊಡಬೇಕು. ಇದು ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಇನ್‌ವಾಲ್ವ್ ಆಗಿದೆ ಎಂದು ಹೇಳಿದರೆ ಅದೆಲ್ಲಾ ಇಂಪ್ಲಿಮೆಂಟೇಷನ್ ಮುಗಿದಿದೆ ಎಂದು ಉತ್ತರ ಕೊಟ್ಟರೆ ಕಷ್ಟವಾಗುತ್ತದೆ.

ಇನ್ನು ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಇದರಲ್ಲಿ ಸರ್ಕಾರಕ್ಕೆ ಮೋಸ ಆಗುತ್ತಾ ಇದೆ. ಇದರಿಂದ ಸರ್ಕಾರಕ್ಕೆ ಮೋಸವಾದರೂ ಸರ್ಕಾರ ಆ ಕಡೆ ಗಮನಕೊಡುವುದಿಲ್ಲ. ಕೋಟಿಗಟ್ಟಲೆ ಸ್ಟ್ಯಾಂಪ್ ಡ್ಯೂಟಿ ಹಣ ಸರ್ಕಾರಕ್ಕೆ ಸಿಕ್ಕುವುದಿಲ್ಲ. ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತಿದೆ ಎಂದು ಹೇಳುವದು ಮಾತ್ರವಲ್ಲ ಜನರಿಗೂ ಕೂಡ ಬಹಳ ದೊಡ್ಡ ಅನ್ಯಾಯವಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಅರ್ಬನ್ ಸೀಲಿಂಗ್ ಆಕ್ಟ್ ಏನಿದೆ ಆ ಆಕ್ಟಿನ ಪರ್‌ವ್ಯೂ ಒಳಗಿದ್ದಂಥ 49 ಸೆಂಟ್ಸ್‌ಗಿಂತ ಹೆಚ್ಚು ಇದ್ದ ಭೂಮಿಯನ್ನು ಅಕ್ವೈರ್ ಮಾಡುತ್ತೇವೆ ಅದನ್ನು ಕನ್‌ಫರ್ಮ್ ಮಾಡಿ ಕಾಂಪನ್ಸೇಷನ್ ಕೊಡುತ್ತೇವೆ ಎಂದು ಹೇಳಿದರು. ಯಾವ ರೇಟಿನಲ್ಲಿ ಕಾಂಪನ್ಸೇಷನ್ ಕೊಡುತ್ತೀರಿ ಅಂದರೆ ಅಡ್ಜ ಸೆಂಟ್ ಭೂಮಿ ಯಾವ ರೇಟಿಗೆ ಮಾರಾಟವಾಗಿದೆಯೋ ಅಷ್ಟು ಕೊಡಬಹುದೆಂದು ಹೇಳಿದರು. ರಿಜಿಸ್ಟರ್ ಆಫೀಸಿನಲ್ಲಿ ನೋಡಿದಾಗ ಬಹಳ ಕಡಿಮೆಗೆ ಮಾರಾಟವಾಗಿದೆ.

5 p.m.

ಇನ್ನು ವಿಡೋಸ್‌ಗೆ 2, 3 ಎಕರೆ ಜಮೀನು ಇರುತ್ತದೆ 40 ಸೆಂಟ್ಸ್ ಇರತಕ್ಕಂಥವರನ್ನು ಕೂಡ ಈ ಅಥಾರಿಟಿ ಇಂದು ತೆಗೆದುಹಾಕಿ ಬಿಟ್ಟಿದ್ದೀರಿ. ಇದರಿಂದ ಅವರಿಗೆ ಎಷ್ಟು ಕಾಂಪನ್‌ಷೇಷನ್ ಡಿಕ್ಲೇರ್ ಮಾಡಿದ್ದೀರಿ ಎಂದರೆ 300, 400 ರೂಪಾಯಿಗಳು ಸಿಗುತ್ತಿದೆ. ಇದಕ್ಕೆ ಕಾರಣವೇನೆಂದರೆ 1 ಸೆಂಟ್ಸ್ ಭೂಮಿಗೆ 7, 8 ಸಾವಿರ ಸಿಗುವುದು ಇವರಿಗೆ 7, 8 ನೂರು ರೂಪಾಯಿಗಳು ಮಾತ್ರ ಕಾಂಪನ್‌ಸೇಷನ್ ಸಿಗುತ್ತಿದೆ ಇದಕ್ಕೆ ಕಾರಣವೇನೆಂದರೆ ಮಾರ್ಕೆಟ್ ವ್ಯಾಲ್ಯು ಎಂದು ಹೇಳುತ್ತಾರೆ. ಪಕ್ಕದಲ್ಲಿರತಕ್ಕವರು ಸ್ಟ್ಯಾಂಪ್ ಡ್ಯೂಟಿಗೋಸ್ಕರವಾಗಿ ಕಡಿಮೆಗೆ ವ್ಯಾಲ್ಯೂ ಮಾಡಿಸಿರುತ್ತಾರೆ. ಇದರಿಂದ ಅಕ್ಕಪಕ್ಕದಲ್ಲಿ ಆವರೇಜ್ ಏನಿರುತ್ತದೆಯೋ ಅಷ್ಟನ್ನು ಕಾಂಪನ್‌ಸೇಷನ್ ಎಂದು ಫಿಕ್ಸ್ ಮಾಡುತ್ತಾರೆ. ಇದರಿಂದಾಗಿ ಸರ್ಕಾರಕ್ಕೂ ಬರತಕ್ಕ ಆದಾಯ ಸೋರಿ ಹೋಗುತ್ತಿದೆ ಮತ್ತು ನಿಜವಾಗಿಯೂ ಯಾರಿಗೆ ನ್ಯಾಯವಾಗಿ ಸರ್ಕಾರದಿಂದ ಕಾಂಪನ್‌ಸೇಷನ್ ಸಿಗಬೇಕಾಗಿತ್ತೋ ಅದು ಸಿಗದೇ ಇರುವ ಹಾಗಾಗಿದೆ. ಇದು ಬಹಳ ದೊಡ್ಡ ರೀತಿಯಲ್ಲಿ ಅನ್ಯಾಯವಾಗುತ್ತಿದೆ. ಹಿಂದೆ ಮದ್ರಾಸ್ ಸರ್ಕಾರವಿದ್ದಾಗ ಜವಾನನಿಗೆ 4, 8 ಆಣೆ ಕೊಡುವ ಪದ್ಧತಿ ಇತ್ತು. ಅದು ಇವತ್ತು ಎಲ್ಲಿಯವರೆಗೂ ಹೋಗಿದೆ ಎಂದರೆ ರಿಜಿಸ್ಟ್ರಾರ್‌ರವರೆಗೂ ಹಣ ಕೊಡಲೇಬೇಕಾಗಿದೆ. ಈ ಒಂದು ಪದ್ಧತಿ ತಪ್ಪಬೇಕು ಇದು ಹಿಂದೆ ಇರಲಿಲ್ಲ. ರಿಜಿಸ್ಟ್ರಾರ್ ಆಫೀಸರ್‌ನಲ್ಲಿ ಲಂಚ ತೆಗೆದುಕೊಳ್ಳುವುದು ಇವತ್ತಿನ ದಿವಸ ಅದು ಮಾಮೂಲು ಆಗಿಬಿಟ್ಟಿದೆ, ಭ್ರಷ್ಟಾಚಾರವನ್ನು ನಿಲ್ಲಿಸುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದಂಥ ಈ ಸರ್ಕಾರ ಕೂಡ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ, ಈ ಡಿಪಾರ್ಟ್‌ಮೆಂಟಿನಿಂದ ನಮ್ಮ ಸರ್ಕಾರಕ್ಕೆ ಬಹಳ ದೊಡ್ಡ ರೀತಿಯಲ್ಲಿ ಆದಾಯ ಬರತಕ್ಕಂಥ ಇಲಾಖೆ ಆಗಿದೆ ಆದುದರಿಂದ ಇದರ ಬಗ್ಗೆ ಸರ್ಕಾರದವರು ಬಹಳ ಹೆಚ್ಚಿನ ನಿಗಾ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸ್ಕೇರ್ಸಿಟಿ ಕಂಡೀಷನ್ ರಿಲೀಫ್ ಮ್ಯಾಟರ್ಸ್ ಬಗ್ಗೆ ಹೇಳಬೇಕೆಂದರೆ ತಾವು ಇಲ್ಲಿ ಅಂಕಿ ಸಂಖ್ಯೆಗಳನ್ನು ಬಹಳ ಚೆನ್ನಾಗಿ ಕೊಟ್ಟಿದ್ದೀರಿ. 1981–82ರಲ್ಲಿ 16 ಜಿಲ್ಲೆಗಳಲ್ಲಿ ಅಭಾವವಿತ್ತು. ಅದೇ ಪರಿಸ್ಥಿತಿ ಈಗಲೂ ಮುಂದುವರಿದಿದೆಯೆಂದು ತಾವು ಇಲ್ಲಿ ಒಪ್ಪುತ್ತೀರಿ. ಆದರೆ ಈ ಅಭಾವವನ್ನು ನೀಗಿಸುವುದಕ್ಕೆ ಕ್ರಮಗಳನ್ನೇನು ಕೈಗೊಂಡಿದ್ದೀರಿ ? ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಎಷ್ಟು ಕಡೆಗಳಲ್ಲಿ ತಾವು ಬೋರ್‌ವೆಲ್‌ಗಳನ್ನು ತೆಗೆಸಿದ್ದೀರಿ? ಎಷ್ಟು ಕಡೆ ನೀವು ಫಾಡರ್‌ನ್ನು ಒದಗಿಸಿದ್ದೀರಿ? ಇನ್ನು ಫ್ಲಡ್ ಪ್ರೋನ್ ಏರಿಯಾದಲ್ಲಿ 12 ಲಕ್ಷ ಜನರಿಗೆ ಕೆಲಸಗಳನ್ನು ಒದಗಿಸಿ ಕೊಟ್ಟಿದ್ದೇವೆ, ಅದಕ್ಕೆ ಇನ್ನೂ ಹೆಚ್ಚಿನ ಹಣ ಖರ್ಚಾಗಬೇಕಾಗಿದೆ ಅದಕ್ಕೆ ಕೇಂದ್ರ ಸರ್ಕಾರದವರ ಸಹಾಯ ಬೇಕೆಂದು ಹೇಳಿದ್ದೀರಿ ನಿಜ. ನಿಮಗೆ ಸ್ವಾತಂತ್ರ್ಯ ಬಂದು 30 ವರ್ಷಗಳಾದ ನಂತರವೂ ಕೂಡ ಈ ರೀತಿ

ವರ್ಷೇ ವರ್ಷೇ ಫ್ಲಡ್ ಬರುತ್ತಿರುವುದು ಗೊತ್ತಿರುವುದರಿಂದ ಅದನ್ನು ಪರಿಹಾರ ಮಾಡುವುದಕ್ಕೆ ಪರ್ಮನೆಂಟ್ ಮೆಜರ್ಸ್‌ನ್ನು ಏನು ತೆಗೆದುಕೊಂಡಿದ್ದೀರಿ ? ಪರ್ಮನೆಂಟ್ ಕಮಿಟಿಗಳನ್ನು ತಾವು ಏತಕ್ಕೆ ಮಾಡಿಲ್ಲ ? ಏತಕ್ಕೋಸ್ಕರವಾಗಿ ಆ ರೀತಿ ತಾವು ಫ್ಲಡ್‌ಪ್ರೋನ್ ಏರಿಯಾಸ್‌ಗೆ ಒಂದು ಪರ್ಮನೆಂಟ್ ಕಮಿಟಿಗಳನ್ನು ಮಾಡಬಾರದು. ಫ್ಲಡ್ ಬಂದ ಮೇಲೆ ಅವಸರವಸರವಾಗಿ ಹಣವನ್ನು ಖರ್ಚು ಮಾಡುವುದಕ್ಕಿಂತ ಮೊದಲೇ ಮಳೆ ಬರುವುದಕ್ಕಿಂತ ಮುಂಚಿತವಾಗಿ ತಾವು ಏತಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅಲ್ಲಿ ಆಗತಕ್ಕ ಅನಾಹುತವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬಾರದು ? ಇದು ಒಂದು ಪಾಲಿಸಿ ಮ್ಯಾಟರ್ ಇದ್ದು ಇದರ ಬಗ್ಗೆ ತಾವು ಏತಕ್ಕೆ ಆಲೋಚನೆ ಮಾಡುತ್ತಿಲ್ಲ. ಫ್ಲಡ್ ಬಂದಮೇಲೆ ಹಣವನ್ನು ಖರ್ಚು ಮಾಡುವುದಕ್ಕಿಂತ ಮುಂಚಿತವಾಗಿಯೇ ಪ್ಲಾನ್ ಮಾಡಿ ಕೆಲಸ ಮಾಡಿದರೆ ತುಂಬಾ ಹಣ ಉಳಿತಾಯವಾಗುತ್ತದೆ ಆದುದರಿಂದ ಇದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ, ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳ ಬಗ್ಗೆ. ಆಡಿಟ್ ಕೊಟ್ಟಿದ್ದಾರೆ, ನಮ್ಮ ಮಂಗಳೂರಿನಲ್ಲಿ 12 ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳು ಇವೆ. ಆಡಿಟ್ ರಿಪೋರ್ಟ್ ಪ್ರಕಾರವಾಗಿ ಹಿಂದೆ ಮದ್ರಾಸ್ ಗೌವರ್ನಮೆಂಟಿನವರು ಇದ್ದಂಥ ಕಾಲದಲ್ಲಿ ಆ ಸಂಸ್ಥೆಗಳವರಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೋ ಅದನ್ನೆಲ್ಲಾ ಈಗ ವಾಪಸ್ಸು ನಮ್ಮ ಸರ್ಕಾರಕ್ಕೆ ಕೊಡಬೇಕೆಂದು ಸಂಸ್ಥೆಗಳು ಹೇಗೆ ನಡೆಯಬೇಕು ? ಹಾಗಿದ್ದರೆ ಆ ಸಂಸ್ಥೆಗಳನ್ನೆಲ್ಲಾ ಸರ್ಕಾರದವರೇ ತೆಗೆದುಕೊಡು ನಡೆಸಿ. ಅಲ್ಲಿ ಲೆಪ್ರಸಿ ಆದ ಮಕ್ಕಳಿದ್ದಾರೆ, ಅನಾಥ ಮಕ್ಕಳಿದ್ದಾರೆ ಅಂಥಾ ಮಕ್ಕಳ ಗತಿ ಏನಾಗಬೇಕು ? ಇಲ್ಲವಾದರೆ ಸರ್ಕಾರದವರೇ ಆ ಸಂಸ್ಥೆಗಳನ್ನು ವಶಕ್ಕೆ ತೆಗೆದುಕೊಂಡು ನಡೆಸಲಿ. ಇವತ್ತು ಸರ್ಕಾರವೆಂದರೆ ಕಂದಾಯ ಇಲಾಖೆ. ಯಾವುದೇ ಸರ್ಕಾರ ಬರಲಿ ಒಂದು ಹೊಸ ಕಾನೂನು ಜಾರಿಗೆ ತರುವುದು, ಅದರ ಸಾಧಕ ಬಾಧಕ ಏನೇ ಇರಲಿ, ಇವತ್ತು ಯಾವುದೇ ಆಜ್ಞೆಯನ್ನು ಸರ್ಕಾರದವರು ಹೊರಡಿಸಿದರು ಎಂದರೆ ಅದು ಡೆಪ್ಯುಟಿ ಕಮೀಷನರ್‌ರವರಿಂದ, ತಹಸೀಲ್ದಾರ್‌ರವರಿಗೆ ಬರುತ್ತದೆ. ಅನಂತರ ಕೊನೆಗೆ ವಿಲೇಜ್ ಅಕೌಂಟೆಂಟ್ ಮೇಲೆಯೇ ಆ ಭಾರ ಬೀಳುತ್ತದೆ. ಆದರೆ ವಿಲೇಜ್ ಅಕೌಂಟೆಂಟ್ ಹಳ್ಳಿಯಲ್ಲಿ ಇರುವುದೇ ಇಲ್ಲ. ಬರ್ತ್ ಸರ್ಟಿಫಿಕೇಟ್ ಆಗಲೀ, ಡೆತ್ ಸರ್ಟಿಫೀಕ್ ಆಗಲೀ ಯಾವುದಕ್ಕೇ ಆಗಲೀ ಪ್ರತಿಯೊಂದಕ್ಕೂ ವಿಲೇಜ್ ಅಕೌಂಟೆಂಟ್ ಬೇಕಾಗಿರುತ್ತಾನೆ. ಆದರೆ ಅವನು ಹಳ್ಳಿಯಲ್ಲಿ ಸಿಕ್ಕುವುದೇ ಇಲ್ಲ, ಅವನು ತಹಸೀಲ್ದಾರ್‌ರವರ ಆಫೀಸ್‌ನಲ್ಲಿ, ಇಲ್ಲವೇ ಡೆಪ್ಯುಟಿ ಕಮಿಷನರ್‌ರವರ ಆಫೀಸಿನಲ್ಲಿ ಇರುತ್ತಾನೆ. ಅವನು ವಿಲೇಜ್‌ನಲ್ಲಿ ಇರುವುದಿಲ್ಲ. ನನಗೆ ಗೊತ್ತು ಎಷ್ಟೋ ವಿಲೇಜ್ ಅಕೌಂಟ್‌ಟೆಂಟ್‌ಗಳು ಲಕ್ಷಾಂತರ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಇವತ್ತು ತಹಸೀಲ್ದಾರ್‌ರವರ ಆಫೀಸ್‌ನಲ್ಲಿ ಏನಾದರೂ ಒಂದು ರೆಕಾರ್ಡ್ ಬೇಕು ಎಂದರೆ ತಕ್ಷಣವೇ ಸಿಕ್ಕುವುದಿಲ್ಲ. ಹೊಸ ಸರ್ಕಾರ ಬಂದ ಮೇಲೆ ಏನಾದರೂ ಬದಲಾವಣೆ ಆಗುತ್ತದೆಯೇ ಎಂದರೆ ಏನೂ ಆಗಿಲ್ಲ. ಇನ್ನೂ ಬ್ರಿಟೀಷರ ಕಾಲದ ಪರಿಸ್ಥಿತಿಯಲ್ಲಿ ಇದ್ದ ಹಾಗೆಯೇ ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಇದೆ. ಯಾವುದೇ ರೆವಿನ್ಯೂ ಇಲಾಖೆಯನ್ನು ಹೋಗಿ ನೋಡಿ, ಅದು ಬ್ಯಾಂಗಳು ಇದ್ದ ಹಾಗೆ ಇರುವುದಿಲ್ಲ. ಯಾವುದೇ ಒಂದು ರೆಕಾರ್ಡ್ ಬೇಕು ಎಂದು ನಾವು ತಹಸೀಲ್ದಾರ್‌ರವರ ಆಫೀಸ್‌ಗೆ ಹೋದರೆ ಹಿಂದೆ ಇದ್ದ ಸೀನೇ ಇರುತ್ತದೆ. ಅಲ್ಲಿ ಕೂಡವುದಕ್ಕೆ ಕುರ್ಚಿ ಇರುವುದಿಲ್ಲ. ಒಂದು ಟೇಬಲ್ ಸುತ್ತ ಜನ ನಿಂತಿರುತ್ತಾರೆ. ಒಂದು ಫೈಲ್ ಮೂವ್ ಆಗಬೇಕಾದರೆ ಟೇಬಲ್‌ನಿಂದ ಟೇಬಲ್‌ನವರನ್ನು ಕಂಡು ಪೇಪರ್‌ಗಳನ್ನು ಮೂವ್ ಮಾಡಿಸಿಕೊಳ್ಳಬೇಕಾಗಿದೆ. ಆದುದರಿಂದ ಈಗಲಾದರೂ ಹೊಸ ವಿಚಾರಧಾರೆ ಇರತಕ್ಕಂಥ ಮಂತ್ರಿಗಳು ಬಂದಿದ್ದೀರಿ, ತಮ್ಮ ಕಾಲದಲ್ಲಿಯಾದರೂ ಇದನ್ನು ಬದಲಾವಣೆ ಮಾಡಿ. ತಹಸೀಲ್ದಾರ್ ಆಫೀಸ್‌ಗೆ ಬೇಕಾದರೆ ಹೊಸ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಅಲ್ಲಿ ವಿಸ್ತಾರವಾದ ಜಾಗದಲ್ಲಿ ಅವರು ಸಹ ಚೆನ್ನಾಗಿ ಕೆಲಸ ಮಾಡುವ ಹಾಗೆ ಮಾಡಿ, ಅಲ್ಲಿರತಕ್ಕ ಅಧಿಕಾರಿಗಳ ಮನೋಭಾವನೆಯನ್ನು ಸಹ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಪ್ರಜಾಪ್ರಭುತ್ವದಲ್ಲಿ ತಾವು ಒಳ್ಳೆಯ ಹೆಸರನ್ನು ಗಳಿಸಿ ಎಂದು ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. Deputy Speaker.--The House now stands adjourned to meet tomorrow at 11 O' clock.

(The House adjourned at Ten Minutes Past Five of the Clock to meet again at Eleven of the Clock on Tuesday, the 23rd August 1983.)